ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 9 ಮಂಗಳವಾರ 2022

ಸಂಪುಟ: 43 | ಸಂಚಿಕೆ: 115 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕಾಮನ್‌ವೆಲ್ತ್-2022
ಕ್ರೀಡಾಕೂಟಕ್ಕೆ ವೈಭವದ ತೆರೆ
22 ಚಿನ್ನ ಸೇರಿ ಭಾರತಕ್ಕೆ
61 ಪದಕ [ಪುಟ–7]



ವಿಘ್ನೇಶ್ವರನಿಗೆ ವಿಘ್ನ ನಿವಾರಣೆ!

●ಮುಕ್ತವಾಗಿ ಗಣೇಶಮೂರ್ತಿ ಪ್ರತಿಷ್ಠಾಪಿಸಿ, ಪೂಜಿಸಬಹುದು
●ಆದರೆ, ಕೋವಿಡ್ ಮಾರ್ಗಸೂಚಿ ಪಾಲಿಸುವಂತೆ ಸೂಚನೆ



ಬೆಂಗಳೂರು, ಆ.8(ಕೆಎಂಶಿ)–ಪರಿಸರ ಸ್ನೇಹಿ ಗಣೇಶ ವಿಗ್ರಹಗಳನ್ನು ಮುಕ್ತವಾಗಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಲು ರಾಜ್ಯ ಸರ್ಕಾರ ಹಸಿರು ನಿಶಾನೆ ತೋರಿದೆ.

ಕೋವಿಡ್–19 ಕಾರಣಾಂತರದಿಂದ ಸಾರ್ವಜನಿಕವಾಗಿ ಗಣೇಶೋತ್ಸವ ಸೇರಿದಂತೆ ಇತರೆ ಸಮಾರಂಭಗಳ ಆಚರಣೆಗೆ ಇದ್ದ ನಿರ್ಬಂಧವನ್ನು ಸಂಪೂರ್ಣ ಹಿಂತೆಗೆದುಕೊಳ್ಳಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಸಂಪುಟದ ಹಿರಿಯ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಇಂತಹ ತೀರ್ಮಾನಕ್ಕೆ ಬಂದಿದ್ದಾರೆ.

ಕೋವಿಡ್–19 ಕಾರಣದಿಂದ ಒಂದು ವರ್ಷ ಗಣೇಶೋತ್ಸವ ಹಾದಿ ಬೀದಿಯಲ್ಲಿ ಆಚರಿಸಲು ಸಂಪೂರ್ಣ ನಿರ್ಬಂಧ ಹೇರಲಾಗಿತ್ತು. ಕಳೆದ ವರ್ಷ ಹಿಂದೂ ಸಂಘಟನೆಗಳ ಒತ್ತಡಕ್ಕೆ ಮಣಿದು, ವಾರ್ಡ್‌ಗೆ ಒಂದು ಗಣೇಶೋತ್ಸವ ಆಚರಣೆಗೆ ಅನುಮತಿ ನೀಡಲಾಗಿತ್ತು. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಿಂದೂ ▶ 8ನೇ ಪುಟಕ್ಕೆ

ಮನೆಗೆ ನುಗ್ಗಿ ಮಗನ ಮುಂದೆಯೇ ರಿಯಲ್ ಎಸ್ಟೇಟ್ ಏಜೆಂಟ್ ಹತ್ಯೆ

●ಹಾಡಹಗಲೇ ಬೃಂದಾವನ ಬಡಾವಣೆಯಲ್ಲಿ ಘಟನೆ ●ರಾಡ್‌ನಿಂದ ತಲೆಗೆ ಹೊಡೆದು ಹತ್ಯೆ



ಮೈಸೂರು,ಆ.8(ಎಸ್‌ಬಿಡಿ)– ಮನೆಗೆ ನುಗ್ಗಿ ವ್ಯಕ್ತಿಯೊಬ್ಬರನ್ನು ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ಮೈಸೂರಿನ ಬೃಂದಾವನ ಬಡಾವಣೆಯಲ್ಲಿ ಸೋಮವಾರ ಹಾಡಹಗಲೇ ನಡೆದಿದೆ.

ಬೃಂದಾವನ ಬಡಾವಣೆ, 1ನೇ ಹಂತ, 7ನೇ ಕ್ರಾಸ್‌ನ ನಿವಾಸಿ ಸಂಪತ್‌ಕುಮಾರ್ (60) ಹತ್ಯೆಯಾದವರು. ಸೋಮವಾರ ಮಧ್ಯಾಹ್ನ ಸುಮಾರು 3.30ರ ವೇಳೆಯಲ್ಲಿ ಮನೆಗೆ ನುಗ್ಗಿದ ದುಷ್ಕರ್ಮಿ ರಾಡ್‌ನಿಂದ ತಲೆಗೆ ಹೊಡೆದು ಪರಾರಿಯಾಗಿದ್ದು, ರಕ್ತದ ಮಡುವಿನಲ್ಲಿ ಬಿದ್ದು, ಸಂಪತ್ ಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ರಿಯಲ್ ಎಸ್ಟೇಟ್ ಹಾಗೂ ಅಗರ ಬತ್ತಿ ವ್ಯಾಪಾರ ಮಾಡಿಕೊಂಡಿದ್ದ ಸಂಪತ್ ಕುಮಾರ್, ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿರುವ ಪತ್ನಿ ಗಾಯತ್ರಿ ಹಾಗೂ ಡಿಪ್ಲೊಮಾ ವ್ಯಾಸಂಗ ಮಾಡುತ್ತಿರುವ 16 ವರ್ಷದ ಪುತ್ರನೊಂದಿಗೆ ವಾಸವಿದ್ದರು. ಇಂದು ಎಂದಿನಂತೆ ಗಾಯತ್ರಿ ಅವರು ಶಾಲೆಗೆ ತೆರಳಿದ್ದರು. ಕಾಲೇಜಿಗೆ ತೆರಳಿದ್ದ ಪುತ್ರ, ಮನೆಗೆ ವಾಪಸ್ಸಾದ ಸಂದರ್ಭದಲ್ಲಿ ಈ ಘಟನೆ ನಡೆದಿದೆ ಎನ್ನಲಾಗಿದೆ.

ಪುತ್ರನ ಕಣ್ಣೆದುರೇ ಹತ್ಯೆ!

ಸಂಪತ್ ಕುಮಾರ್ ಅವರ ಪುತ್ರ ಕಾಲೇಜಿನಿಂದ ಮನೆಗೆ ವಾಪಸ್ಸಾಗುವ ಸಮಯದಲ್ಲೇ ಈ ಘಟನೆ ನಡೆದಿದೆ. ದುಷ್ಕರ್ಮಿಯೊಬ್ಬ ಮನೆಗೆ ನುಗ್ಗಿ ತಂದೆಯ ತಲೆ ಹಿಂಭಾಗಕ್ಕೆ ಬಲವಾಗಿ ಹೊಡೆದ. ನಾನು ರಕ್ಷಣೆಗೆ ಮುಂದಾದಾಗ ನನಗೂ ಹೊಡೆಯಲು ಬಂದ. ಭಯದಿಂದ ಕೂಗಿಕೊಂಡು ನಾನು ಹೊರಗೆ ಓಡಿ ಹೋಗಿ ನೆರೆ ▶ 8ನೇ ಪುಟಕ್ಕೆ

ಪ್ರವಾಹಪೀಡಿತ ಪ್ರದೇಶಗಳಲ್ಲಿ ಪರಿಹಾರ ಕೇಂದ್ರಗಳಿಗೆ ಬಾರದವರಿಗೆ 'ಕಾಳಜಿ ಕಿಟ್'

●ಕಂದಾಯ ಸಚಿವ ಆರ್.ಅಶೋಕ್ ಪ್ರಕಟ
●ಪರಿಹಾರ ಕೇಂದ್ರಗಳಿಗೆ ಹೋಗದೆ ಸ್ನೇಹಿತರು, ಬಂಧುಗಳ ಮನೆಯಲ್ಲಿ ತಂಗಿದವರಿಗೂ ನೆರವು



ಬೆಂಗಳೂರು, ಆ.8(ಕೆಎಂಶಿ)– ಪ್ರವಾಹಪೀಡಿತ ಪ್ರದೇಶಗಳಲ್ಲಿ ಪರಿಹಾರ ಕೇಂದ್ರಗಳಲ್ಲಿ ಉಳಿದುಕೊಳ್ಳದೇ ಇರುವವರಿಗೆ ಅಕ್ಕಿ, ಬೇಳೆ, ಅಡುಗೆ ಎಣ್ಣೆಯನ್ನು ಒಳಗೊಂಡ ಕಾಳಜಿ ಕಿಟ್‌ಗಳನ್ನು ವಿತರಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರವಾಹದ ಸಂದರ್ಭದಲ್ಲಿ ಸರ್ಕಾರ ಸ್ಥಾಪಿಸುವ ಪರಿಹಾರ ಕೇಂದ್ರಗಳಲ್ಲಿ ಉಳಿದುಕೊಳ್ಳುವ ಬದಲು ಹಲವರು ಸ್ನೇಹಿತರು, ಬಂಧುಗಳ ಮನೆಯಲ್ಲಿ ಆಶ್ರಯ ಪಡೆಯುತ್ತಾರೆ. ಹೀಗಾಗಿ ಅಂತಹವರಿಗೂ ಸಾವಿರ ರೂ ಮೌಲ್ಯದ ಕಾಳಜಿ ಕಿಟ್‌ಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು.

ಪ್ರತಿ ಕಿಟ್‌ನಲ್ಲಿ ದಿನೋಪಯೋಗಿ ವಸ್ತುಗಳಿರುತ್ತವೆ. ನೆಂಟರು, ಸ್ನೇಹಿತರ ಮನೆಗಳಲ್ಲಿ ಉಳಿದುಕೊಂಡವರಿಂದ ಅವರಿಗೂ ಭಾರವಾಗಬಾರದು ಮತ್ತು ಆ ಮೂಲಕ ಪ್ರವಾಹ ಸಂತ್ರಸ್ತರಿಗೆ ತಾವು ಅನಾಥರು ಎಂಬ ಭಾವನೆ ಬರಬಾರದು ಎಂಬುದು ಕಿಟ್ ನೀಡುವ ಉದ್ದೇಶ ಎಂದರು. ಕನಿಷ್ಠ ಹತ್ತು ದಿನಗಳಿಗೆ ಆಗುವಷ್ಟು ಆಹಾರ ಪದಾರ್ಥಗಳನ್ನು ಈ ಕಿಟ್‌ಗಳು ಒಳಗೊಂಡಿರುತ್ತವೆ. ಸರ್ಕಾರದ ಪರಿಹಾರ ಕೇಂದ್ರಗಳಲ್ಲಿ ಉಳಿದುಕೊಂಡು ಮರಳಿ ಮನೆಗೆ ಹೋಗುವವರಿಗೂ ಈ ಕಿಟ್ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು. ಇದೇ ರೀತಿ ಪ್ರವಾಸ ಸಂತ್ರಸ್ತರಿಗೆ ಕೊಡೆ, ಟಾರ್ಚು ಸೇರಿದಂತೆ ಮಳೆಯಿಂದ ಸಂರಕ್ಷಿಸಿಕೊಳ್ಳುವ ವಸ್ತುಗಳನ್ನು ನೀಡಲು ಯೋಚಿಸಲಾಗಿದ್ದು ಸದ್ಯದಲ್ಲೇ ಆ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ವಿವರ ನೀಡಿದರು. ಸರ್ಕಾರ ಸ್ಥಾಪಿಸುವ ಪರಿಹಾರ ಕೇಂದ್ರಗಳಲ್ಲಿ ಉಳಿದುಕೊಳ್ಳುವವರಿಗೆ ಪೌಷ್ಟಿಕ ಆಹಾರವನ್ನು ನೀಡಲು ಆದೇಶಿಸಲಾಗಿದ್ದು, ಅವರಿಗೆ ಉಪಾಹಾರ ಮತ್ತು ಊಟದ ಮೆನು ಹೇಗಿರಬೇಕು ಎಂಬ ಕುರಿತು ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ರಾಜ್ಯದ ಇಪ್ಪತ್ತೊಂದು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಕಂಡು ಬಂದಿದ್ದು ಸರ್ಕಾರ ಸಮರೋಪಾದಿಯಲ್ಲಿ ಪರಿಹಾರ ಕ್ರಮಗಳನ್ನು ಕೈಗೊಂಡಿದೆ. ಅದೇ ರೀತಿ ಬೆಳೆ ಹಾನಿಗೆ ಸಂಬಂಧಿಸಿದಂತೆ ನೀಡಲಾಗುವ ಪರಿಹಾರ ಧನದ ಪ್ರಮಾಣವನ್ನು ಈ ವರ್ಷದ ಮಟ್ಟಿಗೆ ಹೆಚ್ಚಳ ಮಾಡಲಾಗಿದೆ ಎಂದರು. ಈ ಬಾರಿ ಅತಿವೃಷ್ಟಿಯಿಂದ ಆಗಿರುವ ನಷ್ಟ ಎಷ್ಟು ಅನ್ನುವುದನ್ನು ಅಂದಾಜಿಸಲಾಗುತ್ತಿದ್ದು ಅದರ ವಿವರ ಬಂದ ಕೂಡಲೇ ಪರಿಹಾರ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದಂತೆ ಪರಿಹಾರ ನೀಡುವಾಗ ಮಾರ್ಗಸೂಚಿಗಿಂತ ಹೆಚ್ಚಿನ ಹಣವನ್ನು ಕಳೆದೆರಡು ವರ್ಷಗಳಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಕಳೆದ ವರ್ಷವೊಂದರಲ್ಲೇ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದೆ ಎಂದರು.

ಕಳೆದ ಸಾಲಿಗೆ ಸಂಬಂಧಿಸಿದಂತೆ 2445 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದು, ನಾವು ಕೂಡ ದೇಶದ ಎಲ್ಲ ರಾಜ್ಯಗಳಿಗಿಂತ ಹೆಚ್ಚು ಪ್ರಮಾಣದ ಪರಿಹಾರವನ್ನು ಸಂತ್ರಸ್ತರಿಗೆ ನೀಡುತ್ತೇವೆ ಎಂದು ಕಂದಾಯ ಸಚಿವರು ಸ್ಪಷ್ಟಪಡಿಸಿದರು. ಅತಿವೃಷ್ಟಿಗೆ ಸಂಬಂಧಿಸಿದ ಪರಿಹಾರ ಕಾರ್ಯಗಳಿಗೆ ಹಣದ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು, ಈ ಸಂಬಂಧ ಇರುವ ಜಿಲ್ಲಾಧಿಕಾರಿಗಳ ನಿಧಿಯಲ್ಲಿ 857 ಕೋಟಿ ರೂ. ಉಳಿದುಕೊಂಡಿದೆ ಎಂದರು. ಜಿಲ್ಲಾಧಿಕಾರಿಗಳ ನಿಧಿಗೆ ಹಣ ಪಡೆಯಲು ಹಿಂದಿನಂತೆ ಸರ್ಕಾರಕ್ಕೆ ಮನವಿ ಸಲ್ಲಿಸಬೇಕಿಲ್ಲ. ▶ 8ನೇ ಪುಟಕ್ಕೆ

ಮೈಸೂರಿಗೂ ವ್ಯಾಪಿಸಿದ ಡ್ರಗ್ಸ್ ದಂಧೆ

ಪ್ರತಿಷ್ಠಿತ ಕಾಲೇಜು ವಿದ್ಯಾರ್ಥಿ ಸೇರಿ ಮೂವರ ಬಂಧನ; 4.62 ಗ್ರಾಂ ಎಂಡಿಎಂಎ ಮಾದಕ ವಸ್ತು ವಶ

ಮೈಸೂರು, ಆ.8– ಡ್ರಗ್ಸ್ ದಂಧೆ ಸಾಂಸ್ಕೃತಿಕ ನಗರಿ ಮೈಸೂರಿಗೂ ಕಾಲಿಟ್ಟಿದೆ. ಆನ್‌ಲೈನ್ ಮೂಲಕ ವಿದ್ಯಾರ್ಥಿಗಳನ್ನು ಸಂಪರ್ಕಿಸಿ, ಅವರಿಗೆ ಎಂಡಿಎಂಎ ಮಾದಕ ವಸ್ತುವನ್ನು ಸರಬರಾಜು ಮಾಡುತ್ತಿದ್ದ ವಿದ್ಯಾರ್ಥಿ ಸೇರಿ ಮೂವರನ್ನು ಇನ್ಸ್‌ಪೆಕ್ಟರ್ ಮಲ್ಲೇಶ್ ನೇತೃತ್ವದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಇವರಿಗೆ ಬೆಂಗಳೂರಿನ ಪೆಡ್ಲರ್‌ವೊಬ್ಬ ಮಾದಕ ವಸ್ತು ಸರಬರಾಜು ಮಾಡುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದ್ದು, ಆತನ ವಿರುದ್ಧವೂ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ಪ್ರತಿಷ್ಠಿತ ಕಾಲೇಜೊಂದರ ಅಂತಿಮ ಬಿಬಿಎಂ ವಿದ್ಯಾರ್ಥಿ ಅದ್ನಾನ್ ಅಹಮ್ಮದ್ ಅಲಿಯಾಸ್ ಅದ್ನಾನ್ (21), ಎನ್‌ಆರ್ ಮೊಹಲ್ಲಾ ಎಜಿ ಬ್ಲಾಕ್‌ನ ಮೊಹಮ್ಮದ್ ತಬ್ರೇಜ್ ಅಲಿಯಾಸ್ ತಬ್ರೇಜ್ (30), ಮಂಡಿಮೊಹಲ್ಲಾದ ಷರೀದ್ ಪಾಷ ಅಲಿಯಾಸ್ ಷರೀದ್ (25) ಬಂಧಿತರಾಗಿದ್ದು, ಇವರಿಗೆ ಬೆಂಗಳೂರಿನ ಎಜಾಜ್ ಎಂಬಾತ ಮಾದಕ ವಸ್ತು ಪೂರೈಕೆ ಮಾಡಿದ್ದ ಎಂಬುದು



ವಿಚಾರಣೆ ವೇಳೆ ತಿಳಿದು ಬಂದಿದೆ.

ವಿವರ: ಮಂಡಿಮೊಹಲ್ಲಾದ ಪುಲಿಕೇಶಿ ರಸ್ತೆ, 4ನೇ ಮೇನ್‌ನಲ್ಲಿರುವ ಕರ್ನಾಟಕ ಆಟೋ ಕುಷನ್ ವರ್ಕ್ಸ್ ಮತ್ತು ಎಸ್‌ಎಪಿ ಆಟೋ ಟಿಂಕರಿಂಗ್ ವರ್ಕ್ಸ್ ಬಳಿ ಪಲ್ಸರ್ ಬೈಕ್ (ಕೆಎ09 ಇಯು 4680)ನಲ್ಲಿ ಬಂದಿರುವ ವ್ಯಕ್ತಿಗಳು ಮಾದಕ ವಸ್ತುಗಳ ವ್ಯವಹಾರ ನಡೆಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಮೇರೆಗೆ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಎಎಸ್ಐ ಆರ್.ರಾಜು, ಸಿಬ್ಬಂದಿಗಳಾದ ಎಸ್.ರವಿಕುಮಾರ್, ಡಿ.ಶ್ರೀನಿವಾಸ ಪ್ರಸಾದ್, ಅನಿಲ್, ಸುಬಾನಲ್ಲಾ ಬಾಲ್ದಾರ್, ವಿ.ರಘು ಅವರೊಂದಿಗೆ ದಾಳಿ ನಡೆಸಿದ್ದಾರೆ.

ಎಂಡಿಎಂಎ ಮಾದಕ ವಸ್ತುಗಳ ವ್ಯವಹಾರ ನಡೆಯುತ್ತಿದೆ ಎಂಬ ಮಾಹಿತಿ ಇದ್ದುದ್ದರಿಂದ ಅಲ್ಲಿಗೆ ಲಗ್ಗೆಯಿಟ್ಟ ಪೊಲೀಸರು ವ್ಯವಸ್ಥಿತವಾಗಿ ಸದರಿ ಪ್ರದೇಶದ ಎಲ್ಲಾ ಸಂಪರ್ಕ ರಸ್ತೆಗಳನ್ನು ಬಂದ್ ಮಾಡಿ, ದಾಳಿಗೆ ಮುಂದಾದರು. ಈ ವೇಳೆ ಅಲ್ಲಿದ್ದ ಮೂವರೂ ಪೊಲೀಸರನ್ನು ಕಂಡು ಓಡಲು ಯತ್ನಿಸಿದಾಗ ಬೆನ್ನತ್ತಿ ಹಿಡಿದಿದ್ದಾರೆ.

ಈ ಮೂವರ ಬಳಿ 1.04 ಗ್ರಾಂ, 1 ಗ್ರಾಂ ಮತ್ತು 2.58 ಗ್ರಾಂ ಸೇರಿ ಒಟ್ಟು 4.62 ಗ್ರಾಂ ಎಂಡಿಎಂಎ ಮಾದಕ ವಸ್ತು ಚಿಕ್ಕ ಚಿಕ್ಕ ಪ್ಯಾಕ್‌ಗಳಲ್ಲಿ ದೊರೆತಿದೆ. ಅಲ್ಲದೆ, 43,500 ರೂ. ನಗದು ಕೂಡ ಇವರ ಬಳಿ ಇತ್ತು. ಈ ವ್ಯಕ್ತಿಗಳು ಗ್ರಾಹಕರಾಗಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಸಂಪರ್ಕಿಸಲು ಬಳಸುತ್ತಿದ್ದ ಒಂದು ಐಫೋನ್ ಸೇರಿದಂತೆ ಮೂರು ▶ 8ನೇ ಪುಟಕ್ಕೆ



ಮೈಸೂರು ವಿವಿಯಲ್ಲಿ ಎಲ್‌ಎಲ್‌ಬಿ ರ‍್ಯಾಂಕ್ ಪಡೆದವರಿಗೆ 'ಶ್ರೀ ಸಿದ್ದರಾಮಯ್ಯ-75 ಅಮೃತ ಮಹೋತ್ಸವ ದತ್ತಿ' ಚಿನ್ನದ ಪದಕ



ಮೈಸೂರು,ಆ.8(ಎಸ್‌ಬಿಡಿ)- ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾನೂನು ಪದವಿ(ಎಲ್‌ಎಲ್‌ಬಿ) ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಪಡೆಯುವ ವಿದ್ಯಾರ್ಥಿಗೆ ಇನ್ನು ಮುಂದೆ 'ಶ್ರೀ ಸಿದ್ದರಾಮಯ್ಯ-75 ಅಮೃತ ಮಹೋತ್ಸವ ದತ್ತಿ' ಚಿನ್ನದ ಪದಕ ಲಭಿಸಲಿದೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 75 ವಸಂತ ಪೂರೈಸಿರುವ ಹಿನ್ನೆಲೆಯಲ್ಲಿ ಅವರ ಜನ್ಮದಿನದ ಅಮೃತ ಮಹೋತ್ಸವದ ಪ್ರಯುಕ್ತ 'ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಹೆಸರಿನಲ್ಲಿ ಮೈಸೂರು ವಿವಿಗೆ 1,05000 ರೂಗಳನ್ನು ದತ್ತಿ ನೀಡಿ, 2022-23ನೇ ಸಾಲಿನಿಂದ ಕಾನೂನು ಪದವಿಯಲ್ಲಿ ಪ್ರಥಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗೆ 'ಶ್ರೀ ಸಿದ್ದರಾಮಯ್ಯ-75 ಅಮೃತ ಮಹೋತ್ಸವ ಚಿನ್ನದ ಪದಕ' ಪ್ರದಾನ ಮಾಡಿ, ಅಭಿನಂದಿಸಲು ಕೋರಲಾಗಿದ್ದು, ಇದನ್ನು ವಿವಿ ಅನುಮೋದಿಸಿದೆ.

ಮೈಸೂರು ಜಿಲ್ಲೆಯ ಸಿದ್ದರಾಮನಹುಂಡಿ ಗ್ರಾಮದ ರೈತಾಪಿ ಕುಟುಂಬದಲ್ಲಿ ಜನಿಸಿದ ಸಿದ್ದರಾಮಯ್ಯನವರು ಕಾನೂನು ಪದವೀಧರರಾಗಿದ್ದು, ವಕೀಲರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಇದರ ನಡುವೆ ಹೋರಾಟದ ಮೂಲಕ ರಾಜಕೀಯ ಕ್ಷೇತ್ರ ಪ್ರವೇಶಿಸಿ, ಶಾಸಕರಾಗಿ, ಸಚಿವರಾಗಿ, ಮುಖ್ಯಮಂತ್ರಿಗಳಾಗಿ ಅಪಾರ ಜನಪರ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಸೈದ್ಧಾಂತಿಕ ನೆಲೆಗಟ್ಟಿನಲ್ಲಿ 45 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಪ್ರಾಮಾಣಿಕವಾಗಿ ಜನಸೇವೆ ಮಾಡಿರುವ ಇವರು 75 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ 'ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಹೆಸರಿನಲ್ಲಿ ದತ್ತಿ ನೀಡಲಾಗಿದೆ ಎಂದು ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ತಿಳಿಸಿದ್ದಾರೆ.

ಹಾವನೂರ್ ಆಯೋಗದ ಸುವರ್ಣ ಮಹೋತ್ಸವ ಆಚರಣೆ



ಮೈಸೂರು, ಆ.8-ಮೈಸೂರು ನಾಯಕರ ಪಡೆ ವತಿಯಿಂದ ನಗರದ ಸುಣ್ಣದಕೇರಿಯ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಹಾವನೂರ್ ಆಯೋಗದ ಸುವರ್ಣ ಮಹೋತ್ಸವ ದಿನವನ್ನು ಆಚರಿಸಲಾಯಿತು. ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿ ಬಳಿ ಎಲ್.ಜಿ ಹಾವನೂರ್ ಅವರ ಭಾವಚಿತ್ರಕ್ಕೆ ನಾಯಕರ ಪಡೆ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ ಪುಷ್ಪ ನಮನ ಸಲ್ಲಿಸಿ ಮಾತನಾಡಿ, 1972 ಆಗಸ್ಟ್ 8ರಂದು ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ ದೇವರಾಜ ಅರಸು ಅವರ ಕ್ರಾಂತಿಕಾರಕ ನಿರ್ಣಯದಿಂದ ಕಾನೂನು ತಜ್ಞರಾಗಿದ್ದ ಎಲ್.ಜಿ.ಹಾವನೂರ್ ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚನೆ ಮಾಡಿದರು. ಹಾವನೂರ್ ಅವರು ರಾಜ್ಯಾದ್ಯಂತ ಸಂಚರಿಸಿ 378 ಹಳ್ಳಿಗೆ ಭೇಟಿ ನೀಡಿ, ಸುಮಾರು ಮೂರೂವರೆ ಲಕ್ಷ ಜನರಿಂದ ಮಾಹಿತಿಯನ್ನು ಸಂಗ್ರಹಿಸಿ ವರದಿಯನ್ನು ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಹಿಂದುಳಿದ ವರ್ಗಗಳ ಬೈಬಲ್ ಎಂದು ಶ್ಲಾಘಿಸಿದರು. ಅಸಮಾನತೆಯ ಫಲವಾಗಿ ನೊಂದಿರುವ ಶೋಷಿತ ಬದುಕಿನ ಜೀವನ ಬಗೆಗಿನ ಆ ಮೂಲಕ ತಳ ಶೋಷಿತ ವರ್ಗಕ್ಕೆ ಕಾನೂನಿನ ಮೂಲಕ ಶಕ್ತಿಯನ್ನು ತುಂಬ ಅವರಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಿ ಧ್ವನಿ ನೀಡುವ ಮೂಲಕ ಶ್ರಮಿಸಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಸದಸ್ಯರಾದ ಲೋಕೇಶ್ ಪಿಯಾ, ದೇವಪ್ಪ ನಾಯಕ, ಸುಣ್ಣದಕೇರಿ ನಾಯಕರ ಸಂಘದ ಅಧ್ಯಕ್ಷ ಪಿ.ಸತೀಶ್, ಕಾರ್ಯದರ್ಶಿ ಬಿ.ಸಿದ್ದಪ್ಪ, ಶೇಖರ್, ನರಸಿಂಹ ನಾಗೇಶ್, ಮಹೇಶ್ ಮತ್ತಿತರರಿದ್ದರು.

ಮಳೆ ಹಾನಿ ಪ್ರದೇಶಗಳಿಗೆ ನಾಳೆಯಿಂದ ಸಿಎಂ ಪ್ರವಾಸ



ಬೆಂಗಳೂರು, ಆ.8(ಕೆಎಂಶಿ)- ಮಳೆ ಮತ್ತು ನೆರೆಗೆ ಸಿಲುಕಿ ರುವ ಪ್ರದೇಶಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರದಿಂದ ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ನಡೆಯಬೇಕಿದ್ದ ರಾಜ್ಯ ಸಚಿವ ಸಂಪುಟ ಸಭೆಯನ್ನು ರದ್ದು ಮಾಡಿರುವ ಮುಖ್ಯಮಂತ್ರಿಯವರು ಮಂಡ್ಯ ಜಿಲ್ಲೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯು ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಂತರ ಇತ್ತೀಚೆಗೆ ಪ್ರವಾಹದಿಂದ ಹಾನಿಯಾಗಿರುವ ಜಿಲ್ಲೆಯ ಪ್ರದೇಶಗಳಿಗೆ ಭೇಟಿ ನೀಡಲಿದ್ದಾರೆ ಎಂದು ಹೇಳಲಾಗಿದೆ. ಪ್ರಧಾನಿ ಮೋದಿ ಅವರು ದೆಹಲಿಯಲ್ಲಿ ಆಯೋಜಿಸಿದ್ದ ಸಭೆಗಳಲ್ಲಿ ಪಾಲ್ಗೊಳ್ಳಲು ಆ.6 ಮತ್ತು 7ರಂದು ಎರಡು ದಿನಗಳ ದೆಹಲಿ ಪ್ರವಾಸ ಕೈಗೊಳ್ಳಬೇಕಿತ್ತು. ದೆಹಲಿ ಪ್ರವಾಸ ಕೈಗೊಳ್ಳುವ ಮುನ್ನಾ ದಿನ ಅವರಿಗೆ ಜ್ವರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಕೋವಿಡ್ ಸೋಂಕು ಪರೀಕ್ಷೆಗೆ ಒಳಗಾಗಿ ಸೋಂಕು ಖಚಿತಗೊಂಡಿತ್ತು. ಸೋಂಕು ಖಚಿತಗೊಳ್ಳುತ್ತಿದ್ದಂತೆ ತಮ್ಮ ದೆಹಲಿ ಪ್ರವಾಸ ರದ್ದು ಮಾಡಿದ ಮುಖ್ಯಮಂತ್ರಿಯವರು ಮನೆಯಿಂದಲೇ ವಿಡಿಯೋ ಕಾನ್ಫರನ್ಸ್ ಮೂಲಕ ನೆರೆ ಪೀಡಿತ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಿ, ಅಗತ್ಯ ಸಲಹೆ ಸೂಚನೆ ನೀಡಿದ್ದರು. ಸೋಂಕು ದೃಢಪಟ್ಟ ನಂತರ ಮತ್ತೊಂದು ಪರೀಕ್ಷೆಗೆ ನಾಳೆ ಒಳಗಾಗಲಿದ್ದಾರೆ. ಪರೀಕ್ಷೆ ಫಲಿತಾಂಶ ಬರುವ ಮುನ್ನವೇ ಕೆಲವು ಜಿಲ್ಲೆಗಳ ಪ್ರವಾಸಕ್ಕೆ ತೆರಳಲು ಸಿದ್ಧತೆ ನಡೆಸಿದ್ದಾರೆ.

ಹಿರಿಯ ಅಧಿಕಾರಿಗಳ ಪ್ರಕಾರ ಸಿಎಂಗೆ ನಾಳೆ ಕೋವಿಡ್-19 ಪರೀಕ್ಷೆ ನೆಗೆಟಿವ್ ಬರುವುದು ಖಚಿತ. ಇದನ್ನು ಗಮನದಲ್ಲಿಟ್ಟುಕೊಂಡೇ ಅವರು ಪ್ರವಾಹ ಪೀಡಿತ ಪ್ರದೇಶಗಳಿಗೆ ತೆರಳಲು ಮುಂದಾಗಿದ್ದಾರೆ. ರಾಜ್ಯದ 17 ಜಿಲ್ಲೆಗಳಲ್ಲಿ ನಿರಂತರ ವಾಗಿ ಮಳೆ ಸುರಿಯುತ್ತಿದ್ದು, ನೆರೆ ಪರಿಹಾರ ಉಸ್ತುವಾರಿ ನೋಡಿ ಕೊಳ್ಳಲು ಜಿಲ್ಲಾ ಉಸ್ತುವಾರಿ ಸಚಿವರನ್ನು, ಜಿಲ್ಲಾ ಕೇಂದ್ರದಲ್ಲೇ ವಾಸ್ತವ್ಯ ಹೂಡುವಂತೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬುಧವಾರ ಸಂಜೆ ನಡೆಯಬೇಕಿದ್ದ ಮಂತ್ರಿಮಂಡಲ ಸಭೆಯನ್ನು ಮುಂದೂಡಿದ್ದಾರೆ ಎನ್ನಲಾಗಿದೆ, ಆದರೆ ಅಧಿಕೃತ ಆದೇಶ ಹೊರ ಬಿದ್ದಿಲ್ಲ.

ಪ್ರಕೃತಿ ವಿಕೋಪ ಪರಿಹಾರದಲ್ಲಿ ಯಾವುದೇ ತಾರತಮ್ಯ ಮಾಡುತ್ತಿಲ್ಲ

ವಿಕೋಪ ಪರಿಹಾರದಲ್ಲಿ ಯಾವುದೇ ತಾರತಮ್ಯ ಮಾಡುತ್ತಿಲ್ಲ, ಅಗತ್ಯಕ್ಕೆ ಅನುಗುಣವಾಗಿ ಕಾಲ ಕಾಲಕ್ಕೆ ಅನು ದಾನ ಬಿಡುಗಡೆ ಮಾಡಲಾಗುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ. ಮಾಜಿ ಸಚಿವ ಎಂ.ಬಿ.ಪಾಟೀಲ್ ಪರಿಹಾರದಲ್ಲಿ ವಿಜಯಪುರ ಜಿಲ್ಲೆಗೆ ತಾರತಮ್ಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಟ್ವೀಟ್ ಮಾಡಿದ್ದರು. ಇದಕ್ಕೆ ಸ್ಪಷ್ಟನೆ ನೀಡಿರುವ ಸಿಎಂ, ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳಿಗೆ ಜಿಲ್ಲಾಧಿ ಕಾರಿಗಳ ಪಿಡಿ ಖಾತೆಯಲ್ಲಿ ಲಭ್ಯವಿರುವ ಅನುದಾನವನ್ನು ಆಧರಿಸಿ ಹಣ ಬಿಡುಗಡೆ ಮಾಡಲಾಗುತ್ತದೆ. ಇತರ 21 ಜಿಲ್ಲೆಗಳಲ್ಲಿ ವಿಜಯಪುರ ಜಿಲ್ಲೆಗಿಂತ ಹೆಚ್ಚಿನ ಮೊತ್ತ ಲಭ್ಯವಿದೆ ಎಂಬುದನ್ನು ಗಮನಿಸಬೇಕಾಗಿದೆ ಆಂತ. ಆ.2ರ ಮಾಹಿತಿ ಯಂತೆ ವಿಜಯಪುರ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ 28.5 ಕೋಟಿ ರೂ. ಅನುದಾನ ಲಭ್ಯವಿದೆ ಎಂದು ತಿಳಿಸಿ ದರು. ಇನ್ನು ಆ.2ರ ಮಾಹಿತಿಯಂತೆ ಬೀದರ್ ಜಿಲ್ಲಾಧಿಕಾರಿ ಗಳ ಪಿಡಿ ಖಾತೆಯಲ್ಲಿ 20.45 ಕೋಟಿ ರೂ., ಕಲಬುರಗಿ ಜಿಲ್ಲಾಧಿಕಾರಿಗಳ ಬಳಿ 42.07 ಕೋಟಿ ರೂ., ಹಾಗೂ ಯಾದಗಿರಿ ಜಿಲ್ಲಾಧಿಕಾರಿಗಳ ಬಳಿ 25.14 ಕೋಟಿ ರೂ. ಅನುದಾನ ಲಭ್ಯವಿದೆ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ಸ್ವಯಂ ಸೇವಕರಿಂದ ಶ್ರಮದಾನ



ಮೈಸೂರು, ಆ. 8- ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರಿಂದ ಕುಕ್ಕರಹಳ್ಳಿ ಕೆರೆಯಲ್ಲಿ 'ಹಯಸಿಂತ್' ಎಂಬ ಸಸ್ಯವು ಯಥೇಚ್ಛವಾಗಿ ಬೆಳೆದಿದ್ದು ಅದರ ನಿರ್ಮೂಲನೆಗೆ ಶ್ರಮದಾನವನ್ನು ಮಾಡಿದರು. ಹಯಸಿಂತ್ ಸಸ್ಯವನ್ನು 'ಬೆಂಗಾಲ್ ಟೆರರ್' ಎಂದು ಕರೆಯುತ್ತಾರೆ. ಇದು ಸೂರ್ಯನ ಬೆಳಕನ್ನು ತಡೆಯುವುದರ ಜೊತೆಗೆ ಆಮ್ಲಜನಕದ ಪ್ರಮಾಣವನ್ನು ಕ್ರಮೇಣ ಕಡಿಮೆ ಮಾಡಿ ಕೆರೆಯಲ್ಲಿನ ಜಲಚರಗಳ ನಾಶಕ್ಕೆ ಕಾರಣವಾಗುತ್ತದೆ.

ಶ್ರಮದಾನದಲ್ಲಿ ಮಹಾಜನ ಕಾಲೇಜಿನ ರಾ.ಸೇ.ಯೋ. ಕಾರ್ಯಕ್ರಮಾಧಿಕಾರಿ ಸಿ.ಎಸ್.ಸಿದ್ದರಾಜು ಹಾಗೂ ಜಲಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಡಾ. ಕೆ.ಎಂ. ಜಯರಾಮಯ್ಯ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರಲ್ಲಿ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿ

ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಯುನೈಟೆಡ್‌ಗೆ ಭರ್ಜರಿ ಗೆಲುವು

ಮಯಾಂಕ್ ಅಗರ್ವಾಲ್, ಆರ್.ಸಮರ್ಥ್ ಪಂದ್ಯಶ್ರೇಷ್ಠರು



ಮೈಸೂರು,ಆ.8(ಎಂಕೆ)-ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣ ದಲ್ಲಿ ನಡೆಯುತ್ತಿರುವ 'ಮಹಾರಾಜ ಟ್ರೋಫಿ' ಕೆಎಸ್‌ಸಿಎ ಟಿ20 ಪಂದ್ಯಾವಳಿಯ 2ನೇ ದಿನ ಗುಲ್ಬರ್ಗ ಮೈಸ್ಟಿಕ್ಸ್ ವಿರುದ್ಧ ಬೆಂಗ ಳೂರು ಬ್ಲಾಸ್ಟರ್ಸ್ ಹಾಗೂ ಮೈಸೂರು ವಾರಿಯರ್ಸ್ ವಿರುದ್ಧ ಮಂಗಳೂರು ಯುನೈಟೆಡ್ ವಿಜಯ ಸಾಧಿಸಿತು.

ಬೆಂಗಳೂರು ಬ್ಲಾಸ್ಟರ್ಸ್ ಗೆಲುವು: ನಾಯಕ ಮಯಾಂಕ್ ಅಗರ್ವಾಲ್ ಅದ್ಭುತ ಬ್ಯಾಟಿಂಗ್ ಹಾಗೂ ರೋನಿತ್ ಮೋರೆ ಮಾರಕ ಬೌಲಿಂಗ್ ನೆರವಿನಿಂದ ಬೆಂಗ ಳೂರು ಬ್ಲಾಸ್ಟರ್ಸ್, ಗುಲ್ಬರ್ಗ ಮೈಸ್ಟಿಕ್ಸ್ ವಿರುದ್ಧ 54 ರನ್‌ಗಳ ಜಯ ಗಳಿಸಿದೆ. ಈ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ಬ್ಲಾಸ್ಟರ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 189 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಮಯಾಂಗ್ ಅಗರ್ವಾಲ್ 2 ಸಿಕ್ಸರ್, 7 ಬೌಂಡರಿ ಒಳಗೊಂಡ 54 ರನ್ ಗಳಿಸಿ ದರಲ್ಲದೆ ಆರಂಭದಲ್ಲಿ ಎಲ್.ಆರ್.ಚೇತನ್ ಒಡಗೂಡಿ ಅಬ್ಬರದ ಬ್ಯಾಟಿಂಗ್ ನಡೆಸಿ ದರು. ಈ ವೇಳೆ 25 ರನ್ ಗಳಿಸಿದ್ದ ಎಲ್.ಆರ್.ಚೇತನ್ ಔಟಾದರು.

11ನೇ ಓವರ್ ಮುಗಿಯುತ್ತಿದ್ದಂತೆ ಪಂದ್ಯಕ್ಕೆ ಮಳೆ ಅಡ್ಡಿ ಉಂಟು ಮಾಡಿತು. ಮಳೆ ನಿಂತ ಮೇಲೆ ಬೆಂಗಳೂರಿನ ರನ್ ಅಬ್ಬರ ಸ್ವಲ್ಪ ಮಟ್ಟಿಗೆ ಮಂದಗತಿಯಲ್ಲಿ ಸಾಗಿ ದರೂ ಕೆ.ವಿ.ಅನೀಶ್ 40 ಎಸೆತಗಳಲ್ಲಿ 44 ರನ್ ಗಳಿಸಿ ತಾಳ್ಮೆಯ ಬ್ಯಾಟಿಂಗ್ ಪ್ರದರ್ಶಿಸಿದರು. ಕ್ರಾಂತಿ ಕುಮಾರ್ 11 ಎಸೆತ ಗಳಿಂದ 22 ರನ್ ಗಳಿಸುವುದರೊಂದಿಗೆ ಬೆಂಗಳೂರು ಬ್ಲಾಸ್ಟರ್ಸ್ 20 ಓವರ್ ಗಳಲ್ಲಿ 8 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಿ ಗುಲ್ಬರ್ಗ ಮೈಸ್ಟಿಕ್ಸ್‌ಗೆ 190 ರನ್‌ಗಳ ಕಠಿಣ ಸವಾಲು ನೀಡಿತು. ಗುಲ್ಬರ್ಗ ಮೈಸ್ಟಿಕ್ಸ್ ಪರ ವಿದ್ವತ್ ಕಾರಿಯಪ್ಪ ಹಾಗೂ ರಿತೇಶ್ ಭಟ್ಕಳ್ ತಲಾ 2 ವಿಕೆಟ್ ಪಡೆದರೆ, ಅಭಿ ಲಾಶ್ ಶೆಟ್ಟಿ 3 ಓವರ್‌ಗಳಲ್ಲಿ 40 ರನ್ ನೀಡಿ ದುಬಾರಿ ಬೌಲರ್ ಎನಿಸಿದರು.

190 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಲ್ಬರ್ಗ ಮೈಸ್ಟಿಕ್ಸ್ ಆರಂಭಿಕ ಆಘಾತ ಎದುರಾಯಿತು. ರೋನಿತ್ ಮೋರೆ ತಮ್ಮ ಮೊದಲ ಓವರ್‌ನ ಮೊದಲ ಎಸೆತದಲ್ಲೇ ಕೋದಂಡ ಅಜಿತ್ ಪೆವಿಲಿಯನ್ ಸೇರಿ ದರೆ ಐದನೇ ಎಸೆತದಲ್ಲಿ ನಾಯಕ ಮನೀಶ್ ಪಾಂಡೆ 2 ರನ್ ಗಳಿಸಿ ಅಭಿ ಮಾನಿಗಳಿಗೆ ನಿರಾಶೆ ಮೂಡಿಸಿದರು.

ತಂಡಕ್ಕೆ ಭರವಸೆಯಾಗಿದ್ದ ದೇವದತ್ತ ಪಡಿಕ್ಕಲ್(18) ಕೂಡ ಹೆಚ್ಚು ಕಾಲ ಕ್ರೀಸಿ ನಲ್ಲಿ ನಿಲ್ಲಲಿಲ್ಲ. ನಂತರ ಮನೋಜ್ ಭಾಂಡ (35) ಅಲ್ಪ ಕಾಣಿಕೆ ನೀಡಿದರೂ ಬೆಂಗ ಳೂರು ಬೌಲಿಂಗ್ ದಾಳಿಯನ್ನು ಸಮರ್ಥ ವಾಗಿ ಎದುರಿಸಿದರೂ ಸಾಧ್ಯವಾಗಲಿಲ್ಲ. ಅಂತಿಮವಾಗಿ ಗುಲ್ಬರ್ಗ ಮೈಸ್ಟಿಕ್ಸ್ 19.1 ಓವರ್‌ಗಳಲ್ಲಿ 135 ರನ್ ಗಳಿಸಿ ತನ್ನೆಲ್ಲ ವಿಕೆಟ್ ಕಳೆದುಕೊಂಡಿತು. ಬೆಂಗಳೂರು ಬ್ಲಾಸ್ಟರ್ಸ್ ಪರ ರೋನಿತ್ ಮೋರೆ 3.1 ಓವರ್‌ಗಳಲ್ಲಿ 22 ರನ್ ನೀಡಿ ಅಮೂಲ್ಯ 4 ವಿಕೆಟ್ ಗಳಿಸುವ ಮೂಲಕ ಜಯದಲ್ಲಿ ಪ್ರಮುಖ ಪಾತ್ರವಹಿಸಿದರು. ಗುಲ್ಬರ್ಗ ಉತ್ತಮ ಬ್ಯಾಟಿಂಗ್ ಪಡೆಯನ್ನು ಹೊಂದಿ ದ್ದರೂ ಬೆಂಗಳೂರಿನ ಬೌಲಿಂಗ್ ದಾಳಿಯ ಮುಂದೆ ಏನೂ ಮಾಡಲಾಗಲಿಲ್ಲ. ರಿಶಿ ಬೋಪಣ್ಣ (19ಕ್ಕೆ 2) ಮತ್ತು ಎಲ್.ಆರ್. ಕುಮಾರ್ (12ಕ್ಕೆ 2) ಉತ್ತಮ ಬೌಲಿಂಗ್ ಪ್ರದರ್ಶಿಸಿದರು. ಉತ್ತಮ ಬ್ಯಾಟಿಂಗ್ ಪ್ರದ ರ್ಶನ ನೀಡಿದ ಮಯಾಂಕ್ ಅಗರ್ವಾಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರು ವಾರಿಯರ್ಸ್‌ಗೆ ಸೋಲು: ಮಳೆರಾಯನ ಕಾಟದ ಜೊತೆಗೆ ಬ್ಯಾಟಿಂಗ್ ವೈಫಲ್ಯದಿಂದ ಮೈಸೂರು ವಾರಿಯರ್ಸ್ ತನ್ನ 2ನೇ ಪಂದ್ಯದಲ್ಲಿ 8 ರನ್‌ಗಳ ಸೋಲು ನುಭವಿಸಬೇಕಾಯಿತು. ಟಾಸ್ ಸೋತು ಬ್ಯಾಟಿಂಗ್ ಆರಂಭಿಸಿದ ಮೈಸೂರು ವಾರಿ ಯರ್ಸ್ ತಂಡದ ನಾಯಕ ಕರುಣ್ ನಾಯರ್ 5, ನಾಗಾ ಭರತ್ 9 ರನ್ ಗಳಿಸಿ ಬಹುಬೇಗ ಪೆವಿಲಿಯನ್ ಸೇರಿದರು. ಮತ್ತೊಂದೆಡೆ ಅಬ್ಬರ ಬ್ಯಾಟಿಂಗ್ ನಡೆಸಿದ ನಿಹಾಲ್ ಉಳ್ಳಾಲ್ 28 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ 44 ರನ್ ಸಿಡಿಸಿ ಮ್ಯಾಕ್ನೀಲ್ ನೊರೊನ್ಹಾ ಬೌಲಿಂಗ್ ನಲ್ಲಿ ಕ್ಯಾಚ್ ನೀಡಿದರು.

ನಂತರ ಬಂದ ಪವನ್ ದೇಶಪಾಂಡೆ 14, ಅನುಭವಿ ಶ್ರೇಯಸ್ ಗೋಪಾಲ್ 5 ರನ್ ಗಳಿಸಿ ಔಟಾದರೆ, ಕ್ರೀಸ್‌ನಲ್ಲಿದ್ದ ಎಸ್.ಶಿವರಾಜ್ 19 ರನ್ ಹಾಗೂ ಶುಬಾಂಗ್ ಹೆಗ್ಡೆ 10 ರನ್ ಗಳಿಸಿದ್ದ ವೇಳೆ ಮಳೆಯಿಂದಾಗಿ ಆಟ ನಿಲ್ಲಿಸಲಾಯಿತು. ಈ ಮೂಲಕ ಮೈಸೂರು ವಾರಿಯರ್ಸ್ 16.3 ಓವರ್‌ಗಳಲ್ಲಿ 112 ರನ್ ಗಳಿಸಲಷ್ಟೇ ಶಕ್ತವಾಯಿತು. ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿದ ಪರಿಣಾಮ 2ನೇ ಇನ್ನಿಂಗ್ಸ್ ಅನ್ನು 14 ಓವರ್‌ಗಳಿಗೆ ಸೀಮಿತ ಗೊಳಿಸಿ 114 ರನ್‌ಗಳ ಗುರಿ ನಿಗದಿಪಡಿ ಸಲಾಯಿತು. ಮತ್ತೆ 2ನೇ ಇನ್ನಿಂಗ್ಸ್‌ನ 8ನೇ(7.5) ಓವರ್‌ನಲ್ಲಿ ಮಳೆ ಆರಂಭ ವಾದ ಹಿನ್ನೆಲೆಯಲ್ಲಿ ವಿಜೆಡಿ ನಿಯಮದ ನ್ವಯ ಮಂಗಳೂರು ಯುನೈಟೆಡ್ ತಂಡ 8 ರನ್‌ಗಳಿಂದ ಜಯ ಗಳಿಸಿದೆ ಎಂದು ಘೋಷಣೆ ಮಾಡಲಾಯಿತು.

ತಂಡದ ಪರ ನಾಯಕ ಆರ್. ಸಮರ್ಥ್ 20 ಎಸೆತಗಳಲ್ಲಿ 2 ಸಿಕ್ಸರ್, 1 ಬೌಂಡರಿ ಸಹಿತ 31 ರನ್‌ಗಳಿಸಿ ಅಜೇಯರಾಗಿ ಉಳಿದರೆ, ಮ್ಯಾಕ್ನೀಲ್ ನೊರೊನ್ಹಾ 9, ನಿಖಿನ್ ಜೋಸ್ 9, ಅಭಿನವ್ ಮನೋ ಹರ್ 14 ರನ್‌ಗಳ ಕಾಣಿಕೆ ನೀಡಿದರು. ಈ ಮೂಲಕ ಮಂಗಳೂರು ಯುನೈಟೆಡ್ ತಂಡ 7.5 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 63 ರನ್ ಗಳಿಸಿತು. ಮೈಸೂರು ವಾರಿ ಯರ್ಸ್ ಪರ ವಿದ್ಯಾಶಂಕರ್ ಪಾಟೀಲ್, ಶುಬಾಂಗ್ ಹೆಗ್ಡೆ ತಲಾ ಒಂದೊಂದು ವಿಕೆಟ್ ಪಡೆದರು. ಆರ್.ಸಮರ್ಥ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬೆಂಗಳೂರು ಬ್ಲಾಸ್ಟರ್ಸ್ ಸಂಕ್ಷಿಪ್ತ ಸ್ಕೋರ್

20 ಓವರ್‌ಗಳಲ್ಲಿ 8 ವಿಕೆಟ್‌ಗೆ 189 ರನ್ (ಮಯಾಂಕ್ ಅಗರ್ವಾಲ್ 52, ಚೇತನ್ 25, ಕೆ.ವಿ. ಅನೀಶ್ 44, ಕ್ರಾಂತಿ ಕುಮಾರ್ 22, ವಿದ್ವತ್ ಕಾವೇರಪ್ಪ 35ಕ್ಕೆ 2, ರಿತೇಶ್ ಭಟ್ಕಳ್ 18ಕ್ಕೆ 2). **ಗುಲ್ಬರ್ಗ ಮೈಸ್ಟಿಕ್ಸ್:** 19.1 ಓವರ್‌ಗಳಲ್ಲಿ 135. (ಕೃಷ್ಣನ್ ಶ್ರೀಜಿತ್ 25, ದೇವದತ್ತ ಪಡಿಕ್ಕಲ್ 18, ಮನೋಜ್ ಭಾಂಡಗೆ 35, ರೋನಿತ್ ಮೋರೆ 22ಕ್ಕೆ 4, ಕುಮಾರ್ 12ಕ್ಕೆ 2, ರಿಶಿ ಬೋಪಣ್ಣ 19ಕ್ಕೆ 2)

ಮೈಸೂರು ವಾರಿಯರ್ಸ್ ಸಂಕ್ಷಿಪ್ತ ಸ್ಕೋರ್

16.3 ಓವರ್‌ಗಳಲ್ಲಿ 5 ವಿಕೆಟ್‌ಗೆ 112 (ನಿಹಾಲ್ ಉಳ್ಳಾಲ್ 44, ಶಿವರಾಜ್.ಎಸ್ 19*, ರೋಹಿತ್ ಕುಮಾರ್ 32ಕ್ಕೆ2, ಹೆಚ್.ಎಸ್.ಶರತ್ 12ಕ್ಕೆ1) **ಮಂಗಳೂರು ಯುನೈಟೆಡ್:** 7.5 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 63 ರನ್ (ಆರ್.ಸಮರ್ಥ್ 31*, ಅಭಿನವ್ ಮನೋಹರ್ 14*, ವಿದ್ಯಾಧರ್ ಪಾಟೀಲ್ 21ಕ್ಕೆ1)



ಇಂದಿನ ಪಂದ್ಯಗಳು

ಸಮಯ ಮಧ್ಯಾಹ್ನ 3ಕ್ಕೆ
ಗುಲ್ಬರ್ಗ ಮೈಸ್ಟಿಕ್ಸ್/ಶಿವಮೊಗ್ಗ ಸ್ಟ್ರೈಕರ್ಸ್

ಸಮಯ ಸಂಜೆ 7ಕ್ಕೆ
ಬೆಂಗಳೂರು ಬ್ಲಾಸ್ಟರ್ಸ್/ಹುಬ್ಬಳ್ಳಿ ಟೈಗರ್ಸ್

ಡಾ.ಎಂ.ಹೆಚ್.ಮರೀಗೌಡರ ಜನ್ಮದಿನ ಆಚರಣೆ



ಮೈಸೂರು,ಆ.8(ಆರ್‌ಕೆ)- ನಮ್ಮೂರು -ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿ ಯಿಂದ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿ ತೋಟಗಾರಿಕೆ ಪಿತಾಮಹರೆನಿಸಿದ್ದ ಡಾ.ಎಂ.ಹೆಚ್. ಮರೀಗೌಡ ಅವರ 106ನೇ ವರ್ಷದ ಜನ್ಮದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ಎಲ್.ನಾಗೇಂದ್ರ, ಜೀವನಕ್ಕಾಗಿ ದವಸ ಧಾನ್ಯವನ್ನೇ ನಂಬಿದ್ದ ರೈತಾಪಿ ವರ್ಗಕ್ಕೆ ಫಲಪುಷ್ಪ ಬೆಳೆಸುವ ಮೂಲಕ ಆರ್ಥಿಕ ಸದೃಢತೆಯ ದಾರಿ ತೋರಿಸಿದ ಡಾ.ಮರೀ ಗೌಡರು, ಕರ್ನಾಟಕ ರಾಜ್ಯಕ್ಕೆ 'ತೋಟ ಗಾರಿಕೆಯ ಬೀಡು' ಎಂಬ ಖ್ಯಾತಿ ಬರಲು ಕಾರಣಕರ್ತರಾದರು ಎಂದು ತಿಳಿಸಿದರು.

ಬನ್ನೂರಿನಲ್ಲಿ ಪ್ರಾಥಮಿಕ ಶಿಕ್ಷಣ ಆರಂ ಭಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿ ನಲ್ಲಿ ವಿಜ್ಞಾನದಲ್ಲಿ ಪದವಿ ಪಡೆದು ಲಖನೌ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಗಳಿಸಿದ ಅವರು, ಅಮೆರಿಕಾದ ಹಾರ್ವರ್ಡ್ ವಿವಿಯಲ್ಲಿ ಡಾಕ್ಟೋರೇಟ್ ಪಡೆದಿದ್ದರು. ಸ್ವಾತಂತ್ರ್ಯ ಪೂರ್ವ ದಲ್ಲಿಯೇ ಬೆಂಗಳೂರಿನ ಲಾಲ್‌ಬಾಗ್ ನಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿ ಸೇವೆ ಆರಂಭಿಸಿ ನಂತರ ತೋಟ ಗಾರಿಕೆ ಇಲಾಖೆಗೆ ಹೊಸ ರೂಪ ನೀಡಿ ದ್ದರು ಎಂದರು. ವಸ್ತುಪ್ರದರ್ಶನ ಪ್ರಾಧಿ ಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಟ್ರಸ್ಟ್ ಅಧ್ಯಕ್ಷ ಸತೀಶ್‌ಗೌಡ, ಉಪಾಧ್ಯಕ್ಷ ಕುಮಾರಗೌಡ, ಕಾರ್ಯದರ್ಶಿ ಎ.ರವಿ, ಕಾರ್ಪೊರೇಟರ್‌ಗಳಾದ ಚಿಕ್ಕವೆಂಕಟು, ಪ್ರಮೀಳಾ ಭರತ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಾಳೆಯಿಂದ 300ನೇ ಉಚಿತ ವೈಜ್ಞಾನಿಕ ಪ್ರಾಣಾಯಾಮ ಶಿಬಿರ

ಮೈಸೂರು, ಆ.8- ನಗರದ ಯೋಗಾಚಾರ್ಯ ಡಾ.ದೇವಕಿ ಮಾಧವ್ ಅವರಿಂದ 75ನೇ ಅಮೃತ ಸ್ವಾತಂತ್ರ್ಯೋತ್ಸವದ ಮಹೋತ್ಸವ ಹಿನ್ನೆಲೆಯಲ್ಲಿ ಆ.10ರಿಂದ 14ರವರೆಗೆ ಸಂಜೆ 5ರಿಂದ 7ರವರೆಗೆ ಉಚಿತ ವೈಜ್ಞಾನಿಕ ಪ್ರಾಣಾಯಾಮ ಶಿಬಿರವನ್ನು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಶಿವಾನಂದ ಜ್ಞಾನಾಲಯದಲ್ಲಿ ಏರ್ಪಡಿಸಲಾಗಿದೆ. ಪ್ರತಿದಿನವೂ ಪ್ರಖ್ಯಾತ ಗಣ್ಯರಿಂದ ವಿಶೇಷ ಉಪನ್ಯಾಸ ಹಾಗೂ ವೈಜ್ಞಾನಿಕ ಪ್ರಾಣಾಯಾಮದ ಕುರಿತು ಮಾಹಿತಿಯನ್ನು ನೀಡಲಾಗುವುದು. ವಿಶೇಷವಾಗಿ ಆ. 12ರಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ 'ದೈನಂದಿನ ಜೀವನದಲ್ಲಿ ವೈಜ್ಞಾನಿಕ ಪ್ರಾಣಾಯಾಮ' ಕುರಿತು ವಿಷಯ ಮಂಡನೆಯನ್ನು ವಿಷಯತಜ್ಞರಾದ ಅಮೆರಿಕಾ ಯೋಗ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪರಿಷತ್ ಅಧ್ಯಕ್ಷ ಡಾ.ಎಂ.ಕೆ.ನಾಗರಾಜ ರಾವ್, ಎಸ್.ಜೆ.ಸಿ.ಇ.ಕಾಲೇಜಿನ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥ ಪ್ರೊ. ನಾಗೇಂದ್ರ ಪ್ರಸಾದ್, ಅಪೋಲೋ ಆಸ್ಪತ್ರೆಯ ಪ್ಲಾಸ್ಟಿಕ್ ಮತ್ತು ಮೈಕ್ರೋವಾಸ್ಕುಲರ್ ತಜ್ಞರಾದ ಡಾ.ನಾರಾಯಣ ಹೆಗ್ಗಡೆ ಹಾಗೂ ಜಿ.ಎಸ್.ಎಸ್.ಎಸ್. ಶಿಕ್ಷಣ ಸಂಸ್ಥೆಯ ಶ್ರೀಮತಿ ಅನುಪಮ ಬಿ.ಪಂಡಿತ್ ಹಾಗೂ ಸುಯೋಗ್ ಫೌಂಡೇಶನ್ ಸಂಸ್ಥಾಪಕ ಡಾ.ಎಸ್.ಪಿ. ಯೋಗಣ್ಣ ವಿಷಯ ಕುರಿತು ಮಾತನಾಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಸರ್ಕಾರದ ಆಯುಷ್ ಇಲಾಖೆಯ ವಿಶ್ರಾಂತ ನಿರ್ದೇಶಕ ಡಾ.ಜಿ.ಎನ್.ಶ್ರೀಕಂಠಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಉಚಿತ ಪ್ರವೇಶ ಇದ್ದು, ಹೆಚ್ಚಿನ ಮಾಹಿತಿಗಾಗಿ ಮೊ: 9341202292 ಹಾಗೂ 9480532168 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.08.2022 ಮಂಗಳವಾರ, ಮಳೆ ನಕ್ಷತ್ರ : ಆಶ್ಲೇಷ, 03.07.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ದ್ವಾದಶೀ, ನಕ್ಷತ್ರ : ಮೂಲ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ ಹಾಗೂ ಚಾರಿಟಬಲ್ ಟ್ರಸ್ಟ್:** 19ನೇ ವರ್ಷದ ಬ್ರಹ್ಮರಥೋತ್ಸವ, ಬೆಳಗ್ಗೆ 8ಗಂಟೆಗೆ ಪೂರ್ಣಾಹುತಿ, 11 ಗಂಟೆಗೆ ತೀರ್ಥಸ್ನಾನ ಉತ್ಸವ, ಸಂಜೆ ಧ್ವಜಾವರೋಹಣ, ಕುಂಭಾಭಿಷೇಕ, ಸಾನ್ನಿಧ್ಯ: ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಚಂದ್ರಶೇಖರಸ್ವಾಮೀಜಿ, ಯೋಗನರಸಿಂಹಸ್ವಾಮಿ ದೇವಸ್ಥಾನದ ಶ್ರೀಭಾಷ್ಯಂ ಸ್ವಾಮೀಜಿ, ಉಪಸ್ಥಿತರು: ಸಂಸದ ಪ್ರತಾಪ್‌ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಸಾ.ರಾ.ಮಹೇಶ್, ಎಲ್.ನಾಗೇಂದ್ರ, ಮರಿತಿಬ್ಬೇಗೌಡ, ಮಂಜೇಗೌಡ, ಮಧು ಜಿ.ಮಾದೇಗೌಡ, ಮೇಯರ್ ಸುನಂದಾ ಪಾಲನೇತ್ರ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ನಗರಪಾಲಿಕೆ ಸದಸ್ಯರಾದ ಎಂ.ಶಿವಕುಮಾರ್, ಲಕ್ಷ್ಮೀ ಮಾದೇಗೌಡ, ಶಿವಕುಮಾರ್, ಮಾಜಿ ಮೇಯರ್ ಆರ್.ಲಿಂಗಪ್ಪ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಸ್ಥಳ: ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ.


■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೂಗಿನ ಅಲರ್ಜಿ, ದೃಷ್ಟಿಯ ಸಮಸ್ಯೆ ಮತ್ತು ಅರ್ಧ ತಲೆನೋವಿನ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಚಾಮುಂಡಿಬೆಟ್ಟದ ತಪ್ಪಲು, ಬೆಳಗ್ಗೆ 9 ರಿಂದ

■ **ಇನ್ಶೂರೆನ್ಸ್ ಕಾರ್ಪೋರೇಷನ್ ಎಂಪ್ಲಾಯೀಸ್ ಯೂನಿಯನ್, ಮೈಸೂರು ವಿಭಾಗ :** ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ವಿವಿಧ ಸ್ಪರ್ಧೆಗಳು, ಸ್ಥಳ: ಎಲ್‌ಐಸಿ ವಿಭಾಗೀಯ ಕಚೇರಿ, ಬನ್ನಿಮಂಟಪ, ಬೆಳಗ್ಗೆ 10.30ಕ್ಕೆ.

■ **ಕೀರ್ತಿ ಯುವತಿ ಮಹಿಳಾ ಮಂಡಳಿ, ಕಸ್ತೂರಿ ಸಿರಿಗನ್ನಡ ವೇದಿಕೆ :** ಶ್ರಾವಣ ಮಾಸದ ಕವಿಗೋಷ್ಠಿ, ಸುರೇಶ್ ಮಲ್ಲಾಡದ ಹಾವೇರಿ ಅವರ 'ಮಾತು ಮರೆತ ಮೌನ ಹಕ್ಕಿ' ಕೃತಿ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಸಾಹಿತಿ ರಾಜು ಕೆ. ಬನ್ನೂರು, ಆಶಯ ನುಡಿ : ಮಂಜುಳಾ ರಮೇಶ್, ಕೃತಿ ಪರಿಚಯ : ಕೊಟ್ರೇಶ್ ಎಸ್. ಉಪ್ಪಾರ, ಸ್ಥಳ: ನಿಮಿಷಾಂಬ ಪಾರ್ಕ್ ಹತ್ತಿರ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ :** ಬೆಳಗ್ಗೆ 10.30ಕ್ಕೆ ಸಂಸ್ಥೆಯ 57ನೇ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ ರಾಜೇಶ್ ಭೂಷಣ್, ಗೌರವ ಅತಿಥಿಗಳು : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಆಯಿಷ್ ನಿರ್ದೇಶಕಿ ಡಾ. ಎಂ. ಪಶುಪತಿ, ಸಂಜೆ ಕಾರ್ಯಕ್ರಮ 6ಕ್ಕೆ, ಮುಖ್ಯ ಅತಿಥಿಗಳು : ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸಂಗೀತ ನಿರ್ದೇಶಕ ವಾಸುಕಿ ವೈಭವ್, ಅಧ್ಯಕ್ಷತೆ : ಆಯಿಷ್ ನಿರ್ದೇಶಕಿ ಡಾ. ಎಂ. ಪಶುಪತಿ, ಸ್ಥಳ: ಸೆಮಿನಾರ್ ಹಾಲ್, ನಾಲೆಡ್ಜ್ ಪಾರ್ಕ್, ಆಯಿಷ್.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ-ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ- ಡಾ. ಟಿ.ಎಸ್. ಗೋಪಾಲ್, 6.40 ಭಾವಗೀತೆ-ರತ್ನಮಾಲಾ ಪ್ರಕಾಶ್, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ-ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 7.15 ಕಾದಂಬರಿ ವಿಹಾರ-ದೂರ ಸರಿದರು ಕಾದಂಬರಿಯ ಪ್ರಸ್ತುತಿ- ಉಮೇಶ್.ಎಸ್., 9.30ವೃತ್ತಿ ಮಾರ್ಗದರ್ಶನ-ಇತಿಹಾಸ ಅಂದರೆ ಹಿಸ್ಟರಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಆರ್.ಡಿ. ಪವಮಾನ ಅವರೊಂದಿಗೆ ಮಾತುಕತೆ, 10.00ಗಾನ ರಸೋತ್ತುಂಗ ಶ್ರೀ ಶ್ಯಾಮಕೃಷ್ಣ -ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ, 10.30 ನಮ್ಮ ಆರೋಗ್ಯ-ಓವೇರಿಯನ್ ಕ್ಯಾನ್ಸರ್ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುವ ತಜ್ಞರು- ಡಾ.ಎಂ.ಎಸ್. ಗಿರೀಶ್

ಮಧ್ಯಾಹ್ನ: 12.05ವನಿತಾ ವಿಹಾರ, ಸ್ತ್ರೀ ಚೇತನ, ಲೇಖಕಿ ಹಾಗೂ ಪತ್ರಕರ್ತೆ ಪ್ರೀತಿ ನಾಗರಾಜ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ-ಅಬ್ದುಲ್ ರಶೀದ್, 12.30 ದೇವರನಾಮ-ಸುಧಾ ಮಧುಸೂದನ್, 12.45 "ಶಬ್ದ ಸಂಪತ್ತನ್ನು ಬೆಳೆಸುವ ಆಟಗಳು", ಮಾತನಾಡುತ್ತಾರೆ ಅನಂತ್ ಎಂ.ತಾಮ್ಹನಾಕರ್, 1.20ಭಾವಗೀತೆ - ಕೆ.ಪಿ.ರೇವತಿ, 3.00 ಆರ್.ಕೆ. ಪದ್ಮನಾಭ-ವೀಣಾವಾದನ, 4.00 ಕಥಾ ಕಾಲಕ್ಷೇಪ "ಸೀತಾ ಕಲ್ಯಾಣ"- ಪ್ರಸ್ತುತಿ- ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ-ಕಿಸಾನ್‌ವಾಣಿ, ಪಶುಗಳಲ್ಲಿ ಕಾಲು ಬಾಯಿ ರೋಗ ಹಾಗೂ ನಿರ್ವಹಣೆ ಕುರಿತು ಡಾ.ಎನ್. ಸಂತೋಷ್ ಗೌಡ ಅವರೊಂದಿಗೆ ಸಂದರ್ಶನ, 9.30 ಆರ್.ಕೆ. ಶ್ರೀಕಂಠನ್-ಹಾಡುಗಾರಿಕೆ, 10.00 ಕಾವ್ಯವಾಚನ, ವಾಚನ- ಬಿ.ಹೆಚ್. ನಾಗರತ್ನಮ್ಮ, ವ್ಯಾಖ್ಯಾನ- ಕೃ.ಪಾ. ಮಂಜುನಾಥ್

■ **ಕರ್ನಾಟಕ ರೈತ ಸಂಘ :** ಜೈ ಜವಾನ್-ಜೈ ಕಿಸಾನ್ ಸಮಾವೇಶ ಮತ್ತು ಅಗ್ನಿಪಥ್ ಯೋಜನೆ ಕುರಿತು ವಿಷಯ ಮಂಡನೆ, ಉಪಸ್ಥಿತರು : ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಸೌತ್ ಸೆಂಟ್ರಲ್ ಜೋನ್ ಕಲ್ಚರಲ್ ಸೆಂಟರ್, ನಾಗಪುರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ರಂಗಾಯಣ, ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ಆದಿವಾಸಿ ನೃತ್ಯ ಮಹೋತ್ಸವ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಮುಖ್ಯ ಅತಿಥಿಗಳು : ಎಸ್‌ಸಿಜಡ್‌ಸಿಸಿ ನಿರ್ದೇಶಕ ಡಾ. ದೀಪಕ್ ಕಿರುವಾಡ್ಕರ್, ಕರಾಮುವಿವಿ ಕುಲಪತಿ ಡಾ. ಎಸ್. ವಿದ್ಯಾಶಂಕರ್, ಗಂಗೂಬಾಯಿ ಸಂಗೀತ ವಿವಿ ಕುಲಪತಿ ಪ್ರೊ. ವಿ. ನಾಗೇಶ್ ಬೆಟ್ಟಕೋಟೆ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಟಿ.ಎಂ. ಭಾಸ್ಕರ್, ಅಖಿಲ ಭಾರತ ಜಾನಪದ ಹಾಗೂ ಬುಡಕಟ್ಟು ಪರಿಷತ್ ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ಗಂಗೋತ್ರಿ, ಸಂಜೆ 4.30ಕ್ಕೆ.

■ **ಸಂಸ್ಕೃತ ಭಾರತಿ, ವಿದ್ವಾನ್ ಟಿ. ನಾರಾಯಣಶಾಸ್ತ್ರಿ ಪ್ರತಿಷ್ಠಾನಂ :** ಸಂಸ್ಕೃತ ಸಪ್ತಾಹ-2022, ಡಾ. ಎಚ್.ವಿ. ನಾಗರಾಜರಾವ್ ಅವರಿಂದ ಕಾವ್ಯಶಾಸ್ತ್ರ ವಿನೋದ ಕುರಿತು ಪ್ರವಚನ, ಸ್ಥಳ: ವಿಶ್ವಂ ಸಭಾಂಗಣ, 8ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 5.50ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ಕರ್ನಾಟಕ ಸಂಸ್ಕೃತಿ ಕುರಿತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಬಿ.ವಿ. ವಸಂತಕುಮಾರ್ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಪ್ರೊ. ಹೆಚ್.ಬಿ. ದೇವಣ್ಣ, ವಾಚನ: ಜೆಎಸ್‌ಎಸ್ ಪ್ರೌಢಶಾಲೆಯ ದೈಹಿಕ ಶಿಕ್ಷಕ ಡಿ.ಎಂ. ಸಿದ್ದಲಿಂಗಸ್ವಾಮಿ ಅವರಿಂದ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಸಂಜೆ 6.30ರಿಂದ.

ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ಆರು ತಿಂಗಳಿಂದ ನಡೆಸುತ್ತಿರುವ

ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳ ಹೋರಾಟಕ್ಕೆ ಜಿಟಿಡಿ ಬೆಂಬಲ

ಬೆಂಗಳೂರು, ಆ.8– ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಆಯೋಗದ ಶಿಫಾರಸ್ಸಿನಂತೆ ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಿಸಬೇಕೆಂಬ ಪ್ರಮುಖ ಬೇಡಿಕೆಯೂ ಸೇರಿದಂತೆ ಇನ್ನಿತರ ನಾನಾ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸುತ್ತಿರುವ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರನ್ನು ಸೋಮವಾರ ಭೇಟಿ ಮಾಡಿದ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಶ್ರೀಗಳ ಹೋರಾಟಕ್ಕೆ ತಮ್ಮ ಬೆಂಬಲ ಸೂಚಿಸಿದರು.

ಬಳಿಕ ಮಾತನಾಡಿದ ಶಾಸಕ ಜಿಟಿಡಿ, ಸ್ವಾಮೀಜಿಯವರ ಈ ಹೋರಾಟ ನ್ಯಾಯಯುತವಾಗಿದೆ. ಪರಿಶಿಷ್ಟ ಪಂಗಡ ಸಮುದಾಯಕ್ಕೆ ಅನ್ಯಾಯವಾಗಿದೆ. ಹಾಗಾಗಿ ಶ್ರೀಗಳು ಕಳೆದ 6 ತಿಂಗಳಿಂದ ನಿರಂತರ ಹೋರಾಟ ಮಾಡುತ್ತಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವುದೇ ಅವರ ಶಕ್ತಿ. ಸಮುದಾಯಕ್ಕೆ ಸಾಮಾಜಿಕ ನ್ಯಾಯ, ಶಿಕ್ಷಣ ಮತ್ತು ಉದ್ಯೋಗ ದೊರಕಿಸಿಕೊಡುವ ನಿಟ್ಟಿನಲ್ಲಿ ಶ್ರೀಗಳು ನಡೆಸುತ್ತಿರುವ ಹೋರಾಟವನ್ನು ಯಾರೂ ನಿರ್ಲಕ್ಷ್ಯ ಮಾಡಬಾರದು. ಪಕ್ಷಾತೀತವಾಗಿ ಅವರ ಹೋರಾಟಕ್ಕೆ ಬೆಂಬಲ ಸೂಚಿಸಿ, ನಮ್ಮ ಅಳಿಲು ಸೇವೆ ಸಲ್ಲಿಸಬೇಕು. ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಹೆಚ್ಚಳ ಆಗಲೇಬೇಕು. ತಮಗೂ, ಇದು ಕೈಗೂಡುತ್ತದೆ ಎಂಬ ನಂಬಿಕೆ, ಅಚಲ ವಿಶ್ವಾಸವಿರುವುದಾಗಿ ಅವರು ತಿಳಿಸಿದರು.

ಪರಿಶಿಷ್ಟ ಪಂಗಡದ ಮೀಸಲಾತಿ ಹೆಚ್ಚಳಕ್ಕಾಗಿ 2019ರಲ್ಲಿ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರು ನಿವೃತ್ತ ನ್ಯಾ.ಹೆಚ್.ಎನ್.ನಾಗಮೋಹನದಾಸ್ ಆಯೋಗ ರಚನೆ ಮಾಡಿದರು. ನಿವೃತ್ತ ನ್ಯಾಯಮೂರ್ತಿಗಳು ಸಾಮಾಜಿಕ ನ್ಯಾಯ ಎತ್ತಿಹಿಡಿಯುವಂತಹ ವರದಿ ನೀಡಿದ್ದು, ಯಥಾವತ್ತಾಗಿ ಸದರಿ ವರದಿ ಜಾರಿಗೊಳಿಸಬೇಕು. ಆದರೆ ಈ ವಿಚಾರದಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವುದು ಸರಿಯಲ್ಲ ಎಂದು ಜಿಟಿಡಿ ಬೇಸರ ವ್ಯಕ್ತಪಡಿಸಿದರು.

ನಾನು ಜಿಲ್ಲಾ ಪರಿಷತ್‌ನಲ್ಲಿದ್ದ ಸಂದರ್ಭದಲ್ಲಿ ನಿಯೋಗದೊಂದಿಗೆ ದೆಹಲಿಗೆ ತೆರಳಿ ಪರಿಶಿಷ್ಟ ಪಂಗಡ ಪಟ್ಟಿಗೆ ತಳವಾರ ಮತ್ತು ಪರಿವಾರ ಸಮಾಜಗಳನ್ನು ಸೇರ್ಪಡೆಗೊಳಿಸಬೇಕೆಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರಿಗೆ ಮನವಿ ಸಲ್ಲಿಸಿದ್ದೆ. ಅಂದಿನ ಪ್ರಧಾನಿ ಚಂದ್ರಶೇಖರ್ ಅವರೊಂದಿಗೆ ಮಾತನಾಡಿದ್ದ ಹೆಚ್.ಡಿ. ದೇವೇಗೌಡರು, ಇದನ್ನು ಜಾರಿಗೊಳಿಸಿದ್ದರು. ಆದರೆ ರಾಜ್ಯಾದ್ಯಂತ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಅನೇಕ ತೊಡಕುಗಳು ಎದುರಾಗಿದ್ದವು. ಇತ್ತೀಚೆಗೆ ಸಂಸದರಾದ ಶ್ರೀನಿವಾಸಪ್ರಸಾದ್, ಪ್ರತಾಪ್‌ಸಿಂಹ ಹಾಗೂ ಸಚಿವ ಶ್ರೀರಾಮುಲು ಸೇರಿದಂತೆ ಹಲವರ ಹೋರಾಟದ ಫಲವಾಗಿ ತಳವಾರ ಹಾಗೂ ಪರಿವಾರ ಸಮಾಜಗಳು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಯಾಗಿವೆ ಎಂದು ಇದೇ ವೇಳೆ ಸ್ಮರಿಸಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕೇಂದ್ರ ಸರ್ಕಾರಕ್ಕೆ ಅಭಿನಂದಿಸಿದರು. ಜಿಪಂ ಮಾಜಿ ಸದಸ್ಯ ಉದ್ಬೂರು ಮಹದೇವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಜವರನಾಯ್ಕ, ಜಯಪುರ ಗ್ರಾಪಂ ಉಪಾಧ್ಯಕ್ಷ ಭೈರೇಶ್, ಗ್ರಾಪಂ ಸದಸ್ಯರಾದ ರೇಣುಕಾ, ನಾಗರಾಜು, ಮಂಜುನಾಥ್, ಕಡಕೊಳ ಕುಮಾರ ಸ್ವಾಮಿ, ರಂಗಪ್ಪ, ಗುಮಚಹಳ್ಳಿ ಚಿಕ್ಕಣ್ಣ, ಮದ್ದೂರು ಶಿವಣ್ಣ, ಟಿ.ಕಾಟೂರು ಸಿದ್ದರಾಜು, ಮಾರ್ಬಳ್ಳಿ ವೆಂಕಟೇಶ್, ಎಡಹಳ್ಳಿ ಫೋಟೋ ರಮೇಶ್, ಟೆನ್ನಿಸ್ ಗೋಪಿ, ಮುತಲಿಬ್ ಸೇರಿದಂತೆ ಚಾಮುಂಡೇಶ್ವರಿ ಕ್ಷೇತ್ರದ ನಾಯಕ ಸಮುದಾಯದ ಮುಖಂಡರು ಈ ವೇಳೆ ಉಪಸ್ಥಿತರಿದ್ದರು.

ಬಡತನರೇಖೆಗಿಂತ ಕೆಳಗಿನವರಿಗೆಲ್ಲಾ ಮೀಸಲಾತಿ!

“ ಪರಿಶಿಷ್ಟ ಪಂಗಡದ ನ್ಯಾಯಯುತವಾದ ಮೀಸಲಾತಿ ಕೊಡಲು ಸಾಧ್ಯವಾಗದಿದ್ದರೆ, ಎಲ್ಲಾ ವರ್ಗದ ಮೀಸಲಾತಿ ರದ್ದುಗೊಳಿಸಿ, ಬಡತನರೇಖೆಯಡಿ ಬರುವ ಎಲ್ಲಾ ವರ್ಗದವರಿಗೂ ಮೀಸಲಾತಿ ಕಲ್ಪಿಸುವುದೂ ಕ್ರಾಂತಿಕಾರಿ ನಿರ್ಧಾರವಾಗಲಿದೆ. ಅಲ್ಲದೆ ಒಂದು ಹೊಸ ಇತಿಹಾಸವೇ ಸೃಷ್ಟಿಯಾದಂತಾಗುತ್ತದೆ. ಈ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರು ಚಿಂತಿಸುವುದು ಒಳ್ಳೆಯದು.

–ಜಿ.ಟಿ.ದೇವೇಗೌಡ, ಶಾಸಕರು.



ಮೀಸಲಾತಿ ಪುನರ್ ರೂಪಿಸಿದರೆ ಸಮಸ್ಯೆಗೆ ಶಾಶ್ವತ ಪರಿಹಾರ ಸಾಧ್ಯ

ಬೆಂಗಳೂರು, ಆ.8– ಹಾಲಿ ಮೀಸಲಾತಿಯಲ್ಲಿರುವ ಗೊಂದಲಗಳಿಗೆ ಅಂತ್ಯ ಹಾಡಬೇಕೆಂದರೆ ಮೀಸಲಾತಿಯನ್ನು ಪುನರ್ ರೂಪಿಸುವುದೇ ಶಾಶ್ವತ ಪರಿಹಾರ ಎಂದು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಪರಿಶಿಷ್ಟ ಪಂಗಡಕ್ಕೆ ಶೇ.7.5ರಷ್ಟು ಮೀಸಲಾತಿ ಕಲ್ಪಿಸಬೇಕೆಂದು ಪಟ್ಟು ಹಿಡಿದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕಳೆದ 6 ತಿಂಗಳಿಂದ ಸತ್ಯಾಗ್ರಹದ ಮೂಲಕ ಅವಿರತ ಹೋರಾಟ ನಡೆಸುತ್ತಿರುವ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರನ್ನು ಸೋಮವಾರ ಭೇಟಿ ಮಾಡಿ, ಅವರಿಗೆ ತಮ್ಮ ಪೂರ್ಣ ಬೆಂಬಲ ಸೂಚಿಸಿ ಮಾತನಾಡಿದ ಅವರು, ಮೀಸಲಾತಿ ವಿಚಾರದಲ್ಲಿ ಸಾಕಷ್ಟು ಗೊಂದಲಗಳಿವೆ. ಇದೆಲ್ಲವನ್ನೂ ನಿವಾರಣೆ ಮಾಡದಿದ್ದಲ್ಲಿ ಹೊಸ ಹೊಸ ಸಮಸ್ಯೆಗಳಿಗೆ ದಾರಿ ಮಾಡುತ್ತದೆ ಎಂದು ಅಭಿಪ್ರಾಯಪಟ್ಟರು. ಹಾಲಿ ಇರುವಂತಹ ಮೀಸಲಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೆಗೆದು ಹಾಕಿ ಸಾಂವಿಧಾನಿಕವಾಗಿಯೇ ಬಡತನ ರೇಖೆಗಿಂತ ಕೆಳಗಿರುವವರಿಗೆ ಇಂತಿಷ್ಟು ಮೀಸಲಾತಿಯನ್ನು ನಿಗದಿಪಡಿಸಬೇಕು. ಆಗ ಮಾತ್ರ ಈ ಮೀಸಲಾತಿ ಗೊಂದಲಕ್ಕೆ ಅಂತ್ಯ ಹಾಡಲು ಸಾಧ್ಯ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಮಹಾ ಮೇಧಾವಿಗಳಿದ್ದಾರೆ. ಅವರು ಮನಸ್ಸು ಮಾಡಿದರೆ ಇದು ಸಾಧ್ಯವಿದೆ. ತಜ್ಞರನ್ನು ಬಳಸಿಕೊಂಡು ಸಮಗ್ರ ಅಧ್ಯಯನ ಹಾಗೂ ಪರಿಶೀಲನೆ ನಡೆಸಿ ಮೀಸಲಾತಿಯನ್ನು ಪುನರ್ ರೂಪಿಸುವುದು ಕಷ್ಟವೇನೂ ಆಗಲಾರದು. ಇಂತಹ ಒಂದು ಕ್ರಾಂತಿಕಾರಕ ನಿರ್ಣಯವನ್ನು ಕೈಗೊಳ್ಳಲು ಕಾಲ ಪಕ್ವವಾಗಿದೆ ಎಂದು ಅವರು ಹೇಳಿದರು. ಸಾಮಾನ್ಯವಾಗಿ ಎಲ್ಲಾ ಜನಾಂಗದವರು ಬಯಸುವುದು ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತಹ ಮೀಸಲಾತಿ. ಇದನ್ನು ಕಲ್ಪಿಸಿದರೆ ಬಹುತೇಕ ಸಮಸ್ಯೆ ಬಗೆಹರಿಯಬಹುದು ಎಂದು ಅವರು ಅಭಿಪ್ರಾಯಪಟ್ಟರು.



ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರನ್ನು ಶಾಸಕ ಜಿ.ಟಿ.ದೇವೇಗೌಡರು ಗೌರವಿಸುತ್ತಿರುವುದನ್ನು ಕಾಣಬಹುದು.


ಜಿ.ಟಿ.ದೇವೇಗೌಡರು ಸರ್ವ ಜನಾಂಗದ ನಾಯಕರು; ಶ್ರೀ ವಾಲ್ಮೀಕಿ ಪ್ರಸನ್ನಾನಂದ ಶ್ರೀಗಳು

ಬೆಂಗಳೂರು: ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡರು ತಮ್ಮ ಕ್ಷೇತ್ರದಲ್ಲಿ ಎಲ್ಲಾ ವರ್ಗದವರನ್ನು ಸಮಾನವಾಗಿ ಕಂಡು, ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಸುತ್ತಿದ್ದಾರೆ. ಅವರು ಸರ್ವ ಜನಾಂಗದ ನಾಯಕರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇವರು ದಾಖಲೆ ಅಂತರದಲ್ಲಿ ಗೆಲುವು ಸಾಧಿಸಿರುವುದೇ ಇದಕ್ಕೆ ಸಾಕ್ಷಿ. ನಮ್ಮ ಸಮುದಾಯ ಜಿ.ಟಿ.ದೇವೇಗೌಡರಿಗೆ ಸದಾ ಬೆಂಬಲವಾಗಿ ನಿಲ್ಲಲಿದೆ ಎಂದು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಆಶೀರ್ವಾದಪೂರ್ವಕವಾಗಿ ಘೋಷಿಸಿದರು. ಜಿ.ಟಿ.ದೇವೇಗೌಡರು ಉನ್ನತ ಶಿಕ್ಷಣ ಸಚಿವರಾಗಿ ರಾಜ್ಯದ ಎಲ್ಲಾ ವಿವಿ ಕುಲಪತಿಗಳು, ಶಿಕ್ಷಣ ಕ್ಷೇತ್ರದ ಅನುಭವಿಗಳು, ರಾಜ್ಯದ ಜನತೆ ಮೆಚ್ಚುಗೆ ವ್ಯಕ್ತಪಡಿಸುವ ರೀತಿ ಉನ್ನತ ಶಿಕ್ಷಣ ಖಾತೆಯನ್ನು ನಿರ್ವಹಿಸಿದರು. ಆ ಮೂಲಕ ಇಲಾಖೆಯ ಘನತೆ ಎತ್ತಿ ಹಿಡಿದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜಿ.ಟಿ.ದೇವೇಗೌಡರು ದಾವಣಗೆರೆಯ ರಾಜನಹಳ್ಳಿಯಲ್ಲಿ ನಡೆದ ವಾಲ್ಮೀಕಿ ಜಾತ್ರೆಗೆ ವೈಯಕ್ತಿಕವಾಗಿ 10 ಲಕ್ಷ ರೂ. ಅನ್ನು ಭಕ್ತಿಪೂರ್ವಕವಾಗಿ ನೀಡಿರುವುದನ್ನು ಸ್ಮರಿಸಿದ ಶ್ರೀಗಳು, ಅದನ್ನು ತೇರು ನಿರ್ಮಾಣಕ್ಕೆ ಬಳಸಿಕೊಳ್ಳುತ್ತಿರುವುದಾಗಿ ತಿಳಿಸಿದರು.

ಅಲ್ಲದೆ, ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿ, ಆಶೀರ್ವದಿಸಿದರು. ಇದೇ ವೇಳೆ ಜಿ.ಟಿ.ದೇವೇಗೌಡರೂ ಶ್ರೀಗಳಿಗೆ ಗೌರವ ಸಮರ್ಪಿಸಿದರು.



ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಶಾಸಕ ಜಿ.ಟಿ.ದೇವೇಗೌಡರನ್ನು ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರು ಸನ್ಮಾನಿಸಿದರು.



ನಕ್ಕರೆ ಅದೇ ಸ್ವರ್ಗ

ಆತ : ನಾನು ಲಕ್ಷಾಧೀಶ್ವರ ಆಗಿದ್ದು ನನ್ನ ಹೆಂಡತಿಯಿಂದ
ಈತ : ಇದಕ್ಕೆ ಮುಂಚೆ ಏನಾಗಿದ್ರಿ
ಆತ : ಕೋಟ್ಯಾಧೀಶ್ವರ!

ಮೈಸೂರು ಮಿತ್ರ
ಮಂಗಳವಾರ, 9 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ಎಲ್ಲಾ ಪೂಜೆ ಪುನಸ್ಕಾರಗಳ ಸಾರಾಂಶ ಅಷ್ಟೇ..; ಪವಿತ್ರವಾಗಿರುವುದು ಮತ್ತು ಇತರರಿಗೆ ಒಳ್ಳೆಯದನ್ನು ಮಾಡುವುದು. – ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಳ ನೋಡಿ ಪಾಯ ಹಾಕು

ನಿಮ್ಮ ಪತ್ರಗಳು

ಉಚಿತ ಕೊಡುಗೆಗಳು ದೇಶಕ್ಕೆ ಮಾರಕ!

ಮಾನ್ಯರೆ,

ಚುನಾವಣೆ ವೇಳೆಯ ಸಮಯದಲ್ಲಿ ರಾಜಕೀಯ ಪಕ್ಷಗಳು ಮತದಾರರನ್ನು ತಮ್ಮತ್ತ ಸೆಳೆಯಲು ಘೋಷಣೆ ಮಾಡುವ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್ ಇವುಗಳ ನಿಯಂತ್ರಣಕ್ಕೆ ತಜ್ಞರ ಸಮಿತಿ ರಚನೆಗೆ ಪ್ರಸ್ತಾಪ ಮಾಡಿರುವುದು ಮೆಚ್ಚುಗೆಯ ಸಂಗತಿಯಾಗಿದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳು ಈಗ ದೇಶಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರಗಳಂತೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಹೇಗಾದರೂ ಸರಿ ಅಧಿಕಾರಕ್ಕೇರಲೇಬೇಕು ಎಂಬ ಉಮೇದಿಯೊಂದಿಗೆ ರಾಜಕೀಯ ಪಕ್ಷಗಳು ಚುನಾವಣೆ ಪೂರ್ವದಲ್ಲಿ ಮಾಡುವ ಈ ಉಚಿತ ಘೋಷಣೆಗಳು ಜಾರಿಗೆ ಬಂದರೆ ಅವುಗಳ ಹೊರೆ ಬೀಳುವುದು ತೆರಿಗೆದಾರರ ಮೇಲೆಯೇ. ಒಂದು ಪಕ್ಷ ಅಧಿಕಾರದ ಗದ್ದುಗೆ ಏರಲು ಸಾರ್ವಜನಿಕರ ಹಣವನ್ನು ಈ ರೀತಿ ಬೇಕಾಬಿಟ್ಟಿ ಪೋಲು ಮಾಡುವುದು ಎಷ್ಟು ಸರಿ ಎಂಬ ಚರ್ಚೆ ಹಾಗೂ ಆತ್ಮಾವಲೋಕನ ನಡೆಯುವುದು ಅವಶ್ಯಕ. ಉಚಿತ ಘೋಷಣೆಗಳ ಜಾರಿಯಿಂದಾಗಿ ರಾಜ್ಯ ಹಾಗೂ ದೇಶಗಳ ಆರ್ಥಿಕ ಪರಿಸ್ಥಿತಿ ಹಳ್ಳ ಹಿಡಿಯುತ್ತದೆ. ರಾಜಕೀಯ ಪಕ್ಷಗಳು ಆದಾಯ ಹೆಚ್ಚಳ, ಆರ್ಥಿಕ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಸೃಷ್ಟಿಯ ಮೂಲಕ ದುಡಿಯುವ ವರ್ಗವನ್ನು ಸೃಷ್ಟಿಸಬೇಕೇ ಹೊರತು ಉಚಿತ ಘೋಷಣೆಗಳನ್ನು ಮಾಡಿ ರಾಜ್ಯಗಳ ಆರ್ಥಿಕತೆಯನ್ನು ಹದಗೆಡಿಸುವುದಲ್ಲ.

ಉಚಿತ ವಿದ್ಯುತ್, ಸಾಲ ಮನ್ನಾ, ಉಚಿತ ಬಸ್ ಪ್ರಯಾಣ, ನೀರು, ಕಂಪ್ಯೂಟರ್, ಟಿವಿ... ಹೀಗೆ ಸಾಲು ಸಾಲು ಉಚಿತವಾಗಿ ಕೊಡುತ್ತೇವೆ ಎಂಬ ಭರವಸೆಗಳನ್ನು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನವನ್ನು ಮೊದಲು ಕೈಬಿಡಬೇಕು. ಪ್ರತಿ ಚುನಾವಣೆಯಲ್ಲಿ ಜನರಿಗೆ ನೀಡಲಾಗುವ ಈ ರೀತಿಯ ಉಚಿತ ಘೋಷಣೆ ಹಾಗೂ ಕೊಡುಗೆಗಳಿಗೆ ಇತಿಶ್ರೀ ಹಾಕಲೇಬೇಕಾಗಿದೆ. ಪ್ರಸ್ತುತ ಸುಪ್ರೀಂಕೋರ್ಟ್, ರಾಜಕೀಯ ಪಕ್ಷಗಳು ಚುನಾವಣಾ ಸಮಯದಲ್ಲಿ ನೀಡುವ ಈ ಉಚಿತ ಕೊಡುಗೆಗಳಿಂದಾಗುವ ಗಂಭೀರ ಆರ್ಥಿಕತೆಯ ಹೊರೆಯ ಪರಿಣಾಮವನ್ನು ಗಮನಿಸಿಯೇ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿ, ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗ ಈ ನಿಟ್ಟಿನಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ವಿಷಯವನ್ನು ಪ್ರಸ್ತುತ ದೇಶದ ಮುಂದೆ ಚರ್ಚೆಗೆ ತಂದು, ಈ ಸಂಬಂಧ ತಜ್ಞರ ಸಮಿತಿ ರಚಿಸಲು ಮುಂದಾಗಿರುವುದು ಅತ್ಯಂತ ಪ್ರಶಂಸನೀಯ ಸಂಗತಿಯಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಶಿಥಿಲಾವಸ್ಥೆಯಲ್ಲಿರುವ ಗೊಬ್ಬಳಿ ಮರ ತಂಗುದಾಣ

ಮಾನ್ಯರೆ,

ಮೈಸೂರು ನಗರ ಜೆ.ಪಿ. ನಗರದ ಗೊಬ್ಬಳಿಮರ ತಂಗುದಾಣವು ಶಿಥಿಲಾವಸ್ಥೆಯನ್ನು ತಲುಪಿದೆ. ಪ್ರಸ್ತುತ ಪ್ರತಿದಿನವೂ ಸತತವಾಗಿ ಮಳೆ ಸುರಿಯುತ್ತಿರುವುದರಿಂದ, ತಂಗುದಾಣದ ತಾರಸಿಯಿಂದ ನಿರಂತರವಾಗಿ ನೀರು ಸುರಿಯುತ್ತಿದ್ದು, ಕಟ್ಟಡವು ಅಧಿಕ ತೇವಾಂಶದಿಂದ ಕೂಡಿರುತ್ತದೆ. ಸಿಮೆಂಟ್ ಗಾರೆ ಸಡಿಲವಾಗುತ್ತಿದೆ. ಪ್ರತಿದಿನವೂ ಬಹಳಷ್ಟು ಸಂಖ್ಯೆಯ ಶಾಲಾ ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಈ ತಂಗುದಾಣ ಅವಲಂಬಿತರಾಗಿದ್ದು, ಭಯದಿಂದ ಈ ತಂಗುದಾಣದಲ್ಲಿ ಬಸ್ಸಿಗಾಗಿ ಕಾಯುವಂತಾಗಿದೆ. ಆದಕಾರಣ ಸಂಬಂಧಪಟ್ಟ ನಗರ ಪಾಲಿಕೆ ಸದಸ್ಯರು ಮತ್ತು ಅಧಿಕಾರಿಗಳು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಅನಾಹುತ ಸಂಭವಿಸುವ ಮುನ್ನ ಆದಷ್ಟು ಶೀಘ್ರ ಗೊಬ್ಬಳಿಮರ ತಂಗುದಾಣವನ್ನು ದುರಸ್ತಿಗೊಳಿಸಬೇಕೆಂದು ಮನವಿ.

–ಪರಶಿವಮೂರ್ತಿ, ಮೈಸೂರು.

ಶಾಸಕರಲ್ಲಿ ಮನವಿ

ಮಾನ್ಯರೆ,

ಮೈಸೂರು ವಿಜಯನಗರದ 4ನೇ ಹಂತ ಹಾಗೂ 3ನೇ ಹಂತದ ಬಡಾವಣೆಗೆ ಸಮರ್ಪಕವಾದ ಬಸ್ ವ್ಯವಸ್ಥೆ ಇರುವುದಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ, ಕಾರ್ಮಿಕರಿಗೆ, ಆಸ್ಪತ್ರೆಗೆ ತೆರಳುವ ಹಿರಿಯ ನಾಗರಿಕರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಶಾಸಕರು ಹಾಗೂ ಅಧಿಕಾರಿಗಳು ಗಮನಹರಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕಳಕಳಿಯ ಮನವಿ.

– ನೊಂದ ವಿದ್ಯಾರ್ಥಿಗಳು, ಮೈಸೂರು.

ಕ್ರಿಕೆಟ್ ಬೆಟ್ಟಿಂಗ್‌ಗೆ ಕಡಿವಾಣ ಹಾಕಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಮೈಸೂರಿನ ಕೆಲವು ಭಾಗಗಳಲ್ಲಿ ಕ್ರಿಕೆಟ್ ಬೆಟ್ಟಿಂಗ್‌ನ ಹಾವಳಿ ಹೆಚ್ಚಾಗಿದೆ. ವಿಪರ್ಯಾಸವೆಂದರೆ ವಿದ್ಯಾವಂತ ಯುವಕರೇ ಇದರ ದಾಸರಾಗಿ ತಮ್ಮ ಅಮೂಲ್ಯ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಹಣ ಕಳೆದುಕೊಂಡಿರುವವರು ದ್ವಿಚಕ್ರ ವಾಹನ ಕಳ್ಳತನ, ಸರಗಳ್ಳತನ ಮುಂತಾದ ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗಿ ಸಮಾಜಕ್ಕೆ ಕಂಟಕರಾಗುತ್ತಿದ್ದಾರೆ. ಇದರ ಬಗ್ಗೆ ಪೊಲೀಸ್ ಆಯುಕ್ತರು ಕಡಿವಾಣ ಹಾಕಿ ಜನರ ಶಾಂತಿಯನ್ನು ಕಾಪಾಡಬೇಕಾಗಿ ಮನವಿ.

– ಸುಣ್ಣದಕೇರಿ ನಿವಾಸಿಗಳು, ಮೈಸೂರು.

ಕಸ್ತೂರಿ ರಂಗನ್ ವರದಿ ಕನ್ನಡಕ್ಕೆ ಅನುವಾದಿಸಿ

ಮಾನ್ಯರೆ,

ರಾಜ್ಯದಲ್ಲಿ ಕಸ್ತೂರಿ ರಂಗನ್ ವರದಿಯ ಕುರಿತು ಮಲೆನಾಡಿನ ಭಾಗದ ರೈತರು ಮತ್ತು ಜಮೀನುದಾರರಲ್ಲಿ ತಪ್ಪು ಮಾಹಿತಿ ಇದ್ದು! ಅನೇಕ ರೈತ ಸಂಘಟನೆಗಳು ಮತ್ತು ರೈತರು ವರದಿ ಜಾರಿಗೊಳಿಸಲು ವಿರೋಧಿಸುತ್ತಿದ್ದಾರೆ.

ಪಶ್ಚಿಮ ಘಟ್ಟಗಳ ಪರಿಸರವನ್ನು ಉಳಿಸುವ ಸದುದ್ದೇಶದಿಂದ ವರದಿಯನ್ನು ತಯಾರಿಸಲಾಗಿದೆ. ಈ ವರದಿಯ ಕೂಲಂಕುಷ ಮಾಹಿತಿ ತಿಳಿಯದೆ ವಿರೋಧಿಸುವುದು ಸರಿಯಲ್ಲ. ಇನ್ನೂ ಕೆಲವರು ವರದಿ ಜಾರಿಯಾದರೆ ಸಮಸ್ಯೆಯಾಗಬಹುದೆಂದು ಭಯಭೀತರಾಗಿದ್ದಾರೆ. ಈ ಎಲ್ಲಾ ಗೊಂದಲ ನಿವಾರಿಸಲು ಕಸ್ತೂರಿ ರಂಗನ್ ವರದಿಯನ್ನು ಕನ್ನಡಕ್ಕೆ ಅನುವಾದಿಸಿ ಮಲೆನಾಡ ಭಾಗದ ರೈತರಿಗೆ ಮತ್ತು ಸಂಘಟನೆಗಳಿಗೆ ನೀಡಿ ವರದಿಯ ಬಗ್ಗೆ ಮಾಹಿತಿ ತಿಳಿಸುವ ಕೆಲಸ ಸರಕಾರ ಮಾಡಬೇಕು. ಇದರಿಂದ ವರದಿಯ ಸತ್ಯಾಸತ್ಯತೆ ಅವರೇ ಅರಿಯುವಂತೆ ಮಾಡಬೇಕು.

–ಚನ್ನಕೇಶವ ಜಿ, ಕೆ. ತರೀಕೆರೆ

ದೀಪ ಸಾಲು



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ಮನಸ್ಸೆಂಬ ಮೆಸೇಜ್ ಬಾಕ್ಸಿನಲ್ಲಿ ಸಹನೆ, ಸಮಾಧಾನಗಳು...!

ಒಮ್ಮೊಮ್ಮೆ ನಮ್ಮ ತಾಳ್ಮೆ, ನಮ್ಮ ಸಹಿಷ್ಣುತೆ, ಬೇರೆಯವರಿಗೆ ದೌರ್ಬಲ್ಯದಂತೆ ಕಾಣುತ್ತದೆ. ಗೂಳಿ ಗುಟುರು ಹಾಕಿದಂತೆ ಮಾತಾಡುವವರು ಹೀರೋಗಳಂತೆ ಕಾಣುತ್ತಿರುತ್ತಾರೆ.

ಒಮ್ಮೆ ಕಚೇರಿಯಲ್ಲಿ, ನನ್ನ ಗೆಳೆಯನೊಬ್ಬನಿಗೆ ಅವನ ಮೇಲಾಧಿಕಾರಿ ಕಪಾಳಕ್ಕೆ ಹೊಡೆದಂತೆ ಮಾತಾಡಿಬಿಟ್ಟಿದ್ದರು. ಆತ ತುಂಬ ಸೂಕ್ಷ್ಮ, ದಕ್ಷ ಕೆಲಸಗಾರ, ಸಮಯದ ಪರಿವೆಯೇ ಇಲ್ಲದೆ ಕೆಲಸ ಮಾಡುತ್ತಿದ್ದ ಸೂಕ್ಷ್ಮಮತಿ ಅಧಿಕಾರಿಯಾಗಿದ್ದ. ಪ್ರಾಮಾಣಿಕ ಕೂಡ, ದುಡ್ಡು ಮಾಡುವ ಅಯಕಟ್ಟಿನ ಜಾಗದಲ್ಲಿದ್ದರೂ ದುಡ್ಡು ಆತನ ಆದ್ಯತೆ ಆಗಿರಲಿಲ್ಲ. ನಿರುಪದ್ರವಿ ಜೀವಿ. ಆದರೆ ಅವನ ಮೇಲಾಧಿಕಾರಿಗೆ ಕೂಡ ಅವನನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ ಎಂಬಂತೆ ಅನಿವಾರ್ಯತೆ ಸೃಷ್ಟಿಯಾಗಿದ್ದಂತಹ ಅಧಿಕಾರಿ ಆತ. ಆದರೆ ಈತನಿಗಿಂತ ವಯೋಮಾನದಲ್ಲಿ ಚಿಕ್ಕವರಾದ ಮೇಲಾಧಿಕಾರಿಯೊಬ್ಬರು ಈತನಿಗೆ 'ಬಾಸ್' ಆಗಿ ಬಂದರು. ಅವರ ವೇಗಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದ ಈತನ ಮೇಲೆ ಒಮ್ಮೆ ವಿನಾಕಾರಣ ಸ್ಟ್ರೆಸ್‌ಗೆ ಒಳಗಾಗಿ ಯಾರದೋ ಮೇಲಿನ ಕೋಪ ತಂದು ಆ ಮೇಲಾಧಿಕಾರಿ ಈತನಿಗೆ ಎಲ್ಲರೆದರೇ ಬೈದು ಬಿಟ್ಟರು! ಆದರೆ ಕೆಲಸದಲ್ಲಿ, ಪರಿಣತಿ, ಶ್ರದ್ಧೆ, ಶಿಸ್ತು, ದಕ್ಷತೆ ಎಲ್ಲದರಲ್ಲೂ ಪರಿಪೂರ್ಣನಾಗಿದ್ದ ಈ ವ್ಯಕ್ತಿ ಮಾತ್ರ ಎಲ್ಲರೆದುರು ಆ ಮೇಲಾಧಿಕಾರಿಗೆ ತಿರುಗಿ ಮಾತಾಡದೆ ಎದ್ದು ಹೊರಟು ಬಿಟ್ಟರು. ಆಚೆ ಬಂದ ಮೇಲೆ ಆತನ ಗೆಳೆಯರ ವೃಂದ ಮತ್ತೆ ಆತನನ್ನು ಹಂಗಿಸಿ ಮಾತಾಡಿದರು. ನೀನೇಕೆ ಅಲ್ಲಿ ತಿರುಗಿ ಮಾತನಾಡಲಿಲ್ಲ! ನನ್ನಂಥವನಾಗಿದ್ದರೆ, ಹಾಗೆ ಮಾಡುತ್ತಿದ್ದೆ, ಹೀಗೆ ಮಾತಾಡುತ್ತಿದ್ದೆ, ಸರಿಯಾಗಿ ಉತ್ತರ ಕೊಡುತ್ತಿದ್ದೆ, ಏನೆಂದು ತಿಳಿದುಕೊಂಡಿದ್ದಾರೆ ಅವರು, ಇಷ್ಟೆಲ್ಲಾ ಕೆಲಸ ಮಾಡಿಯೂ ಮುಖಕ್ಕೆ ಮಂಗಳಾರತಿ ಮಾಡಿಸಿಕೊಳ್ಳಬೇಕು ಎಂದರೆ ಯಾರಿಗೆ ತಾನೆ ಮನಸ್ಸು ಬರುತ್ತದೆ ಎಂಬಿತ್ಯಾದಿ ವೈಖರಿಗಳು, ವೀರಾವೇಶದ ನುಡಿಗಳು ಆ ವ್ಯಕ್ತಿಯನ್ನು ಕಂಗೆಡಿಸಿ ಮನಸ್ಸಿನ ಮೂಲೆಯಲ್ಲೆಲ್ಲೋ ಹೌದಲ್ಲ ನಾನು ಅವರ ಮುಂದೆ ಮಾತಾಡಬೇಕಿತ್ತು. ನಾನೇಕೆ ಹಾಗೆ ಮೌನಿಯಾದೆ, ಕೆಲಸ ಮಾಡಿಯೂ ಬೈಸಿಕೊಳ್ಳುವುದು ಯಾವ ನ್ಯಾಯ, ಸುಖಾಸುಮ್ಮನೆ ವಿನಾ ಕಾರಣ ಯಾರಾದರೂ ನಮ್ಮನ್ನು ಹಂಗಿಸಿ ಹಿಂಸಿಸಿದಾಗ ಸುಮ್ಮನಿರುವುದು ಕೂಡ ದೌರ್ಬಲ್ಯವೇ ಅಲ್ಲವೇ? ನಮ್ಮ ಮನಸ್ಸಿಗೆ ಘಾಸಿಯಾದರೂ ನಮಗೆ ಅಪಮಾನವಾದರೂ ಸುಮ್ಮನಿರಬೇಕೆ? ಎದುರಿಗಿದ್ದ ಜನ ತಪ್ಪು ತಿಳಿಯುವುದಿಲ್ಲವೆ? ಸಕಾಲದಲ್ಲಿ ಮಾತನಾಡಲು ಬಿಡದ ನನ್ನ ವ್ಯಕ್ತಿತ್ವದಲ್ಲೇ ಇರುವ ಸೌಮ್ಯತೆ ಸಹನೆ ಸಮಾಧಾನಗಳು ನನ್ನನ್ನು ಸೋಲಿಸಿದವೇ?? ಎಂದೆಲ್ಲಾ ಮನಸ್ಸು ಯೋಚಿಸತೊಡಗಿತು.



ಶಾಂತಿ, ಸಮಾಧಾನ ಸಹೃದಯತೆಗಳು ಎಲ್ಲಿ ಪ್ರದರ್ಶನವಾಗಬೇಕು ಅಲ್ಲಿಯೇ ಪ್ರದರ್ಶನವಾಗಬೇಕಲ್ಲವೇ, ಮೌನ ನಮ್ಮ ದೌರ್ಬಲ್ಯವಲ್ಲ. ನಮ್ಮ ಸ್ವಭಾವ ಎನ್ನುವುದು ಇಂಥವರಿಗೆ ಅರ್ಥವಾಗುವುದಾದರೂ ಯಾವಾಗ? ಹೀಗೆ ಎಡೆಬಿಡದ ಪ್ರಶ್ನೆಗಳು ಮನಸ್ಸನ್ನು ಬಾಧಿಸುತ್ತಿರುವಾಗ ಆಕಸ್ಮಿಕವಾಗಿ ನಾನವರನ್ನು ಭೇಟಿಯಾದೆ, ಮ್ಲಾನವದನರಾದ ಅವರು ನನ್ನನ್ನು ಒಂದು ಪ್ರಶ್ನೆ ಕೇಳಿದರು.

ಸಹನೆ ದೌರ್ಬಲ್ಯವಾ? ಶಕ್ತಿಯಾ ಅಂತ. ನಾನು ಏನೋ ಹೇಳುವಷ್ಟರಲ್ಲಿ ಅವರ ಮೊಬೈಲ್‌ನ ಮೆಸೇಜ್ ಇನ್‌ಬಾಕ್ಸ್‌ಗೆ ಠಳ್ ಅಂತ ಒಂದು ಮೆಸೇಜ್ ಬಂದು ಅಮು ಸ್ವ ಮಾತಿಗಾಗಿ ಕಾಯುತ್ತ ಹಾಗೆಯೇ ಮೊಬೈಲ್‌ನಲ್ಲಿ ಬಂದ ಮೆಸೇಜ್ ಕಡೆಗೆ ಕಣ್ಣು ಹಾಯಿಸಿದರು. ಆ ಮೆಸೇಜಿನಲ್ಲಿ ಅಂಥಾದ್ದೇನಿತ್ತು ಎಂದು ನನಗೆ ಅರ್ಥವಾಗಲಿಲ್ಲ. ಆದರೆ ಅವರ ಮುಂಗೈ ನನ್ನ ಅಂಗೈಯನ್ನು ಗಟ್ಟಿಯಾಗಿ ಹಿಡಿದುಕೊಂಡು ಜೋರಾದ ನಿಟ್ಟುಸಿರೊಂದನ್ನು ಎಳೆದುಕೊಂಡರು. ಒಮ್ಮೆ ಜೋರಾಗಿ ನಕ್ಕುಬಿಟ್ಟರು. ನಾನು ಏನಾಯ್ತು ಎಂದೆ? ಅವರು, ಅವರ ಮೊಬೈಲ್‌ನ ಮೆಸೇಜ್ ಇನ್‌ಬಾಕ್ಸಿನಲ್ಲಿದ್ದ ಮೆಸೇಜಿನ ತುಣುಕೊಂದನ್ನು ತೆರೆದು ತೋರಿಸಿದರು. ಅದರಲ್ಲಿ `I am sorry sir, please excuse me' ಎಂಬ ಮೆಸೇಜು ಕಾಣುತ್ತಿತ್ತು. ಅದನ್ನು ಕಳಿಸಿದವರು ಬುದ್ಧಿವಂತ ಐ.ಎ.ಎಸ್ ಅಧಿಕಾರಿ, ಅದು ಬಂದಿದ್ದು ಸಂವೇದನಾಶೀಲ ಸೂಕ್ಷ್ಮ ಕಿರಿಯ ಮನಸ್ಸಿನ ಅವರ ಕೈಕೆಳಗೆ ಕೆಲಸ ಮಾಡುವ ಹಿರಿಯ ಸಹೋದ್ಯೋಗಿಗೆ. ಅಲ್ಲಿಗೆ ನನಗೆ ಮಾತನಾಡುವ ಅವಕಾಶವೇ ಬರಲಿಲ್ಲ. ಬೇಸರವಾಗಿದ್ದ ಮನಕ್ಕೆ ಬೇಸರ ಮಾಡಿದ್ದವರೇ ಸಮಾಧಾನದ ತಂಪೆರೆದು ತನಗೆ ಅಧಿಕಾರದ ಜೊತೆ ಸಹೃದಯತೆ ಕೂಡ ಇದೆ, ತಪ್ಪನ್ನು ತಿದ್ದಿಕೊಂಡು ನೊಂದುಕೊಂಡವರ ಮನಸ್ಸನ್ನು ಸರಿ ಮಾಡುವ ಸೂಕ್ಷ್ಮತೆಯೂ ಕೂಡ ಇದೆ.

ವಯಸ್ಸಿನಲ್ಲಿ ಕಿರಿತನವಿದ್ದರೂ, ಆಲೋಚನೆಯಲ್ಲಿ ಹಿರಿತನವಿದೆ ಎಂಬುದನ್ನು ತೋರಿಸಿಕೊಟ್ಟಿದ್ದರು. ಅಲ್ಲಿಗೆ ಇವರ ತಾಳ್ಮೆ ಗೆದ್ದಿತ್ತು, ಸಹನೆ ಸಾಕ್ಷಿಯಾಗಿತ್ತು. ಮಾತು ಬೆಳ್ಳಿ ಮೌನ ಬಂಗಾರ ಎಂಬ ಮಾತು ಘನತೆಯಿಂದ ಅವರನ್ನು ಗೆಲ್ಲಿಸಿತ್ತು. ಆ ಐ.ಎ.ಎಸ್ ಅಧಿಕಾರಿ ಇದನ್ನು ಅಲ್ಲಿಗೇ ಬಿಡಲಿಲ್ಲ. ಇವರನ್ನು ಕರೆದು ಗೌತಮಬುದ್ಧ ಅನುಭವಿಸಿದ ಇಂಥದೇ ಮುಜುಗರದ ಕತೆಯೊಂದನ್ನು ಹೇಳಿದರು.

ಹೆಂಡತಿ ಯಶೋಧರೆ, ಪುತ್ರ ರಾಹುಲನನ್ನು ಬಿಟ್ಟು ರಾಜತ್ವದಿಂದ ವೈರಾಗ್ಯದ ಕಡೆಗೆ ಕಪಿಲ ವಸ್ತುವನ್ನು ಬಿಟ್ಟು ಹೊರಟ ಸಿದ್ಧಾರ್ಥನನ್ನು, ಬುದ್ಧನ ಅವತರಣಿಕೆಯಾಗಿ ಸಮಾಜ ಕೂಡ ಏಕಾಏಕಿ ಸ್ವೀಕರಿಸಲಿಲ್ಲ. ಕೆಲವರು ಬುದ್ಧನನ್ನು ಅಪಮಾನಿಸಿ ಮುಜುಗರಗೊಳಿಸಿದರು ಎಂಬುದಕ್ಕೆ ಸಿದ್ಧಾರ್ಥ ಬುದ್ಧನಾದ ಮೇಲೆ ಬೀದಿಯಲ್ಲಿ ತನ್ನ ಶಿಷ್ಯರೊಂದಿರೊಡಗೂಡಿ ತೆರಳುತ್ತಿರುವಾಗ ಮಾರ್ಗ ಮಧ್ಯದಲ್ಲಿ ಶಿಷ್ಯನೊಬ್ಬ ಗುರುಗಳಿಗೆ ಹಸಿವು ಎಂದನಂತೆ. ಅದೇ ಬೀದಿಯಲ್ಲಿ ವಾಸವಿದ್ದ ಅನುಕೂಲಸ್ಥರೊಬ್ಬರ ಮನೆಯ ಮುಂದೆ ಎರಡೂ ಕೈನೀಡಿ ಬೇಡಿದ ಗೌತನಬುದ್ಧನಿಗೆ ಎಂಥ ಮುಜುಗರ ಕಾದಿತ್ತು ಎಂದರೆ!, ಶ್ರೀಮಂತಿಕೆ ಅಧಿಕಾರ ತ್ಯಜಿಸಿ ಹೀಗೆ ಬೌದ್ಧ ಭಿಕ್ಷುವಾಗಿ ಪರಿವರ್ತಿತವಾದ ಬುದ್ಧನ ಬದಲಾವಣೆ ಆ ಜನಕ್ಕೆ ಇಷ್ಟವಾಗುವುದಿಲ್ಲ. ಕೈನೀಡಿ ಬೇಡಿದ ಬುದ್ಧನ ಕೈಗೆ ಆ ಮನೆಯ ಜನ ಎಂಜಲು ಉಗುಳಿ ಇದೇ ನಮ್ಮ ಭಿಕ್ಷೆ ತೆಗೆದುಕೋ ಎನ್ನುತ್ತಾ ರಾಜನಾಗಿದ್ದ ನೀನು ವೈರಾಗ್ಯದ ಭರದಲ್ಲಿ ಹೀಗಾಗಬೇಕಿತ್ತೆ ಎನ್ನುವ ಕೆಟ್ಟ ನೋಟದಲ್ಲಿ ಬುದ್ಧನನ್ನು ನೋಡುತ್ತಾರೆ. ಇಂತಹ ಅಸಹನೀಯ ಸನ್ನಿವೇಶದಲ್ಲಿ ಕೂಡ ಬುದ್ಧ ವಿಚಲಿತನಾಗಲಿಲ್ಲ ಆದ ಅಪಮಾನದಿಂದ ಮತ್ತೆ ರಾಜಪ್ರಭುತ್ವದ ಕಡೆಗೆ ತೆರಳಿ ಬುದ್ಧತ್ವಕ್ಕೆ ವಿಮುಖನಾಗಿ ಸಿದ್ಧಾರ್ಥನಾಗಲಿಲ್ಲ. ಮನಸ್ಸಿನ ಮೇಲಿನ ಹಿಡಿತ ಲೋಕ ವ್ಯವಹಾರದ ಅವಿಷ ವ್ಯಾಮೋಹಗಳ ತವಕದಲ್ಲಿ ಅವರು ಹಾಗೆ ಮಾಡಿರಬಹುದು ಎಂದು ಅಪಮಾನಿಸಿದವರ ಬಗ್ಗೆಯೂ ತನ್ನ ಮನಸ್ಸಿಗೆ ಬುದ್ಧ ಸಮಜಾಯಿಷಿ ಕೊಟ್ಟುಕೊಳ್ಳುತ್ತಾನೆ. ಆದರೆ ಬುದ್ಧ ಮಾತ್ರ ಅವರು ಉಗುಳಿದ ಎಂಜಲನ್ನು ತನ್ನ ಬಟ್ಟೆಗೆ ಒರೆಸಿಕೊಂಡು ನೀವು ಕೊಟ್ಟ ಎಂಜಲಿನ ಭಿಕ್ಷೆ ನನಗಾಯಿತು! ಈಗ ಹಸಿದ ನನ್ನ ಶಿಷ್ಯಂದಿರಿಗೇನಾದರೂ ಕೊಡಿ ಎಂದು ಮತ್ತೆ ಕೈಚಾಚುತ್ತಾನೆ. ಆದರೆ ಕೈಚಾಚಿದ ಗೌತಮಬುದ್ಧನ ಕೈಗೆ ಭಿಕ್ಷೆ ನೀಡಲು ಅಲ್ಲಿ ನಿಂತಿದ್ದವರೆಲ್ಲ ಬುದ್ಧನ ಪ್ರಬುದ್ಧತೆ, ಶಾಂತಿ, ಸಮಾಧಾನ, ಸಹನೆ, ತಾಯ್ತನ. ಉದ್ವಿಗ್ನತೆಗೊಳಗಾಗದೇ ಗೆದ್ದು ನಿಂತ ಆತ್ಮಶಕ್ತಿಗಳ ಮುಂದೆ ನಿಲ್ಲಲೇ ಇಲ್ಲ. ಅಲ್ಲಿದ್ದವರೆಲ್ಲ ಬುದ್ಧನ ಪಾದಗಳ ಮೇಲೆ ಬಿದ್ದು ಪಶ್ಚಾತ್ತಾಪದ ಕಣ್ಣೀರಿನಲ್ಲಿ ತೊಯ್ದು ತೊಪ್ಪೆಯಾಗುತ್ತಾರೆ. ನಂತರ ಅವರ ತಪ್ಪಿನ ಅರಿವಾಗಿ ಅರಿವಿಗೆ, ಗುರುವಿಗೆ, ಸಹನೆಗೆ ಇರುವ ಶಕ್ತಿ ಎಂಥದ್ದು ಎಂಬುದಕ್ಕೆ ಮನಸೋತು, ಬುದ್ಧನ ಅನುಯಾಯಿಗಳಾಗುತ್ತಾರೆ. ಅದೇ ಬುದ್ಧಂ ಶರಣಂ ಗಚ್ಛಾಮಿ

ಬುದ್ಧನಂತಹ ಅಪ್ರತಿಮ ಅರಿವಿನ ಗುರುವಿಗೇ ತಾಳ್ಮೆ ಎನ್ನುವುದು ಅನುರೂಪವಾಗಿತ್ತು ಎಂದ ಮೇಲೆ, ಹೊಲಗದ್ದೆಗಳಲ್ಲಿ, ಕಚೇರಿಗಳಲ್ಲಿ, ಸೋಶಿಯಲ್ ಮೀಡಿಯಾದಲ್ಲಿ, ಮನೆಗಳಲ್ಲಿ, ಕಾರ್ಪೋರೇಟ್ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಒತ್ತಡಕ್ಕೆ ಒಳಗಾಗಿಯೋ, ಮಾಹಿತಿ ಕೊರತೆಯಿಂದಲೋ, ಅಸಹನೀಯ ಸಾಂದರ್ಭಿಕ ಕಾರಣಗಳಿಂದಲೋ, ಏನೋ! ಮೇಲಾಧಿಕಾರಿಗಳೋ, ದೊಡ್ಡವರೆನ್ನಿಸಿಕೊಂಡವರೋ, ಮಾಲೀಕರೋ, ಅಪ್ಪನೋ, ಅಮ್ಮನೋ, ಅಣ್ಣನೋ, ಅಕ್ಕನೋ, ಯಾರೋ ಒಬ್ಬರು ಏನಾದರು ಮನಸ್ಸಿಗೆ ನೋವಾಗುವಂಥ ಮಾತಾಡಿದಾಗ ನಾವೂ ತಿರುಗಿ ಅದನ್ನೇ ಉಲ್ಟಾ ಸೀದಾ ಬಾರಿಸಿ, ಮಾತಿನಲ್ಲೇ ಎಲ್ಲವನ್ನೂ ತಿರುಗಿಸಿ ವಾಪಸ್ಸು ಕೊಟ್ಟು ವೀರಾಧಿವೀರರಾದರೆ ಅಲ್ಲಿಗೆ ಇಬ್ಬರ ಸಂಬಂಧದ ಕತೆ ಮುಗಿದಂತೆಯೇ ಸರಿ. ಕೆಲಸ ಮಾಡುವ ಜಾಗದಲ್ಲಿ ಆತಂಕದ ವಾತಾವರಣಕ್ಕೆ ನಾವೇ ನಮ್ಮನ್ನು ಸಿಕ್ಕಿಸಿ ತೂಗು ಹಾಕುತ್ತೇವೆ. ಉತ್ತಮ ಬಾಳುವೆಗೆ, ನಿರಂತರ ಆದರಗಳಿಗೆ ಪ್ರೀತಿಯ ಪರಾಕಾಷ್ಠತೆಗೆ ಎಂದೆಂದಿಗೂ ಹಾಸು ಹೊಕ್ಕಾಗುವುದು ನಮ್ಮ ತಾಳ್ಮೆ, ನಮ್ಮ ಸಹನೆ, ನಮ್ಮ ಸಮಾಧಾನ. ಕ್ಷಮಯಾ ಧರಿತ್ರಿ– ಭೂಮಿಯಂಥ ಕ್ಷಮಾಗುಣ ನಮ್ಮನ್ನು ಆವರಿಸಿದರೆ, ನಮ್ಮ ಮನಸ್ಸೆಂಬ ಮೆಸೇಜ್ ಬಾಕ್ಸಿನಲ್ಲಿ ತಪ್ಪು ಮಾಡಿದವರ ಕ್ಷಮೆಯ ಕುಲುಮೆ ಒಂದಿಲ್ಲೊಂದು ದಿನ, ಒಂದಿಲ್ಲೊಂದು ಕ್ಷಣ ತನ್ನ ಅಕ್ಷರದ ಅಚ್ಚಿನ ಮಣೆ ಇಟ್ಟುಕೊಂಡು ಅಕ್ಷರಲೋಕದ ಚಪ್ಪರದಲ್ಲಿ ತಾನು ಕೂಡ ಸಹನೆಯಿಂದಲೇ ಮೆಸೇಜು ಕುಟ್ಟುತ್ತಲೇ ಇರುತ್ತದೆ. a'm sorry please excuse me ಅಂತ! ಹಾಗಾಗಿ ಸಹನೆ, ಸಮಾಧಾನಗಳು, ದೌರ್ಬಲ್ಯಗಳಲ್ಲ ನಮ್ಮ ವ್ಯಕ್ತಿತ್ವದಲ್ಲಿನ ಶಕ್ತಿ ಕೇಂದ್ರಗಳು. ಏನಂತೀರಿ?

ಅರಣ್ಯ ಭವನದಲ್ಲಿ ದಸರಾ ಗಜಪಡೆ ರಿಲ್ಯಾಕ್ಸ್




ಮೈಸೂರು,ಆ.8(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಕಾಡಿಂದ ಅರಮನೆ ನಗರಿ ಮೈಸೂರಿಗೆ ಆಗಮಿಸಿರುವ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆ ಮೈಸೂರಿನ ಅರಣ್ಯ ಭವನದ ಆವರಣದಲ್ಲಿ ಬೀಡುಬಿಟ್ಟಿವೆ ಹುಣಸೂರು ತಾಲೂಕಿನ ವೀರನಹೊಸಳ್ಳಿ ಗೇಟ್‌ನಿಂದ ವಿಧ್ಯುಕ್ತ ಪೂಜೆ ನೆರವೇರಿದ ಬಳಿಕ ಲಾರಿಗಳಲ್ಲಿ ಮೈಸೂರಿಗೆ ಕರೆತರಲಾಗಿತ್ತು. ಇಂದು ಬೆಳಗಿನಿಂದ ಸಂಜೆವರೆಗೂ ಅರಣ್ಯ ಭವನದ ಆವರಣದಲ್ಲೇ ವಿರಮಿಸಿದ ಆನೆಗಳು ಆಲದ ಸೊಪ್ಪು, ಹಸಿರು ಹುಲ್ಲು, ಒಣಹುಲ್ಲು ಕುಸುರೆ ಸೇರಿದಂತೆ ಇನ್ನಿತರ ಆಹಾರ ಸೇವಿಸಿ, ನೀರು ಕುಡಿದು ರಿಲ್ಯಾಕ್ಸ್ ಮೂಡ್‌ನಲ್ಲಿವೆ. ಗಜಪಡೆಯ ನಾಯಕ ಅಭಿಮನ್ಯು ಹಾಗೂ ಹಿರಿಯ ಸದಸ್ಯ ಅರ್ಜುನ ಗಾಂಭೀರ್ಯದಿಂದಲೇ ಎಲ್ಲರ ಗಮನ ಸೆಳೆಯುತ್ತಿವೆ. ಕುತೂಹಲ ಭರಿತ ಜನರು, ಮಕ್ಕಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಅರಣ್ಯ ಭವನಕ್ಕೆ ತೆರಳಿ ದಸರಾ ಆನೆಗಳನ್ನು ವೀಕ್ಷಿಸಿ, ತಮ್ಮ ಕುತೂಹಲ ತಣಿಸಿಕೊಂಡರು. ಹಾಗೆಯೇ ಮೊಬೈಲ್‌ಗಳಲ್ಲಿ ಆನೆಗಳ ಚಿತ್ರ ಸೆರೆ ಹಿಡಿದು, ಜತೆಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು.

ಪುಟ್ಟ ಸದಸ್ಯ ಭೀಮನ ಮೇಲೆ ಸೊಂಡಿಲು ಹಾಕಿ ಮಮಕಾರ ಮೆರೆಯುವ ಅರ್ಜುನ ಎಲ್ಲರ ಗಮನ ಸೆಳೆಯಿತು. ಈ ಎರಡೂ ಆನೆಗಳು ತಮ್ಮದೇ ಹಾವಭಾವದ ಮೂಲಕ ಸಂಭಾಷಣೆ ನಿರತವಾಗಿದ್ದಂತೆ ಕಂಡು ಬಂತು. 2019ರಲ್ಲಿ ಮೊದಲ ಬಾರಿ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಭೀಮನಿಗೆ ಅಂದು ಬಲರಾಮ ಪೋಷಕನಾಗಿದ್ದ.

ನಾಳೆ ಅರಮನೆ ಪ್ರವೇಶ: ಆ.10ರಂದು ಗಜಪಡೆ ಅರಮನೆ ಪ್ರವೇಶಿಸಲಿದ್ದು, ಬೆಳಗ್ಗೆ 7 ಗಂಟೆಗೆ ಎಲ್ಲಾ ಆನೆಗಳು ಅರಣ್ಯ ಭವನದಿಂದ ಕಾಲ್ನಡಿಗೆ ಮೂಲಕ ಅರಮನೆ ಜಯಮಾರ್ತಾಂಡ ದ್ವಾರದ ಮೂಲಕ 9.20ರಿಂದ 10 ಗಂಟೆ ಒಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ವಿಶೇಷ ಪೂಜೆ ನಂತರ ಅರಮನೆ ಆವರಣ ಪ್ರವೇಶಿಸಲಿವೆ. ನಂತರ ನಿತ್ಯ ಆನೆಗಳಿಗೆ ಅರಮನೆಯಿಂದ ಬನ್ನಿಮಂಟಪದವರೆಗೆ ನಾನಾ ರೀತಿಯ ತಾಲೀಮು ನಡೆಸಲಾಗುತ್ತದೆ.

ಇಂದು ಮೈಸೂರು ಮೃಗಾಲಯ, ಕಾರಂಜಿ ಪ್ರಕೃತಿ ಉದ್ಯಾನವನ ಮುಕ್ತ



ಮೈಸೂರು, ಆ.8–ಮೊಹರಂ ಕಡೇ ದಿನ ಹಬ್ಬದ ಅಂಗವಾಗಿ ಮೈಸೂರು ಮೃಗಾಲಯ ಮತ್ತು ಕಾರಂಜಿ ಪ್ರಕೃತಿ ಉದ್ಯಾವನವನ್ನು ನಾಳೆ (ಮಂಗಳವಾರ) ವೀಕ್ಷಣೆಗೆ ತೆರೆದಿರುತ್ತದೆ ಎಂದು ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾ.ಬೆಟ್ಟದ ನಂದಿ ಪ್ರತಿಮೆ ಮಾರ್ಗದಲ್ಲಿ ರಸ್ತೆ ಕುಸಿದಿದ್ದ ಜಾಗದಲ್ಲಿ ಕೈಗೆತ್ತಿಕೊಂಡಿರುವ

ದುರಸ್ತಿ ಕಾಮಗಾರಿ ಅವೈಜ್ಞಾನಿಕ



ಮೈಸೂರು,ಆ.8(ಪಿಎಂ)–ಚಾಮುಂಡಿಬೆಟ್ಟದ ನಂದಿ ಪ್ರತಿಮೆ ಮಾರ್ಗದಲ್ಲಿ ರಸ್ತೆ ಕುಸಿದಿದ್ದ ಜಾಗದಲ್ಲಿ ಕೈಗೆತ್ತಿಕೊಂಡಿರುವ ದುರಸ್ತಿ ಕಾಮಗಾರಿ ಅವೈಜ್ಞಾನಿಕ ರೀತಿಯಲ್ಲಿ ನಡೆಯುತ್ತಿದ್ದು, ಇದರಿಂದ ಹಾನಿಗೊಳಗಾದ ಪ್ರದೇಶದ ಆಚೀಚೆ ಭೂ ಕುಸಿತ ಉಂಟಾಗುವ ಲಕ್ಷಣಗಳು ಗೋಚರಿಸುತ್ತಿವೆ. ಹಾಗಾಗಿ ಸದರಿ ಕಾಮಗಾರಿ ಕೈಬಿಟ್ಟು ವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ನಡೆಸಬೇಕು ಎಂದು ಚಾಮುಂಡಿ ಬೆಟ್ಟ ಉಳಿಸಿ ಹೋರಾಟ ಸಮಿತಿ ಆಗ್ರಹಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಕಾಮಗಾರಿ ನಡೆಯುತ್ತಿರುವ ಆಚೀಚೆಯೂ ಕುಸಿತ ಉಂಟಾಗುವ ಲಕ್ಷಣಗಳು ಗೋಚರಿಸುತ್ತಿವೆ. ಅವೈಜ್ಞಾನಿಕ ಕಾಮಗಾರಿಯೇ ಇದಕ್ಕೆ ಕಾರಣ. ಕಾಮಗಾರಿಗಾಗಿ ಸಾಮಗ್ರಿ ಪೂರೈಸಲು ಭಾರೀ ವಾಹನ ಸಂಚಾರಕ್ಕೂ ಇಲ್ಲಿ ಅವಕಾಶ ನೀಡಲಾಗಿದೆ. ಇದರಿಂದ ಕಾಮಗಾರಿ ನೆಪದಲ್ಲಿ ಮತ್ತಷ್ಟು ಹಾನಿಗೆ ದಾರಿ ಮಾಡಿದಂತಾಗಿದೆ ಎಂದು ದೂರಿದರು.

ವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ನಡೆಸುತ್ತಿಲ್ಲ. ಕಾಮಗಾರಿ ಜಾಗದಲ್ಲಿ 15ರಿಂದ 20 ಅಡಿವರೆಗೆ ಆಳ ತೆಗೆಯಲಾಗಿದೆ. ಇವರ ಕಾಮಗಾರಿಯ ವಿಧಾನ ನೋಡಿದರೆ ಮತ್ತಷ್ಟು ಹಾನಿಯಾಗುವ ಆತಂಕ ಎದುರಾಗಿದೆ. ಚಾಮುಂಡಿಬೆಟ್ಟ ಸಾರ್ವಜನಿಕ ಆಸ್ತಿ. ಅಂತಹ ಪ್ರದೇಶದಲ್ಲಿ ಕಾಮಗಾರಿ ನಡೆಯುತ್ತಿದ್ದರೂ ಸದರಿ ಕಾಮಗಾರಿ ವಿವರ ಸಂಬಂಧ ಅಲ್ಲಿ ಯಾವುದೇ ಪ್ರಕಟಣೆ ಫಲಕ ಹಾಕಿಲ್ಲ. ನಿಯಮಾವಳಿಯಂತೆ ಕಾಮಗಾರಿಯ ಅಂದಾಜು ಮೊತ್ತ ಸೇರಿದಂತೆ ಪ್ರಮುಖ ಮಾಹಿತಿಗಳನ್ನು ಪ್ರಕಟಿಸಬೇಕು. ಆದರೆ ಆ ರೀತಿಯಲ್ಲಿ ಯಾವುದನ್ನೂ ಮಾಡಿಲ್ಲ ಎಂದು ಆಪಾದಿಸಿದರು. ಸದರಿ ಕಾಮಗಾರಿ ಸ್ಥಗಿತಗೊಳಿಸಿ, ಮತ್ತಷ್ಟು ಹಾನಿಗೆ ಅವಕಾಶವಾಗದಂತೆ ವೈಜ್ಞಾನಿಕ ರೀತಿಯಲ್ಲಿ ಕಾಮಗಾರಿ ನಡೆಸಲು ಕ್ರಮ ವಹಿಸಬೇಕು. ಜೊತೆಗೆ ಈ ಮಾರ್ಗದಲ್ಲಿ ಭಾರೀ ವಾಹನ ಸಂಚಾರಕ್ಕೆ ನಿಷೇಧ ಹೇರಬೇಕು ಎಂದರು. ಹಿರಿಯ ಸಾಹಿತಿ ಪ್ರೊ.ಕಾಳೇಗೌಡನಾಗವಾರ, ಸಮಿತಿ ಸಂಸ್ಥಾಪಕ ಸದಸ್ಯರಾದ ಪ್ರಭಾ ನಂದೀಶ್, ಗಂಟಯ್ಯ, ಪರಶುರಾಮೇಗೌಡ ಗೋಷ್ಠಿಯಲ್ಲಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ ಅಂತಾ ಬಿಜೆಪಿಯಲ್ಲಿ ಭಯ ಶುರುವಾಗಿದೆ

● ವಿಪಕ್ಷ ನಾಯಕ ಸಿದ್ದರಾಮಯ್ಯ ವ್ಯಂಗ್ಯೋಕ್ತಿ ● ಹಾಗಾಗಿಯೇ ಅಹಿಂದ ಮತದಾರರ ಪಟ್ಟಿಯಿಂದ ಕೈ ಬಿಡುತ್ತಿರಬಹುದು; ಶಂಕೆ

ಮೈಸೂರು,ಆ.8(ಎಂಟಿವೈ)– ಬಿಜೆಪಿ ನಾಯಕರಿಗೆ ನನ್ನ ಕಂಡರೆ ಭಯ ಕಾಡುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಈಗಿನಿಂದಲೇ ಬಿಜೆಪಿಗೆ ಆತಂಕ ಶುರುವಾಗಿದೆ. ಆ ಕಾರಣದಿಂದಲೇ ನನ್ನ ಜನ್ಮದಿನ ಮುಗಿದು ವಾರ ಕಳೆದರೂ ಟೀಕೆ ಮಾಡೋದನ್ನು ನಿಲ್ಲಿಸಿಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

> “ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ವರುಣಾ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತೇನೆ ಎಂಬುದು ಬರೀ ಊಹಾಪೋಹ. ನಾನು ಇದಕ್ಕೂ ಮೊದಲು ಮಾಲೂರು, ಚಿಂತಾಮಣಿ, ಚಾಮುಂಡೇಶ್ವರಿಯಲ್ಲಿ ಪಾದಯಾತ್ರೆ ಮಾಡಿದ್ದೆ. ಈ ಎಲ್ಲ ಕಡೆ ಚುನಾವಣೆಗೆ ನಿಲ್ಲೋ ಕಾಗುತ್ತಾ? ಚುನಾವಣೆ ಹತ್ತಿರ ಬಂದಾಗ ಯಾವ ಕ್ಷೇತ್ರ ಎಂದು ಎಲ್ಲರಿಗೂ ಹೇಳ್ತೇನೆ.
> -ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದ ಬಳಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಾವಣಗೆರೆಯಲ್ಲಿ ನಡೆದ ನನ್ನ ಜನ್ಮದಿನದ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ ಕಂಡು ಬಿಜೆಪಿ ನಾಯಕರು ಭಯಭೀತರಾಗಿದ್ದಾರೆ. ದುರಾಡಳಿತದಿಂದಾಗಿ ಸ್ವಪಕ್ಷೀಯರಿಂದಲೇ ಟೀಕೆಗೆ ಬಿಜೆಪಿ ಸರ್ಕಾರ ಗುರಿಯಾಗುತ್ತಿರುವುದರ ಜೊತೆಗೆ ಜನರಿಂದ ಹಿಡಿಶಾಪಕ್ಕೆ ತುತ್ತಾಗುತ್ತಿದೆ. ಹಿನ್ನಡೆಯೊಂದಿಗೆ ಕಾಂಗ್ರೆಸ್ ಮೇಲೆ ಹೆಚ್ಚುತ್ತಿರುವ ವಿಶ್ವಾಸ, ಜನ್ಮದಿನದ ಕಾರ್ಯಕ್ರಮದಲ್ಲಿ ಸೇರಿದ ಜನಸಾಗರ ಕಂಡು ಭಯಗೊಂಡು ವ್ಯರ್ಥ ಟೀಕೆ ಮಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಮತಪಟ್ಟಿಯಿಂದ ಅಹಿಂದ ಮತಗಳನ್ನು ತೆಗೆದುಹಾಕಲಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಅವರಿಗೆ ಪೂರಕ ದಾಖಲೆಯೊಂದಿಗೆ ಖಚಿತ ಮಾಹಿತಿ ಸಿಕ್ಕಿರುವುದರಿಂದಲೇ ಅವರು ಮಾತನಾಡಿದ್ದಾರೆ. ಅಹಿಂದ ವರ್ಗದ ಜನರು ಕಾಂಗ್ರೆಸ್ ಪರವಾಗಿ ಮತ ಚಲಾಯಿಸುತ್ತಾರೆ ಎಂದು ಅವರ ಹೆಸರನ್ನು ತೆಗೆದು ಹಾಕುತ್ತಿದ್ದಾರೆ ಎಂದೆನಿಸಿದೆ. ಚುನಾವಣೆ ಗೆಲ್ಲಲು ಬಿಜೆಪಿಯವರು ಏನನ್ನೂ ಬೇಕಾದರೂ ಮಾಡುತ್ತಾರೆ ಎಂದು ಈ ಹಿಂದೆಯೇ ಸಾಬೀತಾಗಿದೆ. ಅದರ ಮುಂದುವರೆದ ಭಾಗವಾಗಿ ಮತಪಟ್ಟಿಯಿಂದ ಹೆಸರು ತೆಗೆಯಲು ಮುಂದಾಗಿದ್ದಾರೆ ಎಂದು ಹರಿಹಾಯ್ದರು.

ತ್ರಿವರ್ಣ ಧ್ವಜವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ: ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಸಂದಿರುವ ಸಂದರ್ಭವನ್ನು ಬಿಜೆಪಿ ನಾಯಕರು ರಾಜಕೀಯ ಲಾಭ ಮಾಡಿಕೊಳ್ಳಲು ಯತ್ನಿಸುತ್ತಿದ್ದಾರೆ. ಹರ್ ಘರ್ ತಿರಂಗಾ ಅಭಿಯಾನದ ಮೂಲಕ ಬಿಜೆಪಿಯವರು ನಾಟಕವಾಡುತ್ತಿದ್ದಾರೆ. ದೇಶದಲ್ಲಿ ಈ ಹಿಂದಿನಿಂದಲೂ ತ್ರಿವರ್ಣ ಧ್ವಜ ಹಾರಿಸುವುದನ್ನು ವಿರೋಧಿಸಿದ್ದೇ ಬಿಜೆಪಿಯವರು. ಸಾವರ್ಕರ್ ತ್ರಿವರ್ಣ ಧ್ವಜವನ್ನು ವಿರೋಧಿಸಿದ್ದರು. ಈ ಸಾವರ್ಕರ್ ಅವರನ್ನು ಆರ್‌ಎಸ್‌ಎಸ್ ಆರಾಧನೆ ಮಾಡುತ್ತದೆ. ಆರ್‌ಎಸ್‌ಎಸ್‌ನ ಸರಸಂಘಚಾಲಕರಾಗಿದ್ದ ಗೋಲ್ವಾಲ್ಕರ್ ಕೂಡ ವಿರೋಧ ಮಾಡಿದ್ದರು. ಆಯೋಜಕರು ಎಂಬ ಬಿಜೆಪಿಯ ಮುಖವಾಣಿಯೂ ವಿರೋಧ ಮಾಡಿತ್ತು. ಅಂದು ವಿರೋಧ ಮಾಡಿ, ಈಗ ಹರ್ ಘರ್ ತಿರಂಗಾ ಅಭಿಯಾನ ಮಾಡೋದು ನಾಟಕವಲ್ಲವೇ?. ಸಂವಿಧಾನ, ರಾಷ್ಟ್ರಗೀತೆ, ರಾಷ್ಟ್ರ ಧ್ವಜದ ಬಗ್ಗೆ ಬಿಜೆಪಿಗೆ ಗೌರವ ಇಲ್ಲ. ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜಕೀಯ ಮಾಡಲು ಹೊರಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು



ಕಾಂಗ್ರೆಸ್‌ನಿಂದ ಶ್ರದ್ಧೆಯ ಸ್ವಾತಂತ್ರ್ಯ ಸಂಭ್ರಮ: ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ನಾಯಕರು ಹೋರಾಟ ಮಾಡಿದ್ದರು. ಸಾವಿರಾರು ಮಂದಿ ಪ್ರಾಣ ತ್ಯಾಗ ಮಾಡಿದ್ದಾರೆ. ಆದ್ದರಿಂದಲೇ ಸ್ವಾತಂತ್ರ್ಯದ ಸಂಭ್ರಮವನ್ನು ಕಾಂಗ್ರೆಸ್ ನಾಯಕರು ಶ್ರದ್ಧಾ ಭಕ್ತಿಯಿಂದ ಆಚರಣೆ ಮಾಡುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್. ಬಿಜೆಪಿಗೆ ಸ್ವಾತಂತ್ರ್ಯ ಹೋರಾಟದ ಬಗ್ಗೆ ಗೊತ್ತಾ? ಆರ್‌ಎಸ್‌ಎಸ್‌ನವರು ಯಾರಾದರೂ ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗಿದ್ರಾ? ಸಂಘದ ಸ್ಥಾಪಕರಾದ ಹೆಡಗೇವಾರ್, ಗೋಲ್ವಾಲ್ಕರ್ ಜೈಲಿಗೆ ಹೋಗಿದ್ರಾ? ಎಂದು ಖಾರವಾಗಿ ಪ್ರಶ್ನಿಸಿದರು.

ಮೇಕಿಂಗ್ ಇಂಡಿಯಾ ಎಲ್ಲಿ ಹೋಯ್ತು: ಪ್ರಧಾನಿ ಮೋದಿ ಅವರು ಮೇಕಿಂಗ್ ಇಂಡಿಯಾ ಎಂದು ಹೇಳಿ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ. 75ನೇ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮದಲ್ಲಿ ಖಾದಿ ಅಥವಾ ರೇಷ್ಮೆಯಿಂದ ತಯಾರಿಸಿದ ಬಾವುಟವನ್ನೇ ಹಾರಿಸಬೇಕಾಗಿತ್ತು. ಇದರಿಂದ ಗ್ರಾಮೀಣ ಪ್ರದೇಶದ ನೇಯ್ಗೆ ಮಾಡುವವರಿಗೆ ನೆರವಾಗುತ್ತಿತ್ತು. ಆದರೆ ಚೀನಾದ ಪಾಲಿಸ್ಟರ್ ಬಟ್ಟೆಯಲ್ಲಿ ಧ್ವಜ ತಯಾರಿಸಿದ ಬಾವುಟಕ್ಕೆ ಮಣೆ ಹಾಕಲಾಗುತ್ತಿದೆ. ಇದರ ಉದ್ದೇಶವೇನು? ರಾಷ್ಟ್ರಧ್ವಜವನ್ನು ಖಾದಿ ಬಟ್ಟೆಯಿಂದ ತಯಾರಿಸಬೇಕು. ಪಾಲಿಸ್ಟರ್‌ಯಿಂದ ಮಾಡಬಾರದು. ಖಾದಿ ಬಟ್ಟೆ ಕೈಮಗ್ಗಗಳಲ್ಲಿ ತಯಾರಾಗುತ್ತದೆ. ಇದರ ಉದ್ದೇಶ ಏನೆಂದರೆ ಚರಕದಿಂದ ನೂಲು ತೆಗೆಯುವ ಕರಕುಶಲ ಕರ್ಮಿಗಳಿಗೆ ಉದ್ಯೋಗ ಸಿಗಬೇಕು. ಆದರೆ, ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಚೀನಾದಿಂದ ಆಮದು ಜಾಸ್ತಿಯಾಗಿ, ರಫ್ತು ಕಡಿಮೆಯಾಗಿದೆ. ಮೇಕ್ ಇನ್ ಇಂಡಿಯಾ ಎಂದರೆ ರಫ್ತು ಜಾಸ್ತಿಯಾಗಬೇಕಿತ್ತು. ಹೊರಗಡೆಯಿಂದ ತಂದು ಕೊಟ್ಟರೆ ಅದಕ್ಕೆ ಅರ್ಥ ಇರುತ್ತಾ? ಎಂದು ವಾಗ್ದಾಳಿ ನಡೆಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರಲ್ಲಿ ಪೊಲೀಸರಿಗೆ ಸರಗಳ್ಳರ ಸವಾಲು!

ಒಂದೇ ದಿನ ಮೂರು ಕಡೆ ಸರಗಳವು

- ತತ್ತರಿಸಿ ಹೋಗಿರುವ ಮಹಿಳಾ ಸಮುದಾಯ
- ಬೈಕ್‌ನಲ್ಲಿ ಕಾರ್ಯಾಚರಿಸುತ್ತಿರುವ ಖದೀಮರು

ಮೈಸೂರು, ಆ. 8– ಮೈಸೂರಲ್ಲಿ ಸರಗಳ್ಳರ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದ್ದು, ಒಂದೇ ದಿನ ಮೂರು ಸರಗಳವು ಪ್ರಕರಣಗಳು ದಾಖಲಾಗಿವೆ.



ವಿದ್ಯಾರಣ್ಯಪುರಂ 2ನೇ ಮೇನ್ 7ನೇ ಕ್ರಾಸ್ ನಿವಾಸಿ ಶ್ರೀಮತಿ ನಾಗಮಣಿ ರಮೇಶ್(52) ಅವರು ಆಗಸ್ಟ್ 6ರಂದು ರಾತ್ರಿ 9 ಗಂಟೆ ಸುಮಾರಿನಲ್ಲಿ ವಿದ್ಯಾರಣ್ಯಪುರಂ 2ನೇ ಮುಖ್ಯ ರಸ್ತೆಯಲ್ಲಿ ತಮ್ಮ ಪುತ್ರಿ ಆರ್. ನವ್ಯ ಜೊತೆ ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ ಬಂದ ಖದೀಮರು, ಅವರ 40 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂಬಂಧ ವಿದ್ಯಾರಣ್ಯಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಯಾದವಗಿರಿ ರೈಲ್ವೆ ಕ್ವಾಟ್ರರ್ಸ್ ನಿವಾಸಿ ಎಂ.ಜಿ. ಹ್ಯಾಚಿಂತ್(57) ಅವರು ತಮ್ಮ ತಂಗಿ ಲೀನಾ ಅವರೊಂದಿಗೆ ಆಗಸ್ಟ್ 6ರಂದು ಮಧ್ಯಾಹ್ನ 3.30ರ ಸುಮಾರಿನಲ್ಲಿ ಹೆಬ್ಬಾಳ್‌ನ ಸಂಕ್ರಾಂತಿ ವೃತ್ತದ ಬಳಿ ಸ್ಕೂಟರ್‌ನಲ್ಲಿ (ಕೆ‌ಎ 09–ಇಎಂ 1185) ತೆರಳುತ್ತಿದ್ದಾಗ ದ್ವಿಚಕ್ರ ವಾಹನದಲ್ಲಿ ಹಿಂಬದಿಯಿಂದ ಬಂದ ಖದೀಮರು ಅವರ ಕೊರಳಲ್ಲಿದ್ದ 35 ಗ್ರಾಂ ತೂಕದ ಸರವನ್ನು ಕಸಿದಿದ್ದಾರೆ. ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುವೆಂಪುನಗರ 2ನೇ ಹಂತ ಸಿಐಟಿಬಿ ನಿವಾಸಿ ಶಾಂತ(50) ಅವರು ಆಗಸ್ಟ್ 6ರಂದು ರಾತ್ರಿ 9.10ರ ಸುಮಾರಿನಲ್ಲಿ ಅಂಗಡಿಯಿಂದ ಸಾಮಾನು ಖರೀದಿಸಿ ಹಿಂತಿರುಗುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದ ಖದೀಮರು ಅವರ 40 ಗ್ರಾಂ ತೂಕದ ಮಾಂಗಲ್ಯ ಸರ ಕಸಿದಿದ್ದಾರೆ. ಈ ಸಂಬಂಧ ಕುವೆಂಪುನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಾತನಾಡುತ್ತಿರುವಾಗಲೇ ನಗರ ಬಸ್ ನಿಲ್ದಾಣದಲ್ಲಿ ಮೊಬೈಲ್ ಕಿತ್ತುಕೊಂಡು ಪರಾರಿ

ಮೈಸೂರು,ಆ.8–ಮೈಸೂರು ನಗರ ಬಸ್ ನಿಲ್ದಾಣದಲ್ಲಿ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಪಂಪ್ ಆಪರೇಟರ್ ಮೊಬೈಲ್ ಕಸಿದುಕೊಂಡು ಪರಾರಿಯಾಗುತ್ತಿದ್ದ ಖದೀಮನನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಆ.7ರಂದು ಬೆಳಗ್ಗೆ ನಡೆದಿದ್ದು, ಬಂಧಿತ ವ್ಯಕ್ತಿಯು ಕಸಿದ ಮೊಬೈಲ್ ಅನ್ನು ಬೇರೊಬ್ಬ ಖದೀಮನಿಗೆ ಹಸ್ತಾಂತರಿಸಿದ್ದರಿಂದ ಮೊಬೈಲ್ ಸಿಗಲಿಲ್ಲ.

ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಪಂಪ್ ಆಪರೇಟರ್ ಶಿವಣ್ಣ(37) ರಮ್ಮನಹಳ್ಳಿಯಲ್ಲಿ ವಾಸವಿದ್ದು, ಆಗಸ್ಟ್ 7ರಂದು ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ನಗರ ಬಸ್ ನಿಲ್ದಾಣದಲ್ಲಿ ಬಸ್ ಹತ್ತುತ್ತಿದ್ದ ವೇಳೆ ಅವರ ಹಿಂದೆ ನಾಲ್ವರು ಖದೀಮರು ಬಂದಿದ್ದಾರೆ. ಅವರಲ್ಲಿ ಓರ್ವ ಶಿವಣ್ಣ ಅವರ ಕೈಯ್ಯಿಂದ ಮೊಬೈಲ್ ಕಿತ್ತುಕೊಂಡು ಬೇರೊಬ್ಬನಿಗೆ ನೀಡಿದ್ದಾನೆ. ಶಿವಣ್ಣ ಕಳ್ಳ ಕಳ್ಳ ಎಂದು ಕೂಗಿಕೊಂಡಾಗ ನಾಲ್ವರೂ ಖದೀಮರು ಓಟ ಕಿತ್ತಿದ್ದಾರೆ. ಅವರಲ್ಲಿ ಓರ್ವನನ್ನು ಸಾರ್ವಜನಿಕರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಬಂಧಿತ ವ್ಯಕ್ತಿಯು ಕ್ಯಾತಮಾರನಹಳ್ಳಿಯ ನಯಾಜ್ ಪಾಷಾ ಎಂಬುವನಾಗಿದ್ದು, ಇನ್ನುಳಿದ ಮೂವರ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಲ್‌ಜಲ್ ಮಾದಪ್ಪ ದೇವಸ್ಥಾನದ ಗುಡ್ಡಪ್ಪ ಸೇರಿ ಶಿಷ್ಯರ ವಿರುದ್ಧ ಮತ್ತೆರಡು ಕೇಸ್

ದೇವರ ಹೆಸರಲ್ಲಿ ಹಲವರಿಗೆ ವಂಚನೆ ಆರೋಪ

ಬನ್ನೂರು,ಆ.8–ಇಲ್ಲಿಗೆ ಸಮೀಪದ ರಾಮಸಮುದ್ರ ಗ್ರಾಮದಲ್ಲಿರುವ ಜಲ್‌ಜಲ್ ಮಾದಪ್ಪ ದೇವಸ್ಥಾನದ ಗುಡ್ಡಪ್ಪ ಹಾಗೂ ಆತನ ಶಿಷ್ಯಂದಿರು ದೇವರ ಹೆಸರಿನಲ್ಲಿ ಭಕ್ತಾದಿಗಳಿಗೆ ಲಕ್ಷಾಂತರ ರೂ. ವಂಚಿಸಿರುವ ಮತ್ತೆರಡು ಪ್ರಕರಣಗಳು ಬನ್ನೂರು ಠಾಣೆಯಲ್ಲಿ ದಾಖಲಾಗಿವೆ. ಇದರೊಂದಿಗೆ ಈ ವಂಚಕರ ವಿರುದ್ಧ ಒಟ್ಟು 5 ಪ್ರಕರಣಗಳು ದಾಖಲಾದಂತಾಗಿದೆ. ದೇವಸ್ಥಾನದ ಗುಡ್ಡಪ್ಪ ವಿಜಯಕುಮಾರ್, ತಂದೆ ಜಯರಾಮು, ತಾಯಿ ಲಕ್ಷ್ಮಮ್ಮ, ಶಿಷ್ಯಂದಿರಾದ ಸ್ವಾಮಿ, ಕೋದಂಡ ಕುಮಾರ್, ಮಂಜ, ಅಗಸ್ತ್ಯಪುರದ ಸಿದ್ದಮ್ಮ, ಕೆಂಚ ಮಹೇಶ, ಆನಂದ, ನಾಗೇಂದ್ರ, ಚಂದ್ರಶೇಖರ್, ಅನಿತಾ ಕೃಷ್ಣಸ್ವಾಮಿ ಆರೋಪಕ್ಕೆ ಗುರಿಯಾಗಿರುವವರು.

ತಿ.ನರಸೀಪುರ ತಾಲೂಕು ಚಮ್ಮನಹಳ್ಳಿ ಗ್ರಾಮದ ನಾರಾಯಣ(38) ಅವಿವಾಹಿತರಾಗಿದ್ದು, ಮದ್ಯವ್ಯಸನಿಯೂ ಆಗಿದ್ದಾರೆ. ಇವರ ಕುಡಿತ ಬಿಡಿಸಿ, ವಿವಾಹ ಮಾಡಿಸುವುದಾಗಿ ನಂಬಿಸಿ ದೇವಸ್ಥಾನಕ್ಕೆ ಕರೆತಂದಿದ್ದಾರೆ. ಗುಡ್ಡಪ್ಪ ವಿಜಯಕುಮಾರ್ ಮೈಮೇಲೆ ನಾಲ್ಕೈದು ದೇವರುಗಳು ಬರುತ್ತಿದ್ದು, ಭಕ್ತರ ಕಷ್ಟಗಳನ್ನು ಪರಿಹರಿಸುವುದಾಗಿ ನಂಬಿಸಿದ್ದಾರೆ. ಭಕ್ತ ನಾರಾಯಣ ಮತ್ತು ಅವರ ತಾಯಿಯಿಂದ 25 ಲಕ್ಷ ರೂ. ಪಡೆದು ವಂಚಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ತಿ.ನರಸೀಪುರ ತಾಲೂಕು ರಂಗಸಮುದ್ರ ಗ್ರಾಮದ ಶಿವಮ್ಮ ಎಂಬುವರಿಗೂ ದೇವರ ಹೆಸರು ಹೇಳಿ ದೇವಸ್ಥಾನದಲ್ಲಿ ನಿಧಿ ಇದೆ, ಅದರ ರಕ್ಷಣೆಗೆ ಸರ್ಪ ಕಾವಲಿದೆ ಎಂದು ನಂಬಿಸಿ, ಹುತ್ತದಲ್ಲಿ ಫಳಫಳ ಎಂದು ಹೊಳೆಯುವ ವಸ್ತುವೊಂದನ್ನು ತೋರಿಸಿ ಅವರಿಂದ 50 ಸಾವಿರ ನಗದು, 85 ಗ್ರಾಂ ಚಿನ್ನಾಭರಣ ಪಡೆದು ವಂಚಿಸಿದ್ದಾರೆ. ಹಣ ಮತ್ತು ಚಿನ್ನಾಭರಣ ವಾಪಸ್ ಕೇಳಿದರೆ ಬೆದರಿಕೆ ಹಾಕುತ್ತಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಬನ್ನೂರು ಠಾಣೆ ಪೊಲೀಸರು ಇವರೆಲ್ಲರ ವಿರುದ್ಧ ಭಾರತೀಯ ದಂಡ ಸಂಹಿತೆ 143, 420, 506, 149ರಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಇದೇ ವ್ಯಕ್ತಿಗಳ ವಿರುದ್ಧ ಆ.2ರಂದು ಮೂರು ಪ್ರಕರಣಗಳು ದಾಖಲಾಗಿವೆ.

ಆನ್‌ಲೈನ್‌ನಲ್ಲಿ 1.08 ಲಕ್ಷ ವಂಚನೆ

ಮೈಸೂರು, ಆ. 8– ಅಂಚೆ ಇಲಾಖೆಯ ಹಿರಿಯ ಅಧಿಕಾರಿಗೆ ಆನ್‌ಲೈನ್ ಮೂಲಕ 1.08 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಅಂಚೆ ಇಲಾಖೆಯ ಮೈಸೂರು ವಿಭಾಗದ ಹಿರಿಯ ಸೂಪರಿಂಟೆಂಡೆಂಟ್ ಎ.ಕೊರಗಪ್ಪ ಅವರ ಮೊಬೈಲ್‌ಗೆ 6206643941 ಸಂಖ್ಯೆಯಿಂದ ಕರೆ ಬಂದಿದ್ದು, ಕ್ರೆಡಿಟ್ ಕಾರ್ಡ್ ಆಕ್ಟಿವೇಷನ್ ಮಾಡಿಕೊಳ್ಳುವಂತೆ ತಿಳಿಸಿ ಲಿಂಕ್ ಕಳುಹಿಸಲಾಗಿದೆ.

ಕೊರಗಪ್ಪ ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿ ಓಟಿಪಿ ನಮೂದಿಸಿದಾಗ ಅವರ ಬ್ಯಾಂಕ್ ಖಾತೆಯಿಂದ 1,08,778 ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದಿನಿಂದ ಮೈಸೂರಲ್ಲಿ ಆದಿವಾಸಿ ನೃತ್ಯ ಮಹೋತ್ಸವ

ಮೈಸೂರು,ಆ.8(ಪಿಎಂ)– ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ನಾಗ್ಪುರ್‌ನ ದಕ್ಷಿಣ ಕೇಂದ್ರ ವಲಯ ಸಾಂಸ್ಕೃತಿಕ ಕೇಂದ್ರ, ನವದೆಹಲಿಯ ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು, ಮೈಸೂರು ರಂಗಾಯಣ, ಮುಕ್ತ ವಿವಿ ಹಾಗೂ ಸಂಗೀತ ವಿವಿ ಸಂಯುಕ್ತಾಶ್ರಯದಲ್ಲಿ ಆ.9ರಿಂದ 11ರವರೆಗೆ ಮೂರು ದಿನಗಳು ಮೈಸೂರಲ್ಲಿ 'ಆದಿವಾಸಿ ನೃತ್ಯ ಮಹೋತ್ಸವ' ಆಯೋಜಿಸಲಾಗಿದೆ ಎಂದು ಕಲಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಹಾಸನ ರಘು ತಿಳಿಸಿದರು.

ಮೈಸೂರಿನ ಸಂಗೀತ ವಿವಿ (ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ) ಆವರಣದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ವಿಶ್ವ ಆದಿವಾಸಿ ದಿನದ (ಆ.9) ಅಂಗವಾಗಿ ಆದಿವಾಸಿ ನೃತ್ಯ ಮಹೋತ್ಸವ ಹಮ್ಮಿಕೊಳ್ಳಲಾಗಿದೆ. ದೇಶದ ವಿವಿಧ ಭಾಗಗಳ ಖ್ಯಾತ ಆದಿವಾಸಿ ಜಾನಪದ ಕಲಾ ತಂಡಗಳು ಈ ನೃತ್ಯ ಮಹೋತ್ಸವದಲ್ಲಿ ತಮ್ಮ ಕಲಾ ಪ್ರದರ್ಶನ ನೀಡಲಿವೆ ಎಂದರು.

ಎಂಟು ಕಲಾ ತಂಡಗಳು ಮಹೋತ್ಸವದಲ್ಲಿ ಭಾಗವಹಿಸುತ್ತಿದ್ದು, ಒಂದೊಂದು ತಂಡದಲ್ಲಿ 15 ಮಂದಿಯಂತೆ 120 ಕಲಾವಿದರು ಆಗಮಿಸುತ್ತಿದ್ದಾರೆ. ಆಬುಜ್ಮದೀಯ ನೃತ್ಯ (ಛತೀಸ್‌ಘಡ), ಬಂಜಾರ ನೃತ್ಯ (ಮಹಾರಾಷ್ಟ್ರ), ಶೈಲಾ ಕರ್ಮ ನೃತ್ಯ (ಮಧ್ಯಪ್ರದೇಶ), ಮಾಥುರಿ ಆದಿವಾಸಿ ನೃತ್ಯ (ತೆಲಂಗಾಣ), ದಮಾಮಿ ಸಿದ್ಧಿ ನೃತ್ಯ, ಜೇನು ಕುರುಬ ನೃತ್ಯ, ಡೊಳ್ಳು ಕುಣಿತ (ಕರ್ನಾಟಕ) ಕಲಾ ಪ್ರಕಾರಗಳ ಪ್ರದರ್ಶನ ಇರಲಿದ್ದು, ರಾಮನಗರದ ಪಾರ್ಥಸಾರತಿ ಜಾನಪದ ಕಲಾ ತಂಡದಿಂದಲೂ ಪ್ರದರ್ಶನ ನಡೆಯಲಿವೆ. ಸಾರ್ವಜನಿಕರು ಉಚಿತವಾಗಿ ಕಲಾ ಪ್ರದರ್ಶನಗಳನ್ನು ವೀಕ್ಷಿಸಲು ಅವಕಾಶವಿದೆ ಎಂದು ವಿವರಿಸಿದರು.

ಆ.9ರಂದು ಸಂಜೆ 4.30ಕ್ಕೆ ಮುಕ್ತ ಗಂಗೋತ್ರಿಯ ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಮಹೋತ್ಸವದ ಉದ್ಘಾಟನಾ ಸಮಾರಂಭ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ದಕ್ಷಿಣ ಕೇಂದ್ರ ವಲಯ ಸಾಂಸ್ಕೃತಿಕ ಕೇಂದ್ರದ ನಿರ್ದೇಶಕ ಡಾ.ದೀಪಕ್ ಕಿರುವಾಡ್ಕರ್, ಮುಕ್ತ ವಿವಿ ಕುಲಪತಿ ಡಾ.ಎಸ್.ವಿದ್ಯಾಶಂಕರ್, ಸಂಗೀತ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ, ಕರ್ನಾಟಕ ಜಾನಪದ ವಿವಿ ಕುಲಪತಿ ಪ್ರೊ.ಟಿ.ಎಂ.ಭಾಸ್ಕರ್, ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನಂತರ ಕಲಾ ಪ್ರದರ್ಶನ ನಡೆಯಲಿವೆ ಎಂದರು.

ದೇಶದ ವಿವಿಧ ಭಾಗಗಳ ಆದಿವಾಸಿ ಕಲಾ ಪ್ರಕಾರಗಳ ಪ್ರದರ್ಶನ



ಕಾರ್ಯಕ್ರಮವೊಂದರಲ್ಲಿ ಆದಿವಾಸಿಗಳ ನೃತ್ಯ ಫೈಲ್ ಚಿತ್ರ

ಆ.10ರಂದು ಬೆಳಗ್ಗೆ 11ಕ್ಕೆ ಸಂಗೀತ ವಿವಿ ಆವರಣದಲ್ಲಿ ಹಮ್ಮಿಕೊಂಡಿರುವ ವಿಚಾರ ಸಂಕಿರಣ ಮತ್ತು ಕಾರ್ಯಾಗಾರವನ್ನು ಸಂಗೀತ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ ಉದ್ಘಾಟಿಸಲಿದ್ದಾರೆ. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಟಿ.ಎಂ.ಭಾಸ್ಕರ್, ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್, ಕರ್ನಾಟಕ ಬುಡಕಟ್ಟು ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ.ಗೌಡ, ಸಂಗೀತ ವಿವಿ ಕುಲಸಚಿವ ಪ್ರೊ.ಟಿ.ಎಸ್. ದೇವರಾಜು ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಬಳಿಕ ಅಂದು ಸಂಜೆ 5.30ಕ್ಕೆ ಮೈಸೂರು ರಂಗಾಯಣದಲ್ಲಿ ಆದಿವಾಸಿ ನೃತ್ಯ ಮಹೋತ್ಸವದ ಪ್ರದರ್ಶನ ನಡೆಯಲಿದ್ದು, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಉದ್ಘಾಟಿಸಲಿದ್ದಾರೆ. ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಆ.11ರಂದು ಸಂಜೆ 5.30ಕ್ಕೆ ರಂಗಾಯಣ ಆವರಣದಲ್ಲಿ ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ದು, ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು ಸಮಾರಂಭ ಉದ್ಘಾಟಿಸಲಿದ್ದಾರೆ. ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತು ರಾಷ್ಟ್ರೀಯ ಅಧ್ಯಕ್ಷ ನಿರ್ಮಲ್ ವೈದ್ ಅಧ್ಯಕ್ಷತೆ ವಹಿಸಲಿದ್ದು, ಅರಗು ಮತ್ತು ಬಣ್ಣದ ಕಾರ್ಖಾನೆ ಅಧ್ಯಕ್ಷ ಕೌಟಿಲ್ಯ ಆರ್.ರಘು, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಉಪ ನಿರ್ದೇಶಕಿ ನಿರ್ಮಲ ಮಠಪತಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಸಂಗೀತ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ, ಕುಲಸಚಿವ ಪ್ರೊ. ಟಿ.ಎಸ್.ದೇವರಾಜು, ಅಖಿಲ ಭಾರತ ಜಾನಪದ ಮತ್ತು ಬುಡಕಟ್ಟು ಕಲಾ ಪರಿಷತ್ತಿನ ಮೈಸೂರು ವಿಭಾಗದ ಸಂಘಟನಾ ಕಾರ್ಯದರ್ಶಿ ಡಾ.ಕೆ.ವಸಂತಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.

ಸಂಗೀತ ವಿವಿಯಲ್ಲಿ ಆದಿವಾಸಿ ಕಲೆಗಳ ಅಧ್ಯಯನ ಪೀಠ ಸ್ಥಾಪನೆ

ಸಂಗೀತ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ

ಮೈಸೂರು,ಆ.8(ಪಿಎಂ)– ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿಯಲ್ಲಿ ಮುಂದಿನ ದಿನಗಳಲ್ಲಿ ಆದಿವಾಸಿ ಕಲೆಗಳ ಅಧ್ಯಯನ ಪೀಠ ಸ್ಥಾಪಿಸಲು ಪ್ರಕ್ರಿಯೆ ಆರಂಭಿಸಿರುವುದಾಗಿ ವಿವಿ ಕುಲಪತಿ ಪ್ರೊ.ವಿ.ನಾಗೇಶ್ ಬೆಟ್ಟಕೋಟೆ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿವಾಸಿ ಕಲೆಗಳ ಸಂಶೋಧನೆಗೆ ಒತ್ತು ನೀಡಲು ಪ್ರಯತ್ನ ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ವಿವಿಯಲ್ಲಿ ಆದಿವಾಸಿ ಕಲೆಗಳ ಅಧ್ಯಯನ ಪೀಠ ಆರಂಭಿಸಲು ಪ್ರಕ್ರಿಯೆ ಆರಂಭಿಸಿದ್ದೇವೆ. ನಶಿಸುವ ಕಲೆ ಗುರುತಿಸಿ ಆಧುನಿಕ ಶಿಕ್ಷಣದ ಮೂಲಕ ಉಳಿಸುವುದು ಸಂಗೀತ ವಿವಿಯ ಧ್ಯೇಯೋದ್ದೇಶ. ಹೀಗಾಗಿ ಆದಿವಾಸಿ ನೃತ್ಯ ಮಹೋತ್ಸವಕ್ಕೆ ಸಹಯೋಗ ನೀಡಿದ್ದೇವೆ ಎಂದರು.

ನಮ್ಮ ಎಲ್ಲಾ ಕಲೆಗಳ ಮೂಲಬೇರು ಆದಿವಾಸಿ ಸಂಸ್ಕೃತಿಯಾಗಿದೆ. ಆದಿವಾಸಿ ಕಲೆಗಳನ್ನು ಉಳಿಸಲು ಆದ್ಯತೆ ನೀಡಬೇಕು. ಇಂದಿನ ಆಧುನಿಕತೆ ಭರಾಟೆಯಲ್ಲಿ ಆದಿವಾಸಿ ಕಲೆಗಳಿಗೆ ಆದ್ಯತೆ ಇಲ್ಲದಂತಾಗುತ್ತಿದೆ. ಆದಿವಾಸಿ ಕಲೆಗಳು ಆ ಸಮುದಾಯಗಳ ಆರಾಧ್ಯ ದೈವಗಳ ಆರಾಧನೆಗಾಗಿ ಹುಟ್ಟಿಕೊಂಡವು. ಹಾಗಾಗಿ ಇವು ಮುಖ್ಯವಾಗುತ್ತವೆ. ಆದಿವಾಸಿ ನೃತ್ಯ ಮಹೋತ್ಸವದ ಅಂಗವಾಗಿ ಆದಿವಾಸಿಗಳ ಸಂಸ್ಕೃತಿ ಕುರಿತಂತೆ ವಿಚಾರ ಸಂಕಿರಣ ಆಯೋಜಿಸಿದ್ದೇವೆ. ಈ ಕುರಿತಂತೆ ಕಿರು ಹೊತ್ತಿಗೆ ಹೊರತರುವ ಪ್ರಯತ್ನವನ್ನೂ ಮಾಡುತ್ತೇವೆ ಎಂದರು.

ಎಪಿಎಂಸಿಯಲ್ಲಿ ಸುಂಕ ವಸೂಲಿಗೆ ಲಾರಿ ಮಾಲೀಕರ ಒಕ್ಕೂಟ ವಿರೋಧ

ಜಿಲ್ಲಾಧಿಕಾರಿಗೆ ಮನವಿ ಸಲ್ಲಿಕೆ

ಮೈಸೂರು, ಆ.8(ಆರ್‌ಕೆಬಿ)– ಮೈಸೂರು ಎಪಿಎಂಸಿ ಮಾರುಕಟ್ಟೆಯಲ್ಲಿ ರಾಜ್ಯದ ಯಾವುದೇ ಎಪಿಎಂಸಿಯಲ್ಲಿ ಇಲ್ಲದ ಶುಲ್ಕ ವಸೂಲಿಯ ಹೊಸ ಕಾನೂನು ಜಾರಿಯಲ್ಲಿದ್ದು, ಇದರಿಂದ ಲಾರಿ ಮಾಲೀಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟ ಆರೋಪಿಸಿದೆ.



ನಿರಂತರವಾಗಿ ಏರಿಕೆಯಾಗುತ್ತಿರುವ ಇಂಧನ ದರ, ಟೈರ್ ದರ, ವಿಮೆ ಮೊತ್ತ ಅವೈಜ್ಞಾನಿಕ ಟೋಲ್ ಸಂಗ್ರಹ ಇನ್ನಿತರೆ ಹಲವಾರು ತೊಂದರೆಗಳಿಂದ ಜರ್ಝರಿತವಾಗಿ ಲಾರಿ ಉದ್ಯಮ ನಡೆಸಲಾಗದ ಸ್ಥಿತಿಯಲ್ಲಿ ಲಾರಿ ಮಾಲೀಕರು ಸಿಲುಕಿದ್ದೇವೆ. ಲಾರಿ ಉದ್ಯಮ ಭಾರೀ ನಷ್ಟದಿಂದ ಕೂಡಿದೆ. ಲಾರಿ ಮಾಲೀಕರು ತಮ್ಮ ಬಳಿಯಿರುವ ಎಲ್ಲಾ ಬಗೆಯ ಸ್ವತ್ತುಗಳನ್ನು ಕಳೆದುಕೊಂಡು ಉದ್ಯಮ ನಡೆಸುವ ಸ್ಥಿತಿಯಲ್ಲಿ ಸಿಲುಕಿದ್ದೇವೆ. ಇಂತಹ ಸಂದರ್ಭದಲ್ಲಿ ಮೈಸೂರು ಎಪಿಎಂಸಿಯಲ್ಲಿ ಸುಂಕ ವಸೂಲಿಗೆ ಮುಂದಾಗಿದ್ದಾರೆ ಎಂದು ಮೈಸೂರು ಲಾರಿ ಮಾಲೀಕರ ಒಕ್ಕೂಟದ ಜಿಲ್ಲಾಧ್ಯಕ್ಷ ಬಿ.ಕೋದಂಡರಾಮ ಆರೋಪಿಸಿದ್ದಾರೆ.

ಮೊದಲೇ ತೊಂದರೆಯಲ್ಲಿ ಸಿಲುಕಿರುವ ಲಾರಿ ಉದ್ಯಮಕ್ಕೆ ಮೈಸೂರು ಎಪಿಎಂಸಿಯ ಸುಂಕ ವಸೂಲಿ ಗಾಯದ ಮೇಲೆ ಬರೆ ಎಳೆದಂತಾಗಿದೆ. ರಾಜ್ಯದ ಯಾವುದೇ ಎಪಿಎಂಸಿಯಲ್ಲಿ ಇಲ್ಲದ ಸುಂಕ ವಸೂಲಿ ಮೈಸೂರಿನಲ್ಲೇಕೆ ಎಂದು ಪ್ರಶ್ನಿಸಿರುವ ಅವರು, ಇದನ್ನು ಕೂಡಲೇ ವಾಪಸ್ ಪಡೆದು ಲಾರಿ ಉದ್ಯಮ ಉಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಬರೆದ ಮನವಿಯನ್ನು ಸೋಮವಾರ ಮೈಸೂರು ಎಪಿಎಂಸಿ ಕಾರ್ಯದರ್ಶಿಗೆ ಸಲ್ಲಿಸಿರುವುದಾಗಿ ಬಿ.ಕೋದಂಡರಾಮ ತಿಳಿಸಿದ್ದಾರೆ.

'ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನ': ನಾಳೆ ಸಂವಾದ



ಮೈಸೂರು,ಆ.8(ಪಿಎಂ)– ದಲಿತ ಸಂಘರ್ಷ ಸಮಿತಿ ಒಕ್ಕೂಟ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ಜಂಟಿ ಆಶ್ರಯದಲ್ಲಿ ಆ.10ರಂದು 'ಪ್ರಜಾಪ್ರಭುತ್ವದ ಉಳಿವಿಗಾಗಿ ಸಂವಿಧಾನ–ಒಂದು ಸಂವಾದ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಒಕ್ಕೂಟದ ಸಂಚಾಲಕ ಶಿವಲಿಂಗಯ್ಯ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮೈಸೂರು ವಿವಿಯ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಂದು ಬೆಳಗ್ಗೆ 10.30ಕ್ಕೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಉದ್ಘಾಟಿಸಲಿದ್ದಾರೆ ಎಂದರು. ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಪುಸ್ತಕ ಬಿಡುಗಡೆ ಮಾಡಲಿರುವ ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಸಂವಾದ ನಡೆಸಿಕೊಡಲಿದ್ದಾರೆ. ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಒಕ್ಕೂಟದ ಮುಖಂಡರಾದ ವರದಯ್ಯ, ಹೆಚ್.ಕೆ.ಕುಮಾರಸ್ವಾಮಿ, ಕುಪ್ಪೆ ನಾಗರಾಜ್, ಡಾ.ಶಿವಣ್ಣ, ಕಲ್ಲಹಳ್ಳಿ ಕುಮಾರ್ ಗೋಷ್ಠಿಯಲ್ಲಿದ್ದರು.

ಸಿದ್ದರಾಮೋತ್ಸವದಿಂದ ಬಿಜೆಪಿಯಲ್ಲಿ ತಳಮಳ

ಮೈಸೂರು,ಆ.8(ಎಂಟಿವೈ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜನ್ಮದಿನದ ಅಮೃತ ಮಹೋತ್ಸವ ಕಾರ್ಯಕ್ರಮದ ಯಶಸ್ಸಿನಿಂದ ಬಿಜೆಪಿ ತಲ್ಲಣಗೊಂಡಿದೆ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಿಡಿಕಾರಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದಾವಣಗೆರೆಯಲ್ಲಿ ನಡೆದ ಈ ಕಾರ್ಯಕ್ರಮದ ಯಶಸ್ಸಿನಿಂದ ಬಿಜೆಪಿಯಲ್ಲಿ ತಳಮಳ ಶುರುವಾಗಿದೆ. ನಿರೀಕ್ಷೆಗೂ ಮೀರಿ ಈ ಕಾರ್ಯಕ್ರಮ ಯಶಸ್ವಿಯಾಗಿದೆ. ದುಡ್ಡು ಕೊಟ್ಟರೂ ಅಷ್ಟು ಜನ ಕಾರ್ಯಕ್ರಮಕ್ಕೆ ಬರಲು ಸಾಧ್ಯವಿಲ್ಲ. ಹಾಗೆ ಬಂದಿದ್ದರೆ ಅರ್ಧಗಂಟೆಯಲ್ಲಿ ಆ ಜನ ವಾಪಸ್ ಹೋಗುತ್ತಾರೆ. ಈ ಕಾರ್ಯಕ್ರಮ ಆ ರೀತಿ ಆಗಲಿಲ್ಲ. 15 ಲಕ್ಷಕ್ಕೂ ಹೆಚ್ಚು ಜನ ಯಾವ ನಿರೀಕ್ಷೆ ಇಲ್ಲದೆ ಕಾರ್ಯಕ್ರಮಕ್ಕೆ ಬಂದರು. ಇದೊಂದು ಚಾರಿತ್ರಿಕ ಕಾರ್ಯಕ್ರಮ ಎಂದು ಹೇಳಿದರು.

ಈ ಕಾರ್ಯಕ್ರಮದ ಯಶಸ್ಸಿನಿಂದ ಕಾಂಗ್ರೆಸ್ ಮೈಮರೆಯಬಾರದು. ಎಲ್ಲರೂ ಒಗ್ಗಟ್ಟಿನಿಂದ ಮುಂದಿನ ವಿಧಾನಸಭಾ ಚುನಾವಣೆಗೆ ತಯಾರಾಗಬೇಕಾಗಿದೆ. ಬಿಜೆಪಿ ತನ್ನ ಆಡಳಿತದ ವೈಫಲ್ಯವನ್ನು ಮುಚ್ಚಿಕೊಳ್ಳಲು ಸಿದ್ದರಾಮಯ್ಯ ಹುಟ್ಟುಹಬ್ಬ ಕಾರ್ಯಕ್ರಮದ ಬಗ್ಗೆ ಟೀಕೆ ಮಾಡುತ್ತಿದೆ. ಇದು ಸಿದ್ದರಾಮೋತ್ಸವ ಅಲ್ಲ. ಸಿದ್ದರಾಮಯ್ಯನವರ ಹಿತೈಷಿಗಳು, ಪಕ್ಷದ ಮುಖಂಡರು ಸೇರಿಕೊಂಡು ಮಾಡಿದ ಅಮೃತ ಮಹೋತ್ಸವ ಎಂದರು.

ಬಿಜೆಪಿಯಿಂದ ಹರ ಘರ್ ತಿರಂಗಾ ಅಭಿಯಾನದ ಕುರಿತು ಪ್ರತಿಕ್ರಿಯಿಸಿದ ಅವರು, ಸ್ವಾತಂತ್ರ್ಯ ಆಶಯಗಳ ಮೇಲೆ ಬಿಜೆಪಿಗೆ ನಂಬಿಕೆ ಇಲ್ಲ. ಅವರಿಗೆ ಬೇಕಾಗಿರುವುದು ಸರ್ವಾಧಿಕಾರತ್ವ ಮಾತ್ರ. ಒಂದು ಧರ್ಮ, ಒಂದು ಭಾಷೆ, ಒಬ್ಬರದ್ದೇ ಆಡಳಿತ ಎಂಬುದು ಬಿಜೆಪಿ ನಿಲುವು. ಇಂತಹವರಿಂದ ಸ್ವಾತಂತ್ರ್ಯದ ಆಶಯ ಈಡೇರಲು ಸಾಧ್ಯವಿಲ್ಲ ಎಂದರು. ರಾಷ್ಟ್ರಧ್ವಜ ತಯಾರಿಗೆ ತನ್ನದೇ ಆದ ನಿಯಮ ಮತ್ತು ಕ್ರಮ ಇದೆ. ಅದನ್ನೆಲ್ಲ ಬಿಜೆಪಿ ಮುರಿದು ಬಾವುಟಕ್ಕೆ ಅವಮಾನಿಸುತ್ತಿದೆ ಎಂದು ಟೀಕಿಸಿದರು.

ಸ್ವಾತಂತ್ರ್ಯ ಚಳುವಳಿಯ ಇತಿಹಾಸ ತಿರುಚುವ ಪ್ರಯತ್ನ ವಿರೋಧಿಸಿ

ಸಿಐಟಿಯು ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಆ.8(ಆರ್‌ಕೆಬಿ)– ಸ್ವಾತಂತ್ರ್ಯ ನಂತರವೂ ದೇಶದಲ್ಲಿ ಹಸಿವು, ಬಡತನ, ಅಪೌಷ್ಟಿಕತೆ, ಅಸ್ಪೃಶ್ಯತೆ ತಾಂಡವವಾಡುತ್ತಿದೆ. ಭ್ರಷ್ಟಾಚಾರ ವ್ಯಾಪಕವಾಗಿದೆ ಎಂದು ಆರೋಪಿಸಿ, ಸಿಐಟಿಯು ಕಾರ್ಯಕರ್ತರು ಸೋಮವಾರ ಮೈಸೂರಿನ ರಾಮಸ್ವಾಮಿ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಕ್ವಿಟ್ ಇಂಡಿಯಾ ಚಳುವಳಿ ನೆನಪಿನಲ್ಲಿ ದೇಶದ ಅಖಂಡತೆ, ಸಾರ್ವಭೌಮತ್ವ ಕಾಪಾಡುವ ನಿಟ್ಟಿನಲ್ಲಿ, ಸ್ವಾತಂತ್ರ್ಯ ಚಳುವಳಿಯ ಇತಿಹಾಸ ತಿರುಚುವ ಪ್ರಯತ್ನಗಳು ನಡೆದಿವೆ. ಇದರ ವಿರುದ್ಧ ಎಲ್ಲರೂ ಎಚ್ಚೆತ್ತು ಸಾಮ್ರಾಜ್ಯಶಾಹಿ ಮತ್ತು ವಸಾಹತುಶಾಹಿ ನೀತಿಗಳು, ಕೋಮುವಾದದ ವಿರುದ್ಧ ಬಹುತ್ವ ಭಾರತವನ್ನು ಇನ್ನಷ್ಟು ಬಲಪಡಿಸಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಹೆಮ್ಮೆಯಿಂದ ಆಚರಿಸಬೇಕಿದೆ ಎಂದು ಆಗ್ರಹಿಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಬಾಲಾಜಿರಾವ್, ಜಯರಾಂ ಇನ್ನಿತರರು ಪ್ರತಿಭಟನೆಯಲ್ಲಿದ್ದರು.



ಬನ್ನೂರು ಲಯನ್ಸ್ ಸಂಸ್ಥೆ ಪ್ರತಿಷ್ಠಾಪನ ಕಾರ್ಯಕ್ರಮದ ಅಂಗವಾಗಿ ಮಹಿಳೆಯರಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು. ಈ ವೇಳೆ ಸಂಸ್ಥೆ ಅಧ್ಯಕ್ಷ ಎಸ್.ಕೃಷ್ಣಪ್ಪ, ಮಾಜಿ ರಾಜ್ಯಪಾಲ ಕೆ.ದೇವೇಗೌಡ, ಕಾರ್ಯದರ್ಶಿ ಡಿ.ಬಸವರಾಜು, ಖಜಾಂಚಿ ತಿಮ್ಮೇಗೌಡ, ಎಸ್.ರಾಮಚಂದ್ರ ಇನ್ನಿತರರು ಉಪಸ್ಥಿತರಿದ್ದರು.

75ನೇ ಸ್ವಾತಂತ್ರ್ಯ ದಿನವನ್ನು ಕಾಂಗ್ರೆಸ್ ಹಬ್ಬವಾಗಿ ಆಚರಿಸುತ್ತಿದೆ: ಕೆ.ಮರೀಗೌಡ



ಮೈಸೂರು. ಆ.8– ಕಾಂಗ್ರೆಸ್ ಪಕ್ಷ 75ನೇ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ರಾಷ್ಟ್ರೀಯ ಹಬ್ಬವಾಗಿ ಆಚರಿಸುತ್ತಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಇಲವಾಲ ಬ್ಲಾಕ್ ಕಾಂಗ್ರೆಸ್ ವತಿಯಿಂದ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗುಂಗ್ರಾಲ್‌ಛತ್ರ, ದೊಡ್ಡೇಗೌಡನಕೊಪ್ಪಲು, ಕಲ್ಲೂರು, ನಾಗನಹಳ್ಳಿ, ಆನಂದೂರು, ಚಿಕ್ಕನಹಳ್ಳಿ, ಮಲ್ಲೇಗೌಡನಕೊಪ್ಪಲುಗಳಲ್ಲಿ ಪಾದಯಾತ್ರೆ ವೇಳೆ ಮಾತನಾಡಿದ ಅವರು, ಈ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿವೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣತ್ಯಾಗ ಮಾಡಿದ ಮಹನೀಯರನ್ನು ಸ್ಮರಿಸಿಕೊಳ್ಳುವುದು ಎಲ್ಲರ ಕರ್ತವ್ಯ ಎಂದರು.

ಕಾಂಗ್ರೆಸ್ ಪಕ್ಷ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಪಕ್ಷವಾಗಿದ್ದು, ಸ್ವಾತಂತ್ರ್ಯ ನಂತರದಲ್ಲಿ ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ಪಕ್ಷದ ಕೊಡುಗೆ ಅಪಾರ. ನೆಹರು ಪ್ರಧಾನಿಯಾಗಿದ್ದಾಗ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದು, ದೇಶವನ್ನು ಅಭಿವೃದ್ಧಿ ಮಾಡಿದರು. ಇಂದಿರಾಗಾಂಧಿಯವರು ಪ್ರಧಾನಿಯಾಗಿದ್ದಾಗ 20 ಅಂಶಗಳ ಕಾರ್ಯಕ್ರಮಗಳ ಮೂಲಕ ದೇಶದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದರು. ರಾಜೀವ್‌ಗಾಂಧಿಯವರು ಪ್ರಧಾನಿಯಾಗಿದ್ದಾಗ ಮಾಹಿತಿ ತಂತ್ರಜ್ಞಾನವನ್ನು ದೇಶಕ್ಕೆ ಪರಿಚಯಿಸಿದರು ಎಂದು ಕೆ.ಮರಿಗೌಡ ಹೇಳಿದರು.

ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಅರುಣ್‌ಕುಮಾರ್, ಸ್ಲಂಬೋರ್ಡ್ ಮಾಜಿ ನಿರ್ದೇಶಕ ಜಯರಾಮೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಮುಖಂಡರಾದ ಆನಂದೂರು ರಾಮೇಗೌಡ, ಜಗದೀಶ್, ಸೀತಾರಾಂ, ವೈ.ಸಿ.ಸ್ವಾಮಿ, ಇಲವಾಲ ಸುರೇಶ್, ರಾಮು, ಯದುಕುಮಾರ್, ಚುಂಚೇಗೌಡ, ನಟರಾಜ್, ಲೋಕೇಶ್, ಸ್ವಾಮಿ, ರವಿ, ತುಳಸಿರಾಂ, ಬಸವರಾಜೇಗೌಡ, ಸುರೇಶ್, ಕುಮಾರ್, ರಾಘು ಹಾಜರಿದ್ದರು.

> ಕಾಂಗ್ರೆಸ್ ಈ ದೇಶದ ಐಕ್ಯತೆಗೆ, ಭದ್ರತೆಗೆ ಹೆಚ್ಚಿನ ಒತ್ತು ಕೊಟ್ಟು ಅಂತರರಾಷ್ಟ್ರೀಯ ಮಟ್ಟದಲ್ಲಿ ದೇಶವನ್ನು ಬೆಳೆಸುವ ಕೆಲಸ ಮಾಡಿದೆ. ಡಾ.ಬಿ.ಆರ್. ಅಂಬೇಡ್ಕರ್ ರವರು ದೇಶಕ್ಕೆ ಉತ್ತಮ ಸಂವಿಧಾನವನ್ನು ಕೊಟ್ಟಿದ್ದಾರೆ. ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಕಾಲದಲ್ಲಿ ದೇಶ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಪಂಚದಲ್ಲಿಯೇ 3ನೇ ಸ್ಥಾನದಲ್ಲಿತ್ತು. ಈಗ 164ನೇ ಸ್ಥಾನದಲ್ಲಿದೆ. ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ದೇಶವನ್ನು ದಿವಾಳಿ ಅಂಚಿಗೆ ಕೊಂಡೊಯ್ದು ಜನರ ಬದುಕು ದುಸ್ತರವಾಗಿದೆ. ಎಲ್ಲಾ ಬೆಲೆಗಳು ಗಗನಮುಟ್ಟಿವೆ. ಆದ್ದರಿಂದ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ. –ಕೆ.ಮರೀಗೌಡ

ಸಂಸ್ಕೃತ ಭಾರತೀ ಮೈಸೂರು ವಿಭಾಗದಿಂದ ಸಂಸ್ಕೃತ ಸಪ್ತಾಹಕ್ಕೆ ಚಾಲನೆ

ವಿಶ್ವ ಸಂಸ್ಕೃತ ದಿನದ ಮೂಲಕ ಸಂಸ್ಕೃತ ಭಾಷೆಯ ಅಭಿವೃದ್ಧಿ

ಸಂಸ್ಕೃತ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತ ಅಧ್ಯಕ್ಷ ಟಿ.ಎನ್.ಪ್ರಭಾಕರ ಅಭಿಮತ

ಮೈಸೂರು, ಆ.8(ಆರ್‌ಕೆಬಿ)– ದೇಶದಲ್ಲಿ ಸಂಸ್ಕೃತವನ್ನು ವ್ಯಾಪಕವಾಗಿ ಪ್ರಚುರಪಡಿಸಲು ಶ್ರಾವಣ ಮಾಸ ಹುಣ್ಣಿಮೆಯನ್ನು ವಿಶ್ವ ಸಂಸ್ಕೃತ ದಿನವೆಂದು ಆಚರಿಸಲಾಗುತ್ತಿದೆ. ಈ ಸಂಬಂಧ 52 ವರ್ಷಗಳ ಹಿಂದೆ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯವು ಕೇಂದ್ರ ಮತ್ತು ರಾಜ್ಯ ಮಟ್ಟದಲ್ಲಿ ಸಂಸ್ಕೃತ ದಿನವನ್ನು ಆಚರಿಸಲು ಸೂಚನೆ ನೀಡಿದೆ ಎಂದು ಕರ್ನಾಟಕ ದಕ್ಷಿಣ ಪ್ರಾಂತ ಸಂಸ್ಕೃತ ಭಾರತೀ ಅಧ್ಯಕ್ಷ ಟಿ.ಎನ್.ಪ್ರಭಾಕರ ತಿಳಿಸಿದರು.

ಮೈಸೂರಿನ ಸರಸ್ವತಿಪುರಂ ವಿಜಯ ವಿಠ್ಠಲ ವಿದ್ಯಾಶಾಲೆಯಲ್ಲಿ ಮೈಸೂರು ವಿಭಾಗದ ಸಂಸ್ಕೃತ ಭಾರತೀ ವತಿಯಿಂದ ಆಯೋಜಿಸಿದ್ದ ಸಂಸ್ಕೃತ ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ವಿಶ್ವ ಸಂಸ್ಕೃತ ದಿನವು ಸಂಸ್ಕೃತದ ಪ್ರಾಚೀನ ಭಾರತೀಯ ಭಾಷೆಯ ಸುತ್ತ ಕೇಂದ್ರೀಕೃತವಾಗಿರುವ ವಾರ್ಷಿಕ ಕಾರ್ಯಕ್ರಮವಾಗಿದೆ. ಇದನ್ನು ಶ್ರಾವಣ ಪೂರ್ಣಿಮೆಯಂದು ಆಚರಿಸಲಾಗುತ್ತದೆ. ವಿಶ್ವ ಸಂಸ್ಕೃತ ದಿನದ ಸಂದರ್ಭದಲ್ಲಿ ಸಂಸ್ಕೃತ ಉತ್ಸವಗಳ ಮೂಲಕ ಸಂಸ್ಕೃತದ ಅಧ್ಯಯನಗಳು ನಡೆಸುವುದು ಇದರ ಉದ್ದೇಶವಾಗಿದೆ. ಸಂಸ್ಕೃತ ಭಾರತೀ ಈ ದಿನದ ಪ್ರಚಾರದಲ್ಲಿ ತೊಡಗಿಸಿಕೊಂಡಿದೆ. ಭಾರತದಲ್ಲಿ 10 ಸಾವಿರ ಕೇಂದ್ರಗಳಲ್ಲಿ ಸಂಸ್ಕೃತ ಸಪ್ತಾಹ ನಡೆಸಲಾಗುತ್ತಿದೆ ಎಂದು ಹೇಳಿದರು.

1789ರಲ್ಲಿ ಕೊಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಶುರುವಾಯಿತು. ಆ ಸಂದರ್ಭದಲ್ಲಿ ಇಂಗ್ಲೆಂಡ್‌ನಿಂದ ಸರ್ ವಿಲಿಯಂ ಜೋನ್ಸ್ ಅವರು ನ್ಯಾಯಾಧೀಶರಾಗಿ ನೇಮಕಗೊಂಡರು. ಅವರು ಭಾರತಕ್ಕೆ ಬರುತ್ತಿದ್ದಂತೆ ಸಂಸ್ಕೃತ ಭಾಷೆಯನ್ನು ಕಲಿಯಲು ವಿಶೇಷ ಆಸಕ್ತಿ ವಹಿಸಿದರು.



ಮೈಸೂರಿನ ವಿಜಯ ವಿಠ್ಠಲ ವಿದ್ಯಾಶಾಲೆಯಲ್ಲಿ ಸಂಸ್ಕೃತ ಭಾರತೀ ಆಯೋಜಿಸಿದ್ದ ಸಂಸ್ಕೃತ ಸಪ್ತಾಹ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ದಕ್ಷಿಣ ಪ್ರಾಂತ ಸಂಸ್ಕೃತ ಭಾರತೀ ಅಧ್ಯಕ್ಷ ಟಿ.ಎನ್.ಪ್ರಭಾಕರ ಮಾತನಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್, ಸಂಸ್ಕೃತ ಭಾರತೀ ಮೈಸೂರು ಅಧ್ಯಕ್ಷ ಧೀರೇಂದ್ರ ಕುಮಾರ್ ಮೆಹತಾ, ವಿಜಯ ವಿಠ್ಠಲ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಆರ್.ವಾಸುದೇವ ಭಟ್ಟ, ಕಾಲೇಜು ಪ್ರಾಚಾರ್ಯ ಹೆಚ್.ಸತ್ಯಪ್ರಸಾದ್, ವಿದ್ಯಾಶಾಲೆಯ ಮುಖ್ಯೋಪಾಧ್ಯಾಯಿನಿ ಬಿ.ಆರ್.ಮಂಜುಳಾ ಚಿತ್ರದಲ್ಲಿದ್ದಾರೆ.

ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಿಂತ ಅತ್ಯಂತ ಉನ್ನತ ಭಾಷೆ ಸಂಸ್ಕೃತ ಎಂದೂ ಅವರು ವ್ಯಾಖ್ಯಾನ ಮಾಡಿದ್ದರು. ನಂತರ ಸಂಸ್ಕೃತದ ಬಗ್ಗೆ ದೊಡ್ಡ ಕ್ರಾಂತಿಯುಂಟಾಯಿತು ಎಂದು ಟಿ.ಎನ್.ಪ್ರಭಾಕರ ತಿಳಿಸಿದರು.

ಇಂದು ವಿದೇಶಿ ಇಂಗ್ಲಿಷ್ ವ್ಯಾಮೋಹಕ್ಕೆ ಎಲ್ಲರೂ ಒಳಗಾಗಿದ್ದೇವೆ. ಸ್ವದೇಶಿ ಭಾಷೆ, ಗ್ರಂಥಗಳ ಬಗ್ಗೆ ನಿರಾಸಕ್ತಿ ವಹಿಸಿದ್ದೇವೆ. ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ಮಾತೃಭಾಷಾ ದಿನವನ್ನು ಆಚರಿಸುವಂತಹ ದುರಂತಕ್ಕೆ ಬಂದಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ಸಂಸ್ಕೃತ ಭಾರತೀ ಮೈಸೂರು ಘಟಕದ ಅಧ್ಯಕ್ಷ ಧೀರೇಂದ್ರಕುಮಾರ್ ಮೆಹತಾ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ವಿಜಯ ವಿಠ್ಠಲ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಆರ್.ವಾಸುದೇವ ಭಟ್ಟ, ಕಾಲೇಜಿನ ಪ್ರಾಚಾರ್ಯ ಹೆಚ್. ಸತ್ಯಪ್ರಸಾದ್, ವಿದ್ಯಾಶಾಲೆಯ ಮುಖ್ಯೋಪಾಧ್ಯಾಯಿನಿ ಬಿ.ಆರ್.ಮಂಗಳಾ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 9 ಆಗಸ್ಟ್ 2022

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ



ಭಾರತೀನಗರ, ಆ.8– ಇಲ್ಲಿಗೆ ಸಮೀಪದ ಅಣ್ಣೂರು ಗ್ರಾಮದಲ್ಲಿ 9 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗ್ರಾಪಂ ಅಧ್ಯಕ್ಷೆ ಡಿ.ಎಂ.ನಾಗಮಣಿ ಭೂಮಿಪೂಜೆ ನೆರವೇರಿಸಿದರು.

ಇದೇ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ಎಸ್‌ಸಿ ಕಾಲೋನಿಯಿಂದ ಪುಟ್ಟಕಟ್ಟೆಯವರೆಗೆ ಕಾವೇರಿ ನೀರಾವರಿ ನಿಗಮದಿಂದ ಎಸ್‌ಇಪಿ ಯೋಜನೆಯಡಿ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದು ಅಧಿಕಾರಿಗಳಿಗೆ ಮನವಿ ಮಾಡಿದರು.

ಇದೇ ವೇಳೆ ಕಾವೇರಿ ನೀರಾವರಿ ನಿಗಮದ ಸಹಾಯಕ ಇಂಜಿನಿಯರ್ ಚಂದ್ರೇಗೌಡ, ಗುತ್ತಿಗೆದಾರ ಬಿದರಹೊಸಹಳ್ಳಿ ಪುಟ್ಟಸ್ವಾಮಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ಅಶ್ವಿನಿ, ಸದಸ್ಯರಾದ ಚಂದ್ರಶೇಖರ್, ಅಶ್ವಿನಿ, ಶಿವಮ್ಮ, ಮಂಜು ಕುಮಾರ್, ಹೇಮಾ ಇತರರಿದ್ದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಆ.8– 66/11 ಕೆ.ವಿ ತೂಬಿನಕೆರೆ ವಿದ್ಯುತ್ ಸ್ವೀಕರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ನಿರ್ವಹಣೆ ನಿಮಿತ್ತ ಆ. 10ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ತೂಬಿನಕೆರೆ, ತೂಬಿನಕೆರೆ ಇಂಡಸ್ಟ್ರಿಯಲ್ ಏರಿಯಾ, ಉರಮಾರಕಸಲ ಗೆರೆ, ಯಲಿಯೂರು, ಕಾಳೇನಹಳ್ಳಿ, ಎಲೆಚಾಕನಹಳ್ಳಿ, ರಾಗಿಮುದ್ದನಹಳ್ಳಿ, ಸುಂಡಹಳ್ಳಿ, ಪೀಹಳ್ಳಿ, ಕೊಡಿಯಾಲ, ಆಲಗೂಡು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್, ಕೊತ್ತತ್ತಿ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರಮಟ್ಟದ ಸೈಲಿಂಗ್ ಚಾಂಪಿಯನ್‌ಶಿಪ್‌ಗೆ ಚಾಲನೆ

- ದೇಶದ ವಿವಿಧೆಡೆಯಿಂದ 120ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗಿ
- ಆ.13ರವರೆಗೆ ಕೆಆರ್‌ಎಸ್ ಹಿನ್ನೀರಿನಲ್ಲಿ ಸಾಹಸಮಯ ಸ್ಪರ್ಧೆ



ಶ್ರೀರಂಗಪಟ್ಟಣ, ಆ.8– ತಾಲೂಕಿನ ಕೆಆರ್‌ಎಸ್ ಹಿನ್ನೀರಿನಲ್ಲಿ ಸೋಮವಾರ ಭಾರತೀಯ ಸೇನೆಯ ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ಅಂಡ್ ಸೆಂಟರ್ ಬೆಂಗಳೂರು(MEG), ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ (GETHNAA), ಮಂಡ್ಯ ಜಿಲ್ಲಾಡಳಿತ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರ ಮಟ್ಟದ ಮಲ್ಟಿ ಕ್ಲಾಸ್ ಯೂತ್ ಸೈಲಿಂಗ್ ಅಂಡ್ ಕೈಟ್ ಬೋರ್ಡ್ ಚಾಂಪಿಯನ್‌ಶಿಪ್‌ಗೆ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ಕೆ.ಸಿ.ನಾರಾಯಣಗೌಡ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಆ.13ರವರೆಗೆ ನಡೆಯಲಿರುವ ಸೈಲಿಂಗ್ ಚಾಂಪಿಯನ್‌ಶಿಪ್‌ನಲ್ಲಿ ದೇಶದ ವಿವಿಧೆಡೆಯಿಂದ 120ಕ್ಕೂ ಹೆಚ್ಚು ಸೈಲರ್ಸ್ ಪಾಲ್ಗೊಂಡಿದ್ದಾರೆ. ಯುವ ಸೈಲರ್ಸ್‌ಗೆ ಇದೊಂದು ಅದ್ಭುತ ಅವಕಾಶವಾಗಿದ್ದು, ತಮ್ಮ ಪ್ರತಿಭೆಯನ್ನು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆಗೆ ಉತ್ತಮ ವೇದಿಕೆಯಾಗಿದೆ ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 15ಲಕ್ಷ ರೂ. ಅನುದಾನ ನೀಡುವ ಮೂಲಕ ಸೈಲಿಂಗ್ ಚಾಂಪಿಯನ್‌ಶಿಪ್‌ಗೆ ಮತ್ತಷ್ಟು ಉತ್ತೇಜನ ನೀಡಲಾಗಿದೆ. ಸೈಲಿಂಗ್ ಸ್ಪರ್ಧೆ ಆಯೋಜಿಸಿರುವುದರಿಂದ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಲಿದ್ದು, ಮುಂದಿನ ದಿನಗಳಲ್ಲಿ ಈ ಭಾಗವನ್ನು ಟೂರಿಸಂ ಹಬ್ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ಮುಂದಿನ ವರ್ಷ ಅಂತಾರಾಷ್ಟ್ರೀಯ ಸೈಲಿಂಗ್ ಚಾಂಪಿಯನ್‌ಶಿಪ್: ಅಬಕಾರಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಕೆಆರ್‌ಎಸ್ ಹಿನ್ನೀರಿನಲ್ಲಿ ಆಯೋಜಿಸಿರುವ ಮಲ್ಟಿಕ್ಲಾಸ್ ಯೂತ್ ಸೈಲಿಂಗ್ ಅಂಡ್ ಕೈಟ್ ಬೋರ್ಡ್ ಚಾಂಪಿಯನ್ ಶಿಪ್ ಕಾರ್ಯಕ್ರಮವನ್ನು ಮುಂದಿನ ವರ್ಷ ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಚರಿಸಲಾಗುವುದು ಎಂದು ತಿಳಿಸಿದರು.

ಕ್ರೀಡಾ ಸಚಿವರು ಸೈಲಿಂಗ್ ಚಾಂಪಿಯನ್‌ಶಿಪ್‌ಗೆ



ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆ. ದೇಶದ ವಿವಿಧ ಭಾಗಗಳಿಂದ ಕ್ರೀಡಾಪಟುಗಳು ಭಾಗವಹಿಸಿದ್ದಾರೆ. ಕಳೆದ ವರ್ಷ ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ ನಾಲ್ವರು ಕ್ರೀಡಾಪಟುಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ್ದಾರೆ. ಈ ಚಾಂಪಿಯನ್‌ಶಿಪ್‌ನಲ್ಲಿ ಉದ್ಯೋಗ ಸೃಷ್ಟಿ ಆಗುತ್ತಿದೆ ಎಂದರು.

ಈ ವೇಳೆ ಶಾಸಕ ಸಿ.ಎಸ್.ಪುಟ್ಟರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೇಹದಾರ್ಢ್ಯ ಪ್ರದರ್ಶನ, ಮಿಲ್ ಬ್ಯಾಂಡ್, ಕಳರಿಪಯಟ್ಟು ಪ್ರದರ್ಶನ ನಡೆಯಿತು.

ಅಮೃತ ಮಹೋತ್ಸವ: ಕಾಂಗ್ರೆಸ್ ನಾಯಕರಿಂದ ಪಾದಯಾತ್ರೆ



ನಾಗಮಂಗಲ, ಆ.8– 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಮರ್ಪಿಸಲು ಪಟ್ಟಣದಲ್ಲಿ ಸೋಮವಾರ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ಯಾತ್ರೆಗೆ ಚಾಲನೆ ನೀಡಿದ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ದೇಶದ ಸ್ವಾತಂತ್ರ್ಯೋತ್ಸವಕ್ಕೆ ಮಹನೀಯರ ಸೇವೆ, ಸಾಧನೆ, ಬಲಿದಾನ, ತ್ಯಾಗ ನೆನಪು ಮಾಡುವ ಅಮೃತ ಮಹೋತ್ಸವ ನಮ್ಮಗಳ ಅಭಿಮಾನದ ಸಂಕೇತವಾಗಿದೆ ಎಂದರು. ರಾಷ್ಟ್ರ ಹಾಗೂ ರಾಜ್ಯನಾಯಕರ ತೀರ್ಮಾನದಿಂದ 75ನೇ ವರ್ಷದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ರಾಜ್ಯದ ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಆ. 15 ವರೆಗೆ ಆಚರಣೆ ಮಾಡುವ ಮುಖಾಂತರ ದೇಶಾಭಿಮಾನ ಹಾಗೂ ಸ್ವಾತಂತ್ರ್ಯ ತಂದುಕೊಟ್ಟ ನೇತಾರರ ನೆನಪು ಮಾಡಿಕೊಳ್ಳುವ ಮುಖಾಂತರ ಪ್ರತಿಯೊಬ್ಬ ಪ್ರಜೆಯಲ್ಲಿಯೂ ಅಮೃತ ಮಹೋತ್ಸವದ ಅಭಿಮಾನ ಬೆಳೆಯಲಿ ಎಂದು ಹೇಳಿದರು.

ಬೃಹತ್ ಪಾದಯಾತ್ರೆ: ಪಟ್ಟಣದ ಟಿ.ಬಿ.ಬಡಾವಣೆಯ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆಗೆ ಚಾಲನೆ ನೀಡಲಾಯಿತು. ನಂತರ ಪಟ್ಟಣದ ಚಾಮರಾಜನಗರ ಜೇವರ್ಗಿ ರಾಷ್ಟ್ರೀಯ ಹೆದ್ದಾರಿ ಮೂಲಕ ಸಾಗಿದ ನೂರಾರು ಕಾರ್ಯಕರ್ತರು ಪಟ್ಟಣದ ಮಂಡ್ಯ ರಸ್ತೆ, ಪಡುವಲಪಟ್ಟಣ ರಸ್ತೆ, ಶ್ರೀಸೌಮ್ಯಕೇಶವಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಂತರ ಟಿ.ಮರಿಯಪ್ಪ ವೃತ್ತದ ಮೂಲಕ ಟಿ.ಬಿ.ಬಡಾವಣೆಯ ಬಡಗೂಡಮ್ಮ ದೇವಾಲಯದ ಆವರಣವನ್ನು ತಲುಪಿತು.

ಪಾದಯಾತ್ರೆಯಲ್ಲಿ ಕಾರ್ಯಕರ್ತರು ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ಹಾಗೂ ರಾಷ್ಟ್ರ ಧ್ವಜವನ್ನು ಹಿಡಿದುಕೊಂಡು ಸಾಗಿದರು. ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು. ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗುತ್ತಿದ್ದ ದೃಶ್ಯ ಮೆರವಣಿಗೆಗೆ ಮೆರಗು ನೀಡಿತ್ತು. ಯುವಕರು ಸ್ವಾತಂತ್ರ್ಯ ಹೋರಾಟ ಗಾರರಿಗೆ ಜಯಘೋಷ ಮೊಳಗಿಸಿದರು. ಪಟಾಕಿ ಸಿಡಿಸಿ ಕಾರ್ಯಕರ್ತರು ಸಂಭ್ರಮಿಸಿದರು.

ಮಾಜಿ ಸಚಿವ ನರೇಂದ್ರಸ್ವಾಮಿ, ಮಾಜಿ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಚಂದ್ರಶೇಖರ್ ಮಾತನಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿವಾಕರ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ತಾಲೂಕು ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ವಸಂತಮಣಿ, ಮುಖಂಡರಾದ ಹೆಚ್.ಟಿ.ಕೃಷ್ಣೇಗೌಡ, ಗೀತಾ ದಾಸೇಗೌಡ, ಹನುಮಂತು, ಸುರೇಶ್ ಕಂಠಿ, ಸಾವಿತ್ರಮ್ಮ, ಸುನೀಲ್ ಲಕ್ಷ್ಮೀಕಾಂತ್, ಸಚಿನ್, ಚಲುವರಾಯಸ್ವಾಮಿ ಹಾಜರಿದ್ದರು.

ವಿದ್ಯಾರ್ಥಿಗಳು ಜಾತ್ಯತೀತ ಮನೋಭಾವ ಬೆಳೆಸಿಕೊಳ್ಳಲು ಸಲಹೆ

ಚಿನಕುರಳಿ, ಆ.8– ವಿದ್ಯಾರ್ಥಿಗಳು ಜಾತ್ಯತೀತ ಮನೋಭಾವ ಬೆಳೆಸಿಕೊಂಡು ವಿದ್ಯಾಭ್ಯಾಸ ಮಾಡಬೇಕು ಎಂದು ಜಿಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಸಲಹೆ ನೀಡಿದರು.

ಚಿನಕುರಳಿ ಗ್ರಾಮದಲ್ಲಿ ನಡೆದ ಚಿನಕುರಳಿ ವೃತ್ತಮಟ್ಟದ ಹಿರಿಯ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಕ್ರೀಡಾ ಜ್ಯೋತಿ ಸ್ವೀಕರಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹಿಜಾಬ್ ಸೇರಿದಂತೆ ಜಾತಿ, ಧರ್ಮದ ವಿಚಾರದಲ್ಲಿ ಸಾಕಷ್ಟು ಗೊಂದಲ ಸೃಷ್ಟಿಸುವ ಕೆಲಸವಾಗುತ್ತಿದೆ. ಹಾಗಾಗಿ, ವಿದ್ಯಾರ್ಥಿಗಳು ಯಾವುದೇ ಜಾತಿ, ಧರ್ಮದ ತಾರತಮ್ಯಕ್ಕೆ ಒಳಗಾಗಬಾರದು. ಗ್ರಾಮದಲ್ಲಿ ಎಲ್ಲಾ ಧರ್ಮ, ಜಾತಿಯವರು ಒಗ್ಗಟ್ಟಿನಿಂದ ಜೀವನ ನಡೆಸಿಕೊಂಡು ಹೋಗುತ್ತಿದ್ದೇವೆ. ಮುಸ್ಲಿಂ ಸಮುದಾಯದವರು ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳಿಗೆ ಕ್ರೀಡಾ ಸಮವಸ್ತ್ರ ನೀಡುವ ಮೂಲಕ ಮಾದರಿಯಾಗಿದ್ದಾರೆ ಎಂದು ತಿಳಿಸಿದರು.

ಕ್ರೀಡಾಕೂಟದಲ್ಲಿ ಸೋಲು–ಗೆಲುವು ಸಾಮಾನ್ಯ, ಕ್ರೀಡೆಯಲ್ಲಿ ಸೋತ ವಿದ್ಯಾರ್ಥಿಗಳು ಹತಾಶರಾಗಬೇಡಿ. ಮುಂದಿನ ದಿನಗಳಲ್ಲಿ ಗೆಲ್ಲುತ್ತೇವೆ ಎಂಬ ಆತ್ಮವಿಶ್ವಾಸದಲ್ಲಿ ಮುನ್ನಡೆದರೆ ಗೆಲುವು ದೊರೆಯುತ್ತದೆ ಎಂದು ಹೇಳಿದರು. ಬಿಇಓ ಲೋಕೇಶ್ ಮಾತನಾಡಿ, ವೃತ್ತಮಟ್ಟದ ಕ್ರೀಡಾಕೂಟಗಳು ಮಕ್ಕಳ ಕ್ರೀಡಾ ಚಟುವಟಿಕೆಯ ಮೊದಲ ಹಂತವಾಗಿರುತ್ತದೆ.



ಹಾಗಾಗಿ, ಕ್ರೀಡಾಕೂಟದಲ್ಲಿ ಎಲ್ಲರು ಭಾಗವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ತಾಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ ಗೆಲುವು ಸಾಧಿಸುವ ಮೂಲಕ ವಿದ್ಯಾರ್ಥಿಗಳು ತಾಲೂಕಿನ ಕೀರ್ತಿ ಹೆಚ್ಚಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಕ್ರೀಡಾಕೂಟದಲ್ಲಿ ಚಿನಕುರಳಿ ವೃತ್ತ ಮಟ್ಟದ ಸುಮಾರು 15ಕ್ಕೂ ಹೆಚ್ಚು ಶಾಲೆಗಳಿಂದ 300ಕ್ಕೂ ಅಧಿಕ ಮಕ್ಕಳು ಪಾಲ್ಗೊಂಡಿದ್ದರು. ಅಂತಾರಾಷ್ಟ್ರೀಯ ಕ್ರೀಡಾಪಟು ಚಿನಕುರಳಿ ಚಲುವೇಗೌಡ ಅವರು ಗುಂಡು ಎಸೆಯುವ ಮೂಲಕ ಚಾಲನೆ ನೀಡಿದರು. ಬಿಇಓ ಲೋಕೇಶ್ ಧ್ವಜಾರೋಹಣ ನೆರವೇರಿಸಿದರು. ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಅವರು ಕ್ರೀಡಾ ಜ್ಯೋತಿ ಸ್ವೀಕರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಗ್ರಾಪಂ ಅಧ್ಯಕ್ಷ ಪುಟ್ಟಸ್ವಾಮಿ(ಪಾಪಣ್ಣ)ವಹಿಸಿದ್ದರು. ಗ್ರಾಪಂ ಉಪಾಧ್ಯಕ್ಷೆ ಮಂಜುಳಾ ಸಿ.ಡಿ.ಮಹದೇವು, ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಮೊಗಣ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಗ್ರಾಪಂ ಸದಸ್ಯರಾದ ಸಿ.ಎ.ಲೋಕೇಶ್, ಕೃಷ್ಣೇಗೌಡ, ಪರಮೇಶ್, ನಾಗೇಗೌಡ, ನರಸಿಂಹಶೆಟ್ಟಿ, ಶ್ರೀನಿವಾಸ್, ವಸಂತೇಗೌಡ, ಡೇರಿ ಮಾಜಿ ಅಧ್ಯಕ್ಷ ರಮೇಶ್, ಸೊಸೈಟಿ ನಿರ್ದೇಶಕ ಮಂಜುನಾಥ್, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಅಧ್ಯಕ್ಷ ಮಂಜುನಾಥ, ದೈಹಿಕ ಪರಿವೀಕ್ಷಕ ಬವಸರಾಜು, ಮುಖ್ಯಶಿಕ್ಷಕ ಮಹದೇವಪ್ಪ, ಗ್ರೇಡ್–1 ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಶಿವಕುಮಾರ್ ಸೇರಿದಂತೆ ಹಲವರು ಹಾಜರಿದ್ದರು.

ಭೂಮಿ ಹಿಂತಿರುಗಿಸಲು ಆಗ್ರಹಿಸಿ ಪಾದಯಾತ್ರೆ, ಉಪವಾಸ ಸತ್ಯಾಗ್ರಹ

ಅರಣ್ಯ ಸಚಿವರ ಭರವಸೆಗೆ ವಾರದ ಗಡುವು

ಕೊಳ್ಳೇಗಾಲ, ಆ.8– ತಾಲೂಕಿನ ಸತ್ತೇಗಾಲ ಜಿಪಂ ವ್ಯಾಪ್ತಿ ಜಾಗೇರಿಯ ಬೂದುಗಟ್ಟೆದೊಡ್ಡಿಯಲ್ಲಿ ರೈತರ ಭೂಮಿ ವಶಕ್ಕೆ ಪಡೆದ ಅರಣ್ಯ ಇಲಾಖೆ ಕ್ರಮ ಖಂಡಿಸಿ ಹಾಗೂ ಭೂಮಿ ಹಿಂತಿರುಗಿಸುವಂತೆ ಆಗ್ರಹಿಸಿ ಇಂದು ಸಂತ್ರಸ್ತ ರೈತರು ಉಪವಾಸ ಸತ್ಯಾಗ್ರಹ ನಡೆಸಿದರೆ, ಇವರನ್ನು ಬೆಂಬಲಿಸಿ ರೈತ ಸಂಘದಿಂದ ಪಾದಯಾತ್ರೆ ನಡೆಸಿ, ಪ್ರತಿಭಟಿಸಲಾಯಿತು.

ರೈತ ಸಂಘದ ನೇತೃತ್ವದಲ್ಲಿ ಸೋಮವಾರ 50ಕ್ಕೂ ಹೆಚ್ಚು ರೈತರು ಸತ್ತೇಗಾಲ ಹ್ಯಾಂಡ್‌ಪೋಸ್ಟ್‌ನಿಂದ ಪಾದಯಾತ್ರೆ ಆರಂಭಿಸಿದ ಪ್ರತಿಭಟನಾಕಾರರು, ಅರಣ್ಯ ಇಲಾಖೆ ಮುಂದೆ ಪ್ರತಿಭಟಿಸಿದರಲ್ಲದೆ, ಭೂ ಉಪಸಂರಕ್ಷಣಾಧಿಕಾರಿ ಕಚೇರಿ ಮುಂಭಾಗ ಧರಣಿ ನಡೆಸಿದರು.

ಈ ವೇಳೆ ಭೂಮಿ ಕಳೆದುಕೊಂಡ ಸಂತ್ರಸ್ತ 3 ಕುಟುಂಬದ ಸದಸ್ಯರಾದ ವೆಂಕಟರಾಮನ್ ಬೋವಿ, ಚಂದ್ರ ಬೋವಿ, ಬಸವರಾಜು, ಚೌಡಬೋವಿ, ಜಯಮ್ಮ, ಈರಣ್ಣ ಬೋವಿ ಉಪವಾಸ ಸತ್ಯಾಗ್ರಹ ಆರಂಭಿಸಿದರು.

ಪ್ರವಾಸ ನಿಮಿತ್ತ ಜಿಲ್ಲೆಗೆ ಆಗಮಿಸಿದ್ದ ಅರಣ್ಯ ಸಚಿವರು, ವಿಷಯ ತಿಳಿದು ಶಾಸಕ ಎನ್.ಮಹೇಶ್ ಅವರೊಂದಿಗೆ ಧರಣಿ ಸ್ಥಳಕ್ಕೆ ಧಾವಿಸಿ ರೈತರ ಅಹವಾಲು ಆಲಿಸಿದರು. ಅಲ್ಲದೆ ವಾರಗಳ ಕಾಲಾವಕಾಶ ಕೋರಿದರು. ಆದರೆ ಇದಕ್ಕೆ ರೈತರು ಒಪ್ಪಲಿಲ್ಲ. ಭೂಮಿ ಹಿಂತಿರುಗಿಸುವ ತನಕ ಇಲ್ಲೇ ಧರಣಿ ನಡೆಸಲಾಗುವುದು. ನೊಂದ 3 ಕುಟುಂಬದ 6 ಮಂದಿ ಸದಸ್ಯರು ಉಪವಾಸ ಸತ್ಯಾಗ್ರಹ ಮುಂದುವರೆಸಲಿದ್ದಾರೆ. ನಾವು ಅವರ ಪರವಾಗಿ ಬೆಂಬಲಕ್ಕೆ ನಿಲ್ಲುತ್ತೇವೆ ಎಂದು ರೈತ ಸಂಘದ ಕಾರ್ಯಕರ್ತರು ಸ್ಪಷ್ಟಪಡಿಸುತ್ತಿದ್ದಂತೆ ಸ್ಥಳದಿಂದ ಸಚಿವರು ವಾಪಸ್ಸಾದರು.



ಕೊಳ್ಳೇಗಾಲದ ಅರಣ್ಯ ಇಲಾಖೆ ಮುಂಭಾಗ ಜಾಗೇರಿ ರೈತರು ಧರಣಿ ನಡೆಸುತ್ತಿದ್ದ ಸ್ಥಳಕ್ಕೆ ಸಚಿವ ಉಮೇಶ್ ಕತ್ತಿ, ಶಾಸಕ ಎನ್.ಮಹೇಶ್ ಭೇಟಿ ನೀಡಿ, ಮನವಿ ಆಲಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎ.ಎಂ.ಮಹೇಶ್ ಪ್ರಭು, ಶೈಲೇಂದ್ರ, ಗುಂಡಾಲ್ ಹಳೆ ಅಚ್ಚುಕಟ್ಟುದಾರರ ಸಂಘದ ಅಧ್ಯಕ್ಷ ಅಣಗಳ್ಳಿ ದಶರಥ, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಎಂ.ಇ.ಬಸವರಾಜು, ಭಾಸ್ಕರ್, ಪ್ರಭಾಕರ್, ಯಶ್ವಂತ್, ಚಂದ್ರು, ನಿಕೋಲಸ್, ಬಸವರಾಜು, ದಿಲೀಪ್, ಶಂಕರ್ ಚೇತನ್ ಇನ್ನಿತರರಿದ್ದರು.

ಪಾಲಾರ್ ಹಾಡಿ, ಹೊಗೆನಕಲ್ ಜಲಪಾತ ಅಭಿವೃದ್ಧಿಗೆ ಕ್ರಮ

ಅರಣ್ಯಾ ಸಚಿವ ಉಮೇಶ್ ಕತ್ತಿ ಭರವಸೆ

ಹನೂರು, ಆ.8–ಕರ್ನಾಟಕದ ಗಡಿ ಭಾಗ ಪಾಲಾರ್ ಹಾಡಿ ಹಾಗೂ ಹೊಗೆನಕಲ್ ಜಲಪಾತ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಸಚಿವ ಉಮೇಶ್ ಕತ್ತಿ ಭರವಸೆ ನೀಡಿದರು.

ಪ್ರವಾಸ ನಿಮಿತ್ತ ಹೊಗೆನಕಲ್ ಪ್ರವಾಸಿ ತಾಣಕ್ಕೆ ಸಚಿವರು ಭೇಟಿ ನೀಡಿದ್ದ ವೇಳೆ ತಾಲೂಕಿನ ಗಡಿ ಗ್ರಾಮ ಪಾಲಾರ್‌ಗೆ ಮೂಲಸೌಕರ್ಯ ಕಲ್ಪಿಸುವಂತೆ ಗ್ರಾಮಸ್ಥರು ಹಾಗೂ ಸೋಲಿಗ ಸಂಘಟನೆಯಿಂದ ಮನವಿ ಮಾಡಲಾಯಿತು.

ಪಾಲಾರ್ ಗ್ರಾಮದಲ್ಲಿ ಸೋಲಿಗ ಸಮುದಾಯದ 103 ಕುಟುಂಬಗಳಿದ್ದು, 350ಕ್ಕೂ ಹೆಚ್ಚು ಜನಸಂಖ್ಯೆ ಇದೆ. ಆದರೂ ಸಹ ವಿದ್ಯುತ್ ಸೌಲಭ್ಯವಿಲ್ಲದೆ ಬುಡ್ಡಿ ದೀಪದಲ್ಲಿ ದಿನದೂಡುವಂತಾಗಿದೆ. ಕೂಡಲೇ ಹಾಡಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಬೇಕು. ಇಲ್ಲಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ಮೂಲಸೌಕರ್ಯ ಇಲ್ಲದೆ ಪರದಾಡುವಂತಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಇದಕ್ಕೆ ಉತ್ತರಿಸಿದ ಅರಣ್ಯ ಸಚಿವರು, ಈ ಸಂಬಂಧ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸಲಾಗುವುದು. ಆ.17 ರಂದು ಸಭೆ ಕರೆಯಲಾಗಿದೆ. ಈ ವೇಳೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಸೋಲಿಗ ಜನಾಂಗದ ಶ್ರೇಯೋಭಿವೃದ್ಧಿಗಾಗಿ ನಮ್ಮ ಸರ್ಕಾರ



ವಿವಿಧ ಯೋಜನೆಗಳನ್ನು ರೂಪಿಸಿದೆ. ರಾಜ್ಯದ ಗಡಿ ಭಾಗವಾದ ಪಾಲಾರ್ ಹಾಡಿ ಮತ್ತು ಹೊಗೆನಕಲ್ ಜಲಪಾತ ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಇಲ್ಲಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಳೆಗಾಲದಲ್ಲಿ ಸೇತುವೆಗಳ ಮೇಲೆ ನೀರು ಹರಿಯುವುದರಿಂದ ಗ್ರಾಮಗಳ ಸಂಪರ್ಕವೇ ಕಡಿದು ಹೋಗುತ್ತಿದೆ ಎಂಬ ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಸಚಿವರು, ಅಧಿಕಾರಿಗಳಿಂದ ಮಾಹಿತಿ ಪಡೆದು ಖುದ್ದು ನಾನೇ ಪರಿಶೀಲನೆ ನಡೆಸಲು ಪ್ರವಾಸ ಕೈಗೊಂಡಿದ್ದೇನೆ ಎಂದು ತಿಳಿಸಿದರು.

ವಿವಿಧ ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಆ.12ಕ್ಕೆ ರಾಷ್ಟ್ರೀಯ ಹೆದ್ದಾರಿ ಬಂದ್

ಕಬ್ಬು ಬೆಳೆಗಾರರ ಸಂಘದ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾಹಿತಿ



ಚಾಮರಾಜನಗರ, ಆ.8– ಕಬ್ಬಿನ ದರ ಪರಿಷ್ಕರಣೆ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆ ಒತ್ತಾಯಿಸಿ ಆ.12ರಂದು ಕಬ್ಬು ಬೆಳೆಗಾರರ ಸಂಘದಿಂದ ನಗರದ ಜಾಲಹಳ್ಳಿಹುಂಡಿ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ಬಂದ್ ಚಳವಳಿ ಹಮ್ಮಿಕೊಂಡಿರುವುದಾಗಿ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾಹಿತಿ ನೀಡಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಕಬ್ಬು ಬೆಳೆಗಾರರ ಸಂಘದ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೇಂದ್ರ ಸರ್ಕಾರ ನಿಗದಿ ಮಾಡಿರುವ ಕಬ್ಬಿನ ದರ ಸರಿ ಇಲ್ಲ. ಪ್ರತಿಟನ್‌ಗೆ 4.500 ರೂ. ನಿಗದಿ ಪಡಿಸಬೇಕು. ಆದರೆ ಪ್ರತಿಟನ್ ಕಬ್ಬಿನ ಇಳುವರಿಯ 10ರಷ್ಟು ಎಫ್‌ಆರ್‌ಪಿಯನ್ನು 10,25ಕ್ಕೆ ಏರಿಕೆ ಮಾಡಿ ಟನ್‌ಗೆ 3,050 ರೂ. ದರ ನಿಗದಿ ಮಾಡಿರುವುದು ಅವೈಜ್ಞಾನಿಕ ಎಂದು ಕೇಂದ್ರದ ವಿರುದ್ಧ ಕಿಡಿಕಾರಿದರು. ಜಿಲ್ಲೆಯ ಬಣ್ಣಾರಿ ಸಕ್ಕರೆ ಕಾರ್ಖಾನೆಯು ರೈತರಿಗೆ ಪ್ರತಿಟನ್‌ಗೆ ಹಾಲಿ 2,500 ರೂ. ದರ ನೀಡುತ್ತಿದ್ದು, ಕಳೆದ ವರ್ಷಕ್ಕಿಂತ 450 ರೂ.ನಷ್ಟು ಕಡಿಮೆ ಪಾವತಿ ಮಾಡುತ್ತಿದ್ದಾರೆ. ತಕ್ಷಣ ರೈತರಿಗೆ 3,500 ರೂ. ಪ್ರತಿಟನ್‌ಗೆ ನಿಗದಿ ಮಾಡಿ, ಮುಂಗಡ ನೀಡಬೇಕು ಎಂದು ಆಗ್ರಹಿಸಿದರು.

ಬಣ್ಣಾರಿ ಸಕ್ಕರೆ ಕಾರ್ಖಾನೆಯು ಕಟಾವು ಸಾಗಣೆ, ಕೂಲಿಯನ್ನು ತನ್ನ ಮನಬಂದಂತೆ ನಿಗದಿ ಮಾಡಿ ಕಬ್ಬು ಖರೀದಿ ಮಂಡಳಿ ಆದೇಶವನ್ನು ಗಾಳಿಗೆ ತೂರಿದೆ. ಪ್ರತಿಟನ್‌ಗೆ 450 ಕೂವು ಕೂಲಿ ಇದ್ದರೂ ಅದನ್ನು ಕಾರ್ಖಾನೆ ಪಾವತಿ ಮಾಡಿ ಉಳಿದ ಹೆಚ್ಚುವರಿ ಹಣವನ್ನು ರೈತರಿಂದ ವಸೂಲಿ ಮಾಡುತ್ತಿದೆ. ಇದು ನಿಲ್ಲಬೇಕು. ದ್ವಿಪಕ್ಷೀಯ ಒಪ್ಪಂದ ಪತ್ರ ಜಾರಿ ಆಗಬೇಕು. ಕಳೆದ 3 ವರ್ಷದ ಲಾಭಾಂಶ ಹಂಚಿಕೆ ಆಗಬೇಕು. ಕಬ್ಬು ಬೆಳೆಯನ್ನು ವಿಮೆ ವ್ಯಾಪ್ತಿಗೆ ತರಬೇಕು. ಕೇಂದ್ರ ಸರ್ಕಾರ ಎಫ್‌ಆರ್‌ಪಿಯನ್ನು ಪುನರ್ ಪರಿಶೀಲಿಸಬೇಕು. ತಕ್ಷಣ ರಸಗೊಬ್ಬರ ಏರಿಕೆ ಇಳಿಸಬೇಕು ಎಂದು ಮನವಿ ಮಾಡಿದರು.

ಆನೆಮಡುವಿನ ಕೆರೆಗೆ ನೀರಿ ಹರಿಸಲು ಜಿಲ್ಲಾ ಉಸ್ತುವಾರಿ ಕಾಲಾಹರಣದ ಉತ್ತರ ನೀಡಿ ರೈತರ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ತಕ್ಷಣ ಉಡಿಗಾಲ ಗ್ರಾಮದ ಚಿಕ್ಕಮೋರಿಯ ಮುಖಾಂತರ ನೀರು ಹರಿಸಲು ಕ್ರಮ ಕೈಗೊಳ್ಳಬೇಕು. ಕೃಷಿ ಮತ್ತು ತೋಟಗಾರಿಕೆ ಇಲಾಖೆಯಲ್ಲಿ ರೈತರಿಗೆ ಸರಿಯಾದ ರೀತಿ ಕೆಲಸವಾಗದೇ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿ ತಡೆಯಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಸರ್ಕಾರಗಳ ಗಮನ ಸೆಳೆಯಲು ಆ.12 ರಂದು ಶುಕ್ರವಾರ ಬೆ11ರಿಂದ ಮಧ್ಯಾಹ್ನ 1 ಗಂಟೆವರೆಗೆ ಹೆದ್ದಾರಿ ಬಂದ್ ಚಳವಳಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಉಪಾಧ್ಯಕ್ಷ ಪಟೇಲ್, ಶಿವಮೂರ್ತಿ, ಮಿಲ್ಕ್ ನಾಗರಾಜ್, ಕುರುಬೂರು ಮಂಜು, ಹೆಗ್ಗೋಠಾರ ಶಿವಸ್ವಾಮಿ, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಉಪಾಧ್ಯಕ್ಷ ನರ್ಸರಿ ಗುರುಪ್ರಸಾದ್, ಮಹದೇವಸ್ವಾಮಿ, ರೇವಣ್ಣ, ರಘು, ಛೇರ್ಮನ್ ಗುರು ಭಾಗವಹಿಸಿದ್ದರು.

ನಾಳೆ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮ

ಚಾಮರಾಜನಗರ, ಆ.8–ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕದಿಂದ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದ ಉದ್ಘಾಟನೆಯನ್ನು ಆ. 10ರಂದು ಬೆಳಗ್ಗೆ 10.30 ಗಂಟೆಗೆ ನಗರದ ಬಿಇಓ ಕಚೇರಿ ಹಿಂಭಾಗವಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿ (ಪ್ರೌಢ ಶಾಲೆ ವಿಭಾಗ)ನಲ್ಲಿ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮದ ಅಂಗವಾಗಿ 1 ವರ್ಷದಿಂದ 19 ವರ್ಷದೊಳಗಿನ ಮಕ್ಕಳಿಗೆ ಜಂತುಹುಳು ನಿವಾರಣೆಗಾಗಿ ಆ.10ರಂದು ಆಲ್‌ಬೆಂಡಜೋಲ್ ಮಾತ್ರೆಗಳನ್ನು ಜಿಲ್ಲೆಯ ಎಲ್ಲಾ ಸರ್ಕಾರಿ, ಖಾಸಗಿ ಶಾಲೆಗಳು ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತದೆ ಎಂದು ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಅಂಕಪ್ಪ ತಿಳಿಸಿದ್ದಾರೆ.

ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬ, ಸಂಗಮ ಪ್ರತಿಷ್ಠಾನದ ರಜತೋತ್ಸವ

ವಿಶೇಷ ಅಂಚೆ ಲಕೋಟೆ ಬಿಡುಗಡೆ



ಗುಂಡ್ಲುಪೇಟೆಯಲ್ಲಿ ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬ, ಸಂಗಮ ಪ್ರತಿಷ್ಠಾನದ ರಜತೋತ್ಸವ, ಗೋಪಾಲಸ್ವಾಮಿ ದೇವಾಲಯದ ವಿಶೇಷ ಅಂಚೆ ಲಕೋಟೆಯನ್ನು ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಬಿಡುಗಡೆ ಮಾಡಿದರು.

ಗುಂಡ್ಲುಪೇಟೆ, ಆ.8–ಮಾಜಿ ಸಚಿವ ದಿವಂಗತ ಹೆಚ್.ಎಸ್. ಮಹದೇವಪ್ರಸಾದ್ ಹುಟ್ಟುಹಬ್ಬ ಅಂಗವಾಗಿ ಪಟ್ಟಣದ ಅಂಚೆ ಕಚೇರಿ ಆವರಣದಲ್ಲಿ ನಂಜನಗೂಡು ಅಂಚೆ ವಿಭಾಗ ಮತ್ತು ಸಂಗಮ ಪ್ರತಿಷ್ಠಾನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿವಂಗತ ಹೆಚ್.ಎಸ್.ಮಹದೇವಪ್ರಸಾದ್, ಸಂಗಮ ಪ್ರತಿಷ್ಠಾನ ಹಾಗೂ ಹಿಮವದ್ ಗೋಪಾಲ ಸ್ವಾಮಿಬೆಟ್ಟದ ದೇವಸ್ಥಾನದ ಚಿತ್ರದ ವಿಶೇಷ ಅಂಚೆ ಲಕೋಟೆಯನ್ನು ಮಾಜಿ ಸಚಿವೆ ಡಾ.ಗೀತಾಮಹದೇವ ಪ್ರಸಾದ್ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, ನನಗೆ 10 ವರ್ಷವಿದ್ದಾಗಲೇ ಅಂಚೆ ಸ್ಟ್ಯಾಂಪ್‌ಗಳ ಸಂಗ್ರಹದ ಹವ್ಯಾಸ ಬೆಳೆಯಿತು. ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯ ತನಕ 10 ಸಾವಿರದಷ್ಟು ಅಂಚೆ ಸ್ಟ್ಯಾಂಪ್‌ಗಳ ಸಂಗ್ರಹಿಸಿದ್ದೇನೆ. ಸಂಗೀತ, ನಾಟ್ಯ, ಕ್ರೀಡೆ ಒಳಗೊಂಡು ಎಲ್ಲಾ ರೀತಿಯ ಅಂಚೆ ಚೀಟಿಗಳಿದ್ದು, ಸದ್ಯದಲ್ಲೇ ಎಕ್ಸಿಬಿಷನ್ ಮಾಡುವ ಉದ್ದೇಶವಿದೆ ಎಂದು.

ಹೆಚ್.ಎಸ್.ಮಹದೇವಪ್ರಸಾದ್ ಬದುಕಿದ್ದರೆ ತಾಲೂಕು ನಿರೀಕ್ಷೆಗೂ ಮೀರಿ ಅಭಿವೃದ್ಧಿ ಆಗುತ್ತಿತ್ತು. 1997ರಲ್ಲಿ ಮಹದೇವಪ್ರಸಾದ್ ಸ್ಥಾಪಿಸಿದ ಸಂಗಮ ಪ್ರತಿಷ್ಠಾನ ಮೂಲಕ ನಮ್ಮ ಕುಟುಂಬ ಜನರ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಸಾಮೂಹಿಕ ವಿವಾಹ, ಮಕ್ಕಳ ವಿದ್ಯಾಭ್ಯಾಸ, ಕ್ರೀಡಾ ಸೇವೆ ಮಾಡುತ್ತಿದೆ ಎಂದರು.

ಸಂಗಮ ಪ್ರತಿಷ್ಠಾನದ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಹೆಚ್.ಎಂ.ಗಣೇಶಪ್ರಸಾದ್, ತಹಸೀಲ್ದಾರ್ ಸಿ.ಜೆ.ರವಿಶಂಕರ್, ನಂಜನಗೂಡು ಅಂಚೆ ವಿಭಾಗದ ಅಂಚೆ ಅಧೀಕ್ಷಕ ಹೆಚ್.ಸಿ.ಸದಾನಂದ ಮಾತನಾಡಿದರು. ಚಾಮುಲ್ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜುಂಡಪ್ರಸಾದ್, ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಮಹೇಶ್, ಪುರಸಭೆ ಮಾಜಿ ಅಧ್ಯಕ್ಷ ಎಲ್.ಸುರೇಶ್, ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಬಸವರಾಜು, ಗುಂಡ್ಲುಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಬಿ.ರಾಜಶೇಖರ್, ಎಪಿಎಂಸಿ ಸದಸ್ಯ ಮೊಳ್ಳಯ್ಯನಹುಂಡಿ ಬಸವರಾಜು, ನಂಜನಗೂಡು ಅಂಚೆ ವಿಭಾಗ ಸಹಾಯಕ ಅಂಚೆ ಅಧೀಕ್ಷಕ ರಾಜು ಕಾಳೇಶ್ವರ್, ಸಹಾಯಕ ಅಂಚೆ ಅಧೀಕ್ಷಕ ಗಾಯತ್ರಿ, ಅಂಚೆ ನಿರೀಕ್ಷಕ ಸತ್ಯಪ್ರಕಾಶ್, ಪೋಸ್ಟ್ ಮಾಸ್ಟರ್ ಪ್ರಕಾಶ್, ಡೆವಲಪ್‌ಮೆಂಟ್ ಆಫೀಸರ್ ಮಹದೇವಪ್ಪ ಹಾಗೂ ಶಾಂತೇಶ್, ಉಮೇಶ್, ಗಿರೀಶ್, ನಿರಂಜನ್, ರವಿ, ಕುಶಾಲ್, ನಾಗೇಂದ್ರ, ನಂಜುಂಡಸ್ವಾಮಿ ಇತರರು ಹಾಜರಿದ್ದರು.

ಹನೂರಿನಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ



ಹನೂರು, ಆ.8–ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ ಹಾಗೂ ಬಿಜೆಪಿ ಓಬಿಸಿ ಮೋರ್ಚಾ ಜಿಲ್ಲಾ ಸಂಯೋಜಕ ಮತ್ತು ಜನಾಶ್ರಯ ಟ್ರಸ್ಟ್‌ನ ಸಂಸ್ಥಾಪಕ ಬಿ.ವೆಂಕಟೇಶ್ ನೇತೃತ್ವದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ನಡೆಯಿತು.

ಈ ವೇಳೆ ಜನಾಶ್ರಯ ಟ್ರಸ್ಟ್‌ನ ಲೋಕೇಶ್ ಜತ್ತಿ ಮಾತನಾಡಿ, ಶಿಬಿರದಲ್ಲಿ 74 ಜನರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದು, ಅವರನ್ನು ಬೆಂಗಳೂರಿನ ಶಂಕರ ಕಣ್ಣಿನ ಆಸ್ಪತ್ರೆಗೆ ಕರೆದೊಯ್ಯಲಾಗುವುದು. ಹಾಗೇ ಹಿಂದಿನ ಶಿಬಿರದಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ 73 ಜನರಿಗೆ ಕನ್ನಡಕ ವಿತರಿಸಲಾಗಿದೆ ಎಂದು ತಿಳಿಸಿದರು.

ತಾಲೂಕಿನ ವಿವಿಧ ಗ್ರಾಮಗಳಿಂದ ಸಾರ್ವಜನಿಕರು ಆಗಮಿಸಿ ಶಿಬಿರದ ಸದುಪಯೋಗ ಪಡೆದುಕೊಂಡರು. ಈ ಸಂದರ್ಭದಲ್ಲಿ ಜನಾಶ್ರಯ ಟ್ರಸ್ಟ್‌ನ ಸಂಸ್ಥಾಪಕ ಬಿ.ವೆಂಕಟೇಶ್, ಪದಾಧಿಕಾರಿಗಳು ಹಾಗೂ ಆಸ್ಪತ್ರೆ ಸಿಬ್ಬಂದಿ ಹಾಜರಿದ್ದರು.

ಭಾರೀ ಜಲಸ್ಫೋಟದಿಂದ 2ನೇ ಮೊಣ್ಣಂಗೇರಿ

ಭೌಗೋಳಿಕ ಲಕ್ಷಣವೇ ಬದಲು





ಮಡಿಕೇರಿ, ಆ.8– ಅತಿಯಾದ ಮಳೆ ಸುರಿದು ಭಾರೀ ಜಲಸ್ಫೋಟದಿಂದ ಭೂ ಕುಸಿತವಾಗಿದ್ದ ಮದೆನಾಡು ವ್ಯಾಪ್ತಿಯ 2ನೇ ಮೊಣ್ಣಂಗೇರಿ ಗ್ರಾಮದ ಭೌಗೋಳಿಕ ಲಕ್ಷಣಗಳೇ ಬದಲಾಗಿ ಹೋಗಿದೆ. 2018ರ ಪ್ರಾಕೃತಿಕ ವಿಕೋಪಕ್ಕೂ ಮುನ್ನ ಮೊಣ್ಣಂಗೇರಿ ಗ್ರಾಮದ ರಾಮಕೊಲ್ಲಿ ಎಂಬ ಪುಟ್ಟ ಊರು ರಾಮರಾಜ್ಯದಂತಿತ್ತು. ವಿಕೋಪದ ಬಳಿಕ ಗ್ರಾಮದ ಭೌಗೋಳಿಕ ಚಿತ್ರಣವೇ ಮರೆಯಾಗಿದೆ ಎಂದು ಅಲ್ಲಿನ ಗ್ರಾಮಸ್ಥರು ನೋವು ತೋಡಿಕೊಂಡಿದ್ದಾರೆ.

ರೆಡ್‌ಕ್ರಾಸ್ ಆಶ್ರಯ: ಇದೀಗ 2ನೇ ಮೊಣ್ಣಂಗೇರಿ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಭಾರೀ ಮಳೆ ಸುರಿಯುತ್ತಿರುವ ಕಾರಣ ಗ್ರಾಮದಲ್ಲಿದ್ದ 25ಕ್ಕೂ ಹೆಚ್ಚು ಕುಟುಂಬಗಳು ಸುರಕ್ಷಿತ ಸ್ಥಳಗಳಿಗೆ ತೆರಳಿದ್ದು, ಗ್ರಾಮದಲ್ಲಿ ಗಾಢ ಮೌನ ಆವರಿಸಿದೆ. ಎಲ್ಲಾ ಕುಟುಂಬಸ್ಥರಿಗೆ ಮಡಿಕೇರಿ ರೆಡ್‌ಕ್ರಾಸ್ ಕಟ್ಟಡದಲ್ಲಿ ಮಾನವೀಯ ಆಶ್ರಯ ನೀಡಲಾಗಿದೆ. ಮಕ್ಕಳು, ಮಹಿಳೆಯರು, ಪುರುಷರ ಸಹಿತ ವಯೋ ವೃದ್ಧರೂ ಇಲ್ಲಿ ಆಶ್ರಯ ಪಡೆದಿದ್ದಾರೆ. ವೈದ್ಯರು, ಶುಶ್ರೂಷಕಿಯರು, ಪೊಲೀಸ್ ಸಿಬ್ಬಂದಿಗಳನ್ನು ಇಲ್ಲಿ ಕರ್ತವ್ಯಕ್ಕೆ ನೇಮಿಸಲಾಗಿದೆ. ಜಾನುವಾರುಗಳು, ಸಾಕು ಪ್ರಾಣಿಗಳು ಮಾತ್ರವೇ ಈ ಗ್ರಾಮದಲ್ಲಿ ಉಳಿದುಕೊಂಡಿವೆ. ಭಾರೀ ಪ್ರಮಾಣದಲ್ಲಿ ಕೃಷಿ ಫಸಲು ನಾಶವಾಗಿದ್ದು, ಭೂ ಕುಸಿತದಿಂದ ಅಡಿಕೆ, ಕಾಫಿ, ಭತ್ತದ ಗದ್ದೆಗಳು ಕೊಚ್ಚಿ ಹೋಗಿವೆ.

ಹೊಸ ಮನೆಗೆ ಹಾನಿ: 2ನೇ ಮೊಣ್ಣಂಗೇರಿ ಗ್ರಾಮ ನಿವಾಸಿ ಬಾಲಕೃಷ್ಣ ಎಂಬವರು ಹೊಸ ಮನೆ ಕಟ್ಟಿದ್ದು, ಕೆಲ ದಿನಗಳ ಹಿಂದಷ್ಟೇ ಗೃಹ ಪ್ರವೇಶ ಮಾಡಿದ್ದರು. ಈ ಹಿಂದೆ ಸಂಭವಿಸಿದ ಜಲಸ್ಫೋಟಕ್ಕೆ ಬಂಡೆಯೊಂದು ಉರುಳಿ ಬಿದ್ದು, ಮನೆಗೆ ಹಾನಿಯಾಗಿದೆ. ಶಬ್ದ ಕೇಳಿ ಬಂದ ತಕ್ಷಣವೇ ಮನೆಯಿಂದ ಹೊರಗೆ ಓಡಿ ಬಂದು ಮಾದಪ್ಪ ಎಂಬವರ ಮನೆಯಲ್ಲಿ ಆಶ್ರಯ ಪಡೆದಿದ್ದೆವು ಎಂದು ಬಾಲಕೃಷ್ಣ ಅವರು ನೋವು ತೋಡಿಕೊಂಡಿದ್ದಾರೆ.

2013ರ ಭೂ ಕುಸಿತ: 2ನೇ ಮೊಣ್ಣಂಗೇರಿ ಸರಕಾರಿ ಶಾಲೆಯ ಪಕ್ಕದಲ್ಲಿ 2013ರಲ್ಲಿ ಮೊದಲ ಬಿರುಕು ಕಾಣಿಸಿಕೊಂಡಿತ್ತು. ಆ ಸಾಲಿನ ಮಳೆಗಾಲದಲ್ಲಿ ಭೂಮಿ ಒಳಗಿನಿಂದ ನೀರು ಹರಿದು ಹೋಗುವ ಶಬ್ದ ಕೇಳಿ ಬಂದಿತ್ತು. ಸ್ಥಳ ಪರಿಶೀಲನೆಗೆ ಬಂದಿದ್ದ ವಿಜ್ಞಾನಿಗಳು ಇದು ಜಲ ಹರಿಯುವ ಶಬ್ದ, ಯಾವುದೇ ಆತಂಕ ಇಲ್ಲ ಎಂದಿದ್ದರು. ಆದರೆ 2018ರಲ್ಲಿ ಈ ಭಾಗದಲ್ಲಿ ಭಾರೀ ಭೂಕುಸಿದು ಅಪಾರ ಹಾನಿಯಾಗಿತ್ತು. ಇಂದಿಗೂ ಇದೇ ಪರಿಸ್ಥಿತಿ ಗ್ರಾಮದಲ್ಲಿದೆ ಎಂದು ಅಲ್ಲಿನ ನಿವಾಸಿ ಇಂದಿರಾ ವಿವರಿಸಿದರು. 3 ಎಕರೆ ಪ್ರದೇಶದಲ್ಲಿ ವರ್ಷದ ಊಟಕ್ಕಾಗಿ ಭತ್ತ, ವರಮಾನಕ್ಕಾಗಿ ಅಡಿಕೆ, ಕಾಫಿ ಬೆಳೆಯುತ್ತಿದ್ದೆವು. ಆದರೆ ದಿನ ಕಳೆದಂತೆ ಅಂತರ್ ಜಲದ ಮಟ್ಟವೂ ಕುಸಿತವಾಗಿ ಇದೀಗ ವಾರ್ಷಿಕ 1 ಭತ್ತ ಬೆಳೆ ಬೆಳೆಯುತ್ತಿದ್ದೇವೆ. ಅಡಿಕೆ, ಕಾಫಿ ಎಲ್ಲವೂ ನಾಶವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ. ಪ್ರತಿ ಮಳೆಗಾಲವೂ ಭಯದಲ್ಲೇ ಬದುಕುತ್ತೇವೆ. ಹಾಗೆಂದು ಬದುಕು ಕಟ್ಟಿಕೊಂಡ ಊರನ್ನು ಶಾಶ್ವತವಾಗಿ ತೊರೆಯಲು ಸಾಧ್ಯವೇ ಎಂದು ಪ್ರಶ್ನಿಸುವ ಇಂದಿರಾ, ಮಳೆ ಕಡಿಮೆಯಾದ ಬಳಿಕ ಮತ್ತೆ ಗ್ರಾಮಕ್ಕೆ ತೆರಳುತ್ತೇವೆ ಎಂದು ನಗು ಬೀರಿದರು.

ಅಂದು ಲಕ್ಷಾಧೀಶ್ವರರು–ಇಂದು ಕೂಲಿಕಾರರು: 2ನೇ ಮೊಣ್ಣಂಗೇರಿ ಗ್ರಾಮದಲ್ಲಿ ಬಹುತೇಕ ಕುಟುಂಬಗಳು ಅತೀ ಸಣ್ಣ ಹಿಡುವಳಿದಾರರಾಗಿ ಬದುಕು ಕಟ್ಟಿಕೊಂಡಿದ್ದರು. ಅಡಿಕೆ, ಕಾಫಿ, ಭತ್ತ ಬೆಳೆಗಳನ್ನು ಬೆಳೆಯುವ ಹಾಗೂ ಜೇನುಕೃಷಿಯಲ್ಲಿಯೇ ಕಾರ್ಮಿಕರಾಗಿ ದುಡಿಯುವ ಮೂಲಕ ಸ್ವಾವಲಂಬಿ ಜೀವನ ನಡೆಸುತ್ತಿದ್ದರು. ಕೃಷಿಯಲ್ಲಿಯೇ ಖುಷಿಯಾಗಿ ಬದುಕು ಕಟ್ಟಿಕೊಂಡ ಇಲ್ಲಿನ ಜನರ ಬದುಕನ್ನು 2018ರ ಪ್ರಾಕೃತಿಕ ವಿಕೋಪ ಸಂಪೂರ್ಣವಾಗಿ ಬದಲಾಯಿಸಿಬಿಟ್ಟಿದೆ. ವಾರ್ಷಿಕವಾಗಿ ಲಕ್ಷ ರೂಗಳ ಆದಾಯ ಪಡೆಯುತ್ತಿದ್ದವರು ಇದೀಗ ಜೀವನ ನಿರ್ವಹಣೆಗಾಗಿ ತೋಟಗಳಿಗೆ ಕೂಲಿ ಕೆಲಸಕ್ಕೆ ತೆರಳುವ ಸ್ಥಿತಿಗೆ ತಲುಪಿದ್ದಾರೆ.

ರಸ್ತೆಯೇ ಮಾಯ: ಕೆಲ ದಿನಗಳ ಹಿಂದೆ ಸಂಭವಿಸಿದ ಜಲಸ್ಫೋಟದಿಂದ ಈ ರಾಮಕೊಲ್ಲಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆ ಕೊಚ್ಚಿ ಹೋಗಿದ್ದು, ಗ್ರಾಮದ ಒಳಗಿನ ರಸ್ತೆಗಳೂ ಭಾರೀ ಹಾನಿಯಾಗಿದೆ. ಜೋಡುಪಾಲ, ಮದೆನಾಡು, ಚೇರಂಬಾಣೆ ಕಡೆಗಳಿಗೆ ಇಲ್ಲಿನ ಜನರು ತೋಟ ಕಾರ್ಮಿಕರಾಗಿ ದುಡಿಯಲು ತೆರಳುತ್ತಾರೆ. ಜೀಪಿನಲ್ಲಿ ಆ ಊರುಗಳಿಗೆ ತೆರಳಿ ಸಂಜೆ ಮರಳುತ್ತಾರೆ. ಆದರೆ ರಸ್ತೆ ಸಂಪರ್ಕ ಕಡಿತವಾಗಿರುವ ಕಾರಣ ಜನರು ಕೂಲಿ ಕೆಲಸಕ್ಕೂ ತೆರಳಲಾಗದ ಸ್ಥಿತಿಯಲ್ಲಿದ್ದಾರೆ ಎಂದು ಅಲ್ಲಿನ ನಿವಾಸಿಗಳಾದ ಈರಪ್ಪ ಗೌಡ, ಜಿ.ಜಿ.ಹೊನ್ನಪ್ಪ, ಕೆ.ಸಿ. ತಿಮ್ಮಪ್ಪ, ದಯಾನ ಅಮ್ಮಾಗು ಅಳಲು ತೋಡಿಕೊಂಡಿದ್ದಾರೆ.

ಆತಂಕದಲ್ಲಿ ಶಾಲೆ: 2ನೇ ಮೊಣ್ಣಂಗೇರಿ, ರಾಮಕೊಲ್ಲಿ ಸುತ್ತಮುತ್ತಲಿನ ಹತ್ತಾರು ಮಕ್ಕಳು ಜೋಡುಪಾಲ ಸರಕಾರಿ ಶಾಲೆಯಲ್ಲಿ ತಮ್ಮ ವಿದ್ಯಾಭ್ಯಾಸ ನಡೆಸುತ್ತಿದ್ದರು. ಈ ಶಾಲೆಯಲ್ಲಿದ್ದ ಒಟ್ಟು ಮಕ್ಕಳ ಸಂಖ್ಯೆ 31. ಪ್ರಾಕೃತಿಕ ವಿಕೋಪದ ಬಳಿಕ ಹಲವು ಕುಟುಂಬಗಳು ಗೋಳಿಕಟ್ಟೆ, ಸಂಪಾಜೆ, ಸುಳ್ಯ, ಮಂಗಳೂರು ಮತ್ತಿತರ ಕಡೆಗಳಿಗೆ ತೆರಳಿ ಆಶ್ರಯ ಪಡೆದಿದೆ. ಹೀಗಾಗಿ ಮಕ್ಕಳ ಸಂಖ್ಯೆಯೂ ಕ್ಷೀಣಿಸಿದೆ. ಮಾತ್ರವಲ್ಲದೇ ಜೋಡುಪಾಲ ಸರಕಾರಿ ಶಾಲೆಯ ಮೇಲೆ ಭೂ ಕುಸಿದು ಬೀಳುವ ಅಪಾಯದಿಂದಾಗಿ ಶಾಲೆ ಬಂದ್ ಆಗಿದೆ ಎಂದು ಅಲ್ಲಿನ ಶಿಕ್ಷಕಿಯರಾದ ದಮಯಂತಿ ಹಾಗೂ ಕವಿತಾ ಅವರು ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ದುಃಖದಿಂದಲೇ ಮಾಹಿತಿ ನೀಡಿದರು.

ಭಾಗಮಂಡಲ– ಕರಿಕೆ ರಸ್ತೆಯಲ್ಲಿ ಭಾರೀ ವಾಹನ ಸಂಚಾರ ನಿಷೇಧ

ಮಡಿಕೇರಿ, ಆ.8– ಸ್ಥಳೀಯರ, ವಾಹನ ಸವಾರರ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಮಡಿಕೇರಿ–ತಣ್ಣಿಮಾನಿ–ಭಾಗಮಂಡಲ–ಕರಿಕೆ ಸರಪಳಿ 55.80 ಕಿ.ಮೀ. ರಲ್ಲಿ (ಭಾಗಮಂಡಲ–ಕರಿಕೆ ರಸ್ತೆಯ ಮೇಲಡ್ಕ ಹತ್ತಿರ) ಭಾಗಶಃ ಕುಸಿತವಾಗಿರುವ ರಸ್ತೆಯಲ್ಲಿ ಪ್ರಯಾಣಿಕರ ಲಘು ವಾಹನಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲಾ ರೀತಿಯ ಭಾರೀ ವಾಹನಗಳ ಸಂಚಾರವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದ ವರೆಗೆ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಆದೇಶ ಹೊರಡಿಸಿದ್ದಾರೆ.

ಕುಶಾಲನಗರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ರೂ.5 ಕೋಟಿ ವೆಚ್ಚದಲ್ಲಿ ಪ್ರವಾಹ ತಗೋಡೆ, ಚರಂಡಿ ಉನ್ನತೀಕರಣಕ್ಕೆ ಯೋಜನೆ: ಸಚಿವ ನಾಗೇಶ್



ಕುಶಾಲನಗರ, ಆ.8– ಪಟ್ಟಣದ ಪ್ರವಾಹ ಪೀಡಿತ ಸಾಯಿ ಹಾಗೂ ಕುವೆಂಪು ಬಡಾವಣೆಗಳಿಗೆ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕ ಅಪ್ಪಚ್ಚುರಂಜನ್ ಹಾಗೂ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತ ನಾಡಿದ ಅವರು, ಕಾವೇರಿ ನೀರಾವರಿ ನಿಗಮದ ಮೂಲಕ ರೂ.5 ಕೋಟಿ ವೆಚ್ಚದಲ್ಲಿ ಪ್ರವಾಹ ತಡೆಗೋಡೆ ನಿರ್ಮಾಣ ಹಾಗೂ ಬಡಾವಣೆಗಳ ಚರಂಡಿ ಉನ್ನತೀಕರಣಕ್ಕೆ ಈಗಾಗಲೇ ಯೋಜನೆ ರೂಪಿಸಿದ್ದಾರೆ ಎಂದು ಹೇಳಿದರು. ಪ್ರವಾಹ ನಿಯಂತ್ರಣ ಸಂಬಂಧ ನಮ್ಮಲ್ಲಿರುವ ತಾಂತ್ರಿಕ ತಜ್ಞರನ್ನು ಒಮ್ಮೆ ಸ್ಥಳಕ್ಕೆ ಕರೆದುಕೊಂಡು ಬಂದು ಚರ್ಚಿಸಲಾಗುವುದು ಎಂದರು.

ಮರಳುಗಾರಿಕೆ ಸಂಬಂಧ ಪ್ರಶ್ನೆಗೆ ಉತ್ತರಿಸಿದ ಅವರು, ಈಗಾಗಲೇ ಮಲೆನಾಡು ಪ್ರದೇಶಗಳಲ್ಲಿ ಜಿಲ್ಲಾವಾರು ಸ್ಯಾಂಡ್ ಪಾಲಿಸಿ ರೂಪಿಸಲು ಮುಖ್ಯಮಂತ್ರಿಗಳ ನೇತೃತ್ವದ ಸಭೆಯಲ್ಲಿ ಚರ್ಚೆ ನಡೆದಿದೆ ಎಂದರು. ಕುಶಾಲನಗರದಲ್ಲಿ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಈಗಾಗಲೇ ಅಗತ್ಯ ಕ್ರಮಕ್ಕೆ ಮುಂದಾಗಲಾಗಿದೆ. ನದಿಯಲ್ಲಿ ಹೂಳು ತುಂಬಿದ ಕಾರಣ ನದಿ ವಿಸ್ತೀರ್ಣ ಕುಗ್ಗಿದೆ. ಹೂಳೆತ್ತುವ ಚಿಂತನೆ ನಡೆಸಿದ್ದು, ಮಳೆ ಆರಂಭವಾದ ಕಾರಣ ಕಾಮಗಾರಿ ಕೈಗೊಂಡಿಲ್ಲ ಎಂದರು. ಸರ್ಕಾರ ಕೊಡಗು ಜಿಲ್ಲೆಯನ್ನು ಯಾವತ್ತೂ ಕಡೆಗಣಿಸಿಲ್ಲ. ಪ್ರಕೃತಿ ವಿಕೋಪ ಪರಿಹಾರಕ್ಕೆ ಅನುದಾನ ಒದಗಿಸಿಲ್ಲ ಎಂಬ ಆರೋಪದಲ್ಲಿ ಹುರುಳಿಲ್ಲ. ಈಗಾಗಲೇ ಜಿಲ್ಲೆಯಲ್ಲಿ ರೂ. 35 ಕೋಟಿ ಅನುದಾನ ಲಭ್ಯವಿದೆ. ಹಾನಿಗೊಳಗಾದ ಸಂತ್ರಸ್ತರಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲಾಗುತ್ತಿದೆ. ಬೆಳೆಹಾನಿ ಸೇರಿದಂತೆ ಮಳೆಹಾನಿ ಪರಿಹಾರಕ್ಕೆ ಅಗತ್ಯವಿರುವ ಅನುದಾನ ತರುವಲ್ಲಿ ಜಿಲ್ಲೆಯ ಶಾಸಕದ್ವಯರು ಈಗಾಗಲೇ ಕ್ರಮಕೈಗೊಂಡಿದ್ದು, ಮುಖ್ಯಮಂತ್ರಿಗಳು ಕೂಡ ಬೇಡಿಕೆ ಈಡೇರಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಶಾಸಕ ಎಂ.ಪಿ.ಅಪ್ಪಚ್ಚುರಂಜನ್ ಮಾತನಾಡಿ, ಮುಂದಿನ ಬೇಸಿಗೆಯಲ್ಲಿ ಜಲಾಶಯದಲ್ಲಿ ಹೂಳೆತ್ತುವ ಕಾಮಗಾರಿ ಕೈಗೊಳ್ಳಲಾಗುವುದು. 8.5 ಟಿಎಂಸಿ ಆಳದ ಅಣೆಕಟ್ಟೆಯಲ್ಲಿ 1.5 ಟಿಎಂಸಿಯಷ್ಟು ಹೂಳು ತುಂಬಿದೆ. ಹೂಳೆತ್ತುವ ಯೋಜನೆಗೆ ಈಗಾಗಲೇ 130 ಕೋಟಿ ಅನುದಾನ ಲಭ್ಯವಿದ್ದು, ಬೇಸಿಗೆಯಲ್ಲಿ ಕಾಮಗಾರಿ ಕೈಗೊಳ್ಳುವುದಾಗಿ ತಿಳಿಸಿದರು.

ಶಾಶ್ವತ ಯೋಜನೆಗೆ ಆಗ್ರಹ: ಹಾರಂಗಿ ಜಲಾಶಯದಿಂದ ಪ್ರವಾಹ ಪರಿಸ್ಥಿತಿ ಎದುರಾಗುತ್ತಿದೆ ಎಂದು ಕುವೆಂಪು ಬಡಾವಣೆಯ ಪ್ರವಾಹ ಸಂತ್ರಸ್ಥರ ಆರೋಪಿಸಿದರು. ಪ್ರವಾಹ ತಡೆಗಟ್ಟಲು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಸಚಿವರನ್ನು ಆಗ್ರಹಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ಬಿ.ಸಿ.ಸತೀಶ್, ಎಸ್ಪಿ ಅಯ್ಯಪ್ಪ, ತಹಶೀಲ್ದಾರ್ ಟಿ.ಎಂ.ಪ್ರಕಾಶ್, ಕುಶಾಲನಗರ ಪ.ಪಂ ಅಧ್ಯಕ್ಷ ಜೈವರ್ಧನ್, ಕುಡಾ ಅಧ್ಯಕ್ಷ ಎಂ.ಎಂ. ಚರಣ್, ಮುಳ್ಳುಸೋಗೆ ಗ್ರಾಪಂ ಅಧ್ಯಕ್ಷ ಚೆಲುವರಾಜು, ಪ.ಪಂ ಮುಖ್ಯಾಧಿಕಾರಿ ಕೃಷ್ಣಪ್ರಸಾದ್, ಸದಸ್ಯರಾದ ಅಮೃತ್ ರಾಜ್, ತಿಮ್ಮಪ್ಪ, ಗ್ರಾಪಂ ಪಿಡಿಓ ಸುಮೇಶ್, ಕುಡಾ ಸದಸ್ಯರಾದ ವೈಶಾಖ್, ನೀರಾವರಿ ನಿಗಮದ ಎಇಇ ಪುಟ್ಟಸ್ವಾಮಿ, ಅಭಿಯಂತರರಾದ ಸಿದ್ದರಾಜು, ಕಿರಣ್, ಗ್ರಾಪಂ ಸದಸ್ಯರು, ಪ್ರವಾಹ ಸಂತ್ರಸ್ಥ ಸಮಿತಿ ಪ್ರಮುಖರು, ಬಡಾವಣೆ ನಿವಾಸಿಗಳು ಇದ್ದರು.

ಹಾರಂಗಿ ಕಿರುನಾಲೆಯ ಸ್ಲ್ಯಾಬ್ ಕುಸಿತ: ಸಂಚಾರ ಸ್ಥಗಿತ

ಕುಶಾಲನಗರ, ಆ.8– ಹಾರಂಗಿಯಿಂದ ಮೀನು ಸಾಕಾಣಿಕಾ ಕೇಂದ್ರದ ಮೂಲಕ ಯಡವನಾಡಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಮಧ್ಯೆ ಕಿರುನಾಲೆಗೆ ಅಳವಡಿಸಿದ್ದ



ಸಿಮೆಂಟ್ ಸ್ಲ್ಯಾಬ್ ಅತೀಯಾದ ಮಳೆಯಿಂದಾಗಿ ಕುಸಿದು ಬಿದ್ದ ಪರಿಣಾಮ ಸಂಚಾರಕ್ಕೆ ಅಡ್ಡಿ ಉಂಟಾಗಿದೆ.

ಮೀನು ಸಾಕಾಣಿಕೆ ಕೇಂದ್ರದ ಮೇಲ್ಭಾಗದಲ್ಲಿ ವಸತಿ ಗೃಹಗಳ ಪಕ್ಕದಲ್ಲಿ ಹಾದು ಹೋಗಿರುವ ಕಿರುನಾಲೆಗೆ ಸಿಮೆಂಟ್ ಸ್ಲ್ಯಾಬ್ ಅಳವಡಿಸಲಾಗಿತ್ತು. ಆದರೆ ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ಹಾಗೂ ಜಲಾಶಯದಿಂದ ಬಂದ ಹೆಚ್ಚುವರಿ ನೀರಿನಿಂದಾಗಿ ನಾಲೆಯ ಮಣ್ಣು ಹಾಗೂ ಸಿಮೆಂಟ್ ಸ್ಲ್ಯಾಬ್ ಕುಸಿತಗೊಂಡಿದೆ. ಇದರಿಂದ ಯಡವನಾಡು ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಸಂಪರ್ಕ ಕಡಿತಗೊಂಡಿದೆ. ಈ ಭಾಗದ ಜನರು ಈಗ ಹುದುಗೂರು ರಸ್ತೆ ಮೂಲಕ ಸೋಮೇಶ್ವರ ದೇವಸ್ಥಾನ ರಸ್ತೆಗಾಗಿ ತಮ್ಮ ಊರುಗಳಿಗೆ ತೆರಳಬೇಕಾದ ಪರಿಸ್ಥಿತಿ ಉಂಟಾಗಿದೆ. ಕೂಡಲೇ ಈ ನಾಲೆಗೆ ಗುಣಮಟ್ಟದ ಕಬ್ಬಿಣದ ಸಿಮೆಂಟ್ ಸ್ಲ್ಯಾಬ್ ಅಳವಡಿಸಿ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಗ್ರಾಮಸ್ಥರು ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ಯಂತ್ರ ನಿರ್ಮಿತ, ಖಾದಿಯೇತರ ಬಾವುಟಕ್ಕೂ ಅವಕಾಶದ ಹಿನ್ನೆಲೆ

ಧ್ವಜ ಸತ್ಯಾಗ್ರಹ ಸಮಿತಿಯಿಂದ ಪ್ರಧಾನಿಯವರಿಗೆ 10 ಪ್ರಶ್ನೆ

ಮೈಸೂರು,ಆ.8(ಪಿಎಂ)– ರಾಷ್ಟ್ರಧ್ವಜ ಸಂಹಿತೆಗೆ ತಿದ್ದುಪಡಿ ತರುವ ಮೂಲಕ ಯಂತ್ರ ನಿರ್ಮಿತ ಮತ್ತು ಖಾದಿಯೇತರ ಬಟ್ಟೆಯಲ್ಲಿ ತಯಾರಿಸಿದ ಬಾವುಟಕ್ಕೂ ಅವಕಾಶ ಕಲ್ಪಿಸಿರುವುದನ್ನು ವಿರೋಧಿಸಿ ನಡೆಸುತ್ತಿರುವ ಧ್ವಜ ಸತ್ಯಾಗ್ರಹದ ಮುಂದುವರೆದ ಭಾಗವಾಗಿ ಸೋಮವಾರ ಬಹಿರಂಗ ಪತ್ರದ ಮುಖೇನ 10 ಪ್ರಶ್ನೆಗಳನ್ನು ಪ್ರಧಾನಿಯವರ ಮುಂದಿಡಲಾಗಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಧ್ವಜ ಸತ್ಯಾಗ್ರಹ ಸಮಿತಿಯ ಮುಖಂಡರೂ ಆದ ಹಿರಿಯ ರಂಗಕರ್ಮಿ ಪ್ರಸನ್ನ ಪ್ರಶ್ನೆಗಳನ್ನು ಪ್ರಕಟಿಸಿದರು. ರಾಷ್ಟ್ರಧ್ವಜದಿಂದ ಖಾದಿಯನ್ನೇಕೆ ಕಿತ್ತು ಹಾಕಿದಿರಿ? ಸರ್ಕಾರಿ ಕಚೇರಿಗಳು, ಬ್ಯಾಂಕು, ಮುನಿಸಿಪಾಲಿಟಿ ಅಥವಾ ಇತರೆ ಸ್ವಾಯತ್ತ ಸಂಸ್ಥೆಗಳ ಮೂಲಕ ವಿದೇಶಿವಸ್ತ್ರ ಹಾಗೂ ಸಿಂಥೆಟಿಕ್ ವಸ್ತ್ರದಿಂದ ತಯಾರಾದ ಧ್ವಜಗಳನ್ನೇಕೆ ಬಲವಂತದಿಂದ ಮಾರಾಟ ಮಾಡಿಸುತ್ತಿದ್ದೀರಿ? ಅವು ಅಲ್ಲಲ್ಲಿ ಹರಿದಿದೆ, ಅಳತೆ ತಪ್ಪಿವೆ, ಅಶೋಕ ಚಕ್ರವು ಎತ್ತೆತ್ತಲೋ ಹೊರಳಿದೆ ಎಂಬ ಸಂಗತಿ ತಮ್ಮ ಗಮನಕ್ಕೆ ಬಂದಿಲ್ಲವೆ? ಇಂತಹ ಬಾವುಟಗಳ ಭ್ರಷ್ಟ ಉತ್ಪಾದಕರನ್ನು ಶಿಕ್ಷಿಸುವ ಬದಲು ದೋಷಪೂರಿತ ಬಾವುಟಗಳನ್ನೇ ಅಧಿಕೃತವಾಗಿ ಮಾರಾಟ ಮಾಡುವುದು ಭ್ರಷ್ಟಾಚಾರವಲ್ಲವೆ? ಎಂದು ಪ್ರಶ್ನಿಸಿದರು.

ನಮ್ಮ ಧ್ವಜ ಅಹಿಂಸೆಯ ದ್ಯೋತಕವಾದದ್ದು. ಶಾಂತಿಪ್ರಿಯ ಅಶೋಕನ ಲಾಂಛನ ಹಾಗೂ ಅಹಿಂಸಾತ್ಮಕ ಖಾದಿಬಟ್ಟೆ ಅದರಲ್ಲಿ ಅಂತರ್ಗತವಾಗಿವೆ. ಹೀಗಿರುವಾಗ, ಸ್ವಾತಂತ್ರ್ಯದ ಅಮೃತ ಮಹೋತ್ಸವದ ಬಾವುಟ ಕಾರ್ಯಕ್ರಮವನ್ನು ಯುದ್ಧ ಭೂಮಿಯೊಂದರಿಂದ ಉದ್ಘಾಟಿಸಿ, ಭಾರತವು ಹಿಂಸಾವಾದಿ ದೇಶವೆಂಬ ಸಂಕೇತವನ್ನೇಕೆ ಜಗತ್ತಿಗೆ ಸಾರುತ್ತಿದ್ದೀರಿ?

ಸಿಂಥೆಟಿಕ್ ಬಾವುಟಗಳ ಉದ್ಪಾದನೆ, ವಿತರಣೆಗೆಂದು ತಮ್ಮ ಸರ್ಕಾರವು ಎಷ್ಟು ಪ್ರಮಾಣದ ತೆರಿಗೆ ಹಣ ಖರ್ಚು ಮಾಡಿದೆ? ಇತ್ತ ಖಾದಿ ಹಾಗೂ ಗ್ರಾಮೋದ್ಯೋಗದ ಉತ್ಪಾದನೆ, ವಿತರಣೆಯನ್ನೇ ಹೆಚ್ಚು–ಕಡಿಮೆ ಸ್ಥಗಿತಗೊಳಿಸಿರುವ ತಮ್ಮ ಸರ್ಕಾರವು ಇದೇ ಹಣವನ್ನು ಗ್ರಾಮೋದ್ಯೋಗದ ಪುನಶ್ಚೇತನಕ್ಕಾಗಿ ಖರ್ಚು ಮಾಡಬಹುದಿತ್ತಲ್ಲವೇ? ಬಡವರ ಪರವಾದ ಕಾರ್ಯಕ್ರಮವಲ್ಲವೇ?

ಭಾರತದ ರಾಷ್ಟ್ರಧ್ವಜವು ಚೀನಾದಿಂದ ತಯಾರಾಗಿ ಅಧಿಕೃತವಾಗಿ ಮಾರಾಟಗೊಳ್ಳುತ್ತಿದೆ ಎಂಬ ಸುದ್ದಿ ನಿಜವೇ? ರಾಷ್ಟ್ರಧ್ವಜವನ್ನು ಕೆಳಗಿಳಿಸುವ ಅಗತ್ಯವಿಲ್ಲ. ಮಳೆಯಿರಲಿ, ಬಿಸಿಲಿರಲಿ, ಹಗಲಿರಲಿ, ರಾತ್ರಿಯಿರಲಿ, ಧ್ವಜವು ಹರಿದಿರಲಿ, ಮಲೀನವಾಗಿರಲಿ, ಕಂಬಕ್ಕೆ ಜೋತು ಬಿದ್ದಿರಬೇಕು ಎಂದು ಧ್ವಜ ನಿಯಮವನ್ನು ತಾವು ತಿದ್ದಿರುವುದು ಸರಿಯೇ?

'ಹರ್ ಘರ್ ತಿರಂಗ್' ಎಂಬುದು ವಿದೇಶಿಯರೇ ದೇಶಬಿಟ್ಟು ತೊಲಗಿ ಎಂಬ ಸ್ವದೇಶಿ ಚಳವಳಿಯ ಕೂಗಾಗಿತ್ತು ಪವಿತ್ರ ಆರ್ಥಿಕತೆ ಹಾಗೂ ಸ್ವದೇಶಿ ಉತ್ಪಾದನೆಗಳನ್ನು ಕಡೆಗಣಿಸಿರುವ ತಮ್ಮ ಸರ್ಕಾರವು 'ಹರ್ ಘರ್ ತಿರಂಗ್' ಎಂದು ಕೂಗುವುದು ವಿಪರ್ಯಾಸವಲ್ಲವೆ?

ಸರ್ಕಾರದ ಅಧೀನದಲ್ಲಿರುವ ಖಾದಿ ಸಂಸ್ಥೆಯು ಶುದ್ಧ ಖಾದಿ ಬಾವುಟವನ್ನು ಸಾಮಾನ್ಯರ ಕೈಗೆಟಕದಂತೆ ಅತಿ ದುಬಾರಿ ಬೆಲೆಗೆ ಮಾರುತ್ತಿರುವುದು ಸರಿಯೆ? ಸರ್ಕಾರದ ಕಾರ್ಯಕ್ರಮವನ್ನು ಬೆಂಬಲಿಸುವಂತೆ ಕಲೆ ಹಾಗೂ ಸಾಹಿತ್ಯಗಳಿಗೆ ಸಂಬಂಧಿಸಿದ ಅಕಾಡೆಮಿಗಳು ಸಾಹಿತಿಗಳು, ಕಲಾವಿದರ ಮೇಲೆ ಬಲವಂತ ಹೇರುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ? ಎಂದು ಪ್ರಶ್ನಿಸಿದರು.

ಈ 10 ಪ್ರಶ್ನೆಗಳನ್ನು ಸಾಧ್ಯವಿರುವ ನಗರ, ರಾಜ್ಯಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಬಹಿರಂಗವಾಗಿ ಸರ್ಕಾರದ ಮುಂದಿಡುತ್ತೇವೆ. ಸರ್ಕಾರದಿಂದ ಸೂಕ್ತ ಉತ್ತರ ಬರುವವರೆಗೂ ಇದು ಮುಂದುವರೆಯುತ್ತದೆ ಎಂದು ಪ್ರಸನ್ನ ತಿಳಿಸಿದರು. ಏಕತಾ ಪರಿಷತ್ತಿನ ಅಖಿಲ ಭಾರತ ಅಧ್ಯಕ್ಷ ಪಿ.ಪಿ.ರಾಜಗೋಪಾಲ್ ಹಾಗೂ ಅವರ ಪತ್ನಿ ಜಿಲ್ ಕೆ.ಹ್ಯಾರಿಸ್, ಸ್ವಾತಂತ್ರ್ಯ ಹೋರಾಟಗಾರ ಸಂಗಪ್ಪ ಮಂಟೆ, ಸಮಿತಿ ಸಂಚಾಲಕ ಪ್ರೊ.ಕಾಳ ಚನ್ನೆಗೌಡ ಮತ್ತಿತರರು ಗೋಷ್ಠಿಯಲ್ಲಿದ್ದರು.

ಆ.12ರಂದು 'ಡಿಪ್ಲೋಮ್ಯಾಟ್' ಮ್ಯಾನೇಜ್‌ಮೆಂಟ್–ಐಟಿ ಉತ್ಸವ

ಮೈಸೂರು,ಆ.8(ಪಿಎಂ)– ವಿದ್ಯಾರ್ಥಿಗಳಲ್ಲಿ ನಿರ್ವಹಣಾ ಕೌಶಲ್ಯ ವೃದ್ಧಿಸುವ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಬಳಿಯ ಅಷ್ಟೇರಹಳ್ಳಿಯ ಡಿ.ಪಾಲ್ ಪ್ರಥಮ ದರ್ಜೆ ಕಾಲೇಜು ವತಿಯಿಂದ




ಆ.12ರಂದು 'ಡಿಪ್ಲೋಮ್ಯಾಟ್–2022' ಶೀರ್ಷಿಕೆಯಡಿ ರಾಷ್ಟ್ರ ಮಟ್ಟದ ಮ್ಯಾನೇಜ್‌ಮೆಂಟ್ ಮತ್ತು ಐಟಿ ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಸಹಾಯಕ ಪ್ರಾಧ್ಯಾಪಕ ರಘುರಾಮ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಕಾಲೇಜಿನ ಆವರಣದಲ್ಲಿ ನಡೆಯುವ ಉತ್ಸವದಲ್ಲಿ ಮಾರ್ಕೆಟಿಂಗ್, ಕೋಡಿಂಗ್, ಫೈನಾನ್ಸ್, ಫೋಟೋಗ್ರಫಿ ಸೇರಿದಂತೆ 8 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಪದವಿ ಕಾಲೇಜಿನ ವಿದ್ಯಾರ್ಥಿಗಳು ಸ್ಪರ್ಧೆಗಳಲ್ಲಿ ಭಾಗವಹಿಸಬಹುದು. ಸ್ಪರ್ಧೆಗಳಿಗೆ ನಿಗದಿತ ಶುಲ್ಕದೊಂದಿಗೆ ನೋಂದಣಿ ಮಾಡಿಕೊಳ್ಳಬೇಕಿದ್ದು, ವಿಜೇತರಿಗೆ ನಗದು ಬಹುಮಾನ ನೀಡಲಾಗುವುದು ಎಂದರು.

ಜಯರಾಮರಾಜೇಂದ್ರ ಇಂಜಿನಿಯರ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ.ಸಿ.ಎನ್.ರವಿಕುಮಾರ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ನೋಂದಣಿ ಸೇರಿದಂತೆ ಹೆಚ್ಚಿನ ವಿವರಗಳಿಗೆ ಮೊ.ಸಂ. 78290–16535 ಹಾಗೂ 63633–51089 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ.ಸಾದಿಯಾ ತಬಾಸುಮ್, ಲಂಕೇಶ್ ದೇವನ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಕಾಮನ್‌ವೆಲ್ತ್-2022 ಕ್ರೀಡಾಕೂಟಕ್ಕೆ ವೈಭವದ ತೆರೆ

22 ಚಿನ್ನ ಸೇರಿ ಭಾರತಕ್ಕೆ 61 ಪದಕ

ಕೊನೆಯ ದಿನ ಪಿವಿ ಸಿಂಧು ಚಿನ್ನದ ಬೇಟೆ ಪದಕ ಪಟ್ಟಿಯಲ್ಲಿ ಭಾರತ 4ನೇ ಸ್ಥಾನಕ್ಕೆ ಬಡ್ತಿ



ಬರ್ಮಿಂಗ್‌ಹ್ಯಾಮ್, ಆ.8– ಇಲ್ಲಿನ ಅಲೆಗ್ಸಾಂಡರ್ ಕ್ರೀಡಾಂಗಣದಲ್ಲಿ ಕಳೆದ 11 ದಿನಗಳಿಂದ ನಡೆಯುತ್ತಿದ್ದ 22ನೇ ಆವೃತ್ತಿಯ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಸೋಮವಾರ ವರ್ಣರಂಜಿತ ತೆರೆಬಿದ್ದಿದೆ. ಕೊನೆಯ ದಿನ ಭಾರತ ವಿವಿಧ ವಿಭಾಗಗಳಲ್ಲಿ ಒಟ್ಟು 6 ಪದಕಗಳನ್ನು ಗೆಲ್ಲುವ ಮೂಲಕ 22 ಚಿನ್ನ, 16 ಬೆಳ್ಳಿ, 23 ಕಂಚಿನ ಪದಕ ಸೇರಿದಂತೆ 61 ಪದಕಗಳನ್ನು ತನ್ನದಾಗಿಸಿಕೊಂಡು ಪದಕ ಪಟ್ಟಿಯಲ್ಲಿ 4ನೇ ಸ್ಥಾನಕ್ಕೆ ಬಡ್ತಿ ಪಡೆದಿದೆ.

ಸಿಂಧು ಚಿನ್ನದ ಬೇಟೆ: ಕೊನೆಯ ದಿನ ಬ್ಯಾಡ್ಮಿಂಟನ್ ಸಿಂಗಲ್ಸ್‌ನಲ್ಲಿ ಪಿವಿ ಸಿಂಧು ಕೆನಡಾದ ಎದುರಾಳಿಯ ವಿರುದ್ಧ ಗೆಲುವು ಸಾಧಿಸುವ ಮೂಲಕ ಚಿನ್ನದ ಪದಕ ಗೆದ್ದಿದ್ದಾರೆ. ಬ್ಯಾಡ್ಮಿಂಟನ್‌ನ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಲಕ್ಷ್ಯಸೇನ್ ಹಾಗೂ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್–ಚಿರಾಗ್ ಜೋಡಿ ಚಿನ್ನದ ಪದಕ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಉಳಿದಂತೆ ಆಸ್ಟ್ರೇಲಿಯಾದ ವಿರುದ್ಧ ನಡೆದ ಹಾಕಿ ಪುರುಷರ ವಿಭಾಗದ ಫೈನಲ್‌ನಲ್ಲಿ ಸೋಲು ಕಂಡ ಭಾರತ ಬೆಳ್ಳಿ ಪದಕಕ್ಕೆ ತೃಪ್ತಿ ಪಟ್ಟಿಕೊಂಡಿತು. ಟೇಬಲ್ ಟೆನಿಸ್‌ನ ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಜ್ಞಾನಶೇಖರನ್ ಸತ್ಯನ್‌ಗೆ ಕಂಚಿನ ಪದಕ ಬಂದಿದೆ.

ಒಟ್ಟಾರೇ ಭಾರತ ಪುರುಷರ ವಿಭಾಗದಲ್ಲಿ 13 ಚಿನ್ನ, 9 ಬೆಳ್ಳಿ, 13 ಕಂಚು ಸೇರಿ 35 ಪದಕಗಳನ್ನು ಗೆದ್ದರೆ, ಮಹಿಳಾ ವಿಭಾಗದಲ್ಲಿ 8 ಚಿನ್ನ, 6 ಬೆಳ್ಳಿ, 9 ಕಂಚು ಸೇರಿ 23 ಪದಕ ಹಾಗೂ ಜೋಡಿ ವಿಭಾಗದಲ್ಲಿ ತಲಾ ಒಂದೊಂದು ಚಿನ್ನ, ಬೆಳ್ಳಿ ಹಾಗೂ ಕಂಚಿನೊಂದಿಗೆ 3 ಪದಕಗಳನ್ನು ಗೆದ್ದಿದ್ದಾರೆ.

ಕ್ರೀಡಾಕೂಟದಲ್ಲಿ ಆಸ್ಟ್ರೇಲಿಯಾ ಒಟ್ಟು 178 ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಆತಿಥೇಯ ಇಂಗ್ಲೆಂಡ್ 176, ಕೆನಡಾ 92 ಪದಕಗಳೊಂದಿಗೆ ಎರಡು ಹಾಗೂ



ಲಕ್ಷ್ಯಸೇನ್

ಮೂರನೇ ಸ್ಥಾನದಲ್ಲಿದೆ. ಭಾರತ 61 ಪದಕಗಳನ್ನು ಗೆಲ್ಲುವ ಮೂಲಕ 4ನೇ ಸ್ಥಾನದಲ್ಲಿದೆ. ಉಳಿದಂತೆ ನ್ಯೂಜಿಲ್ಯಾಂಡ್ 49, ಸ್ಕಾಟಲ್ಯಾಂಡ್ 51, ನೈಜೀರಿಯಾ 35, ವೇಲ್ಸ್ 28, ದಕ್ಷಿಣ ಆಫ್ರಿಕಾ 27, ಮಲೇಷ್ಯಾ 23 ಪದಕಗಳನ್ನು ಗೆದ್ದು ಟಾಪ್ 10ರೊಳಗಿನ ಸ್ಥಾನದಲ್ಲಿದೆ.

ಜರೀನ್, ಶರತ್ ಕಮಲ್‌ಗೆ ಧ್ವಜ ಗೌರವ: ಕ್ರೀಡಾಕೂಟ ಸಮಾರೋಪ ಸಮಾರಂಭದಲ್ಲಿ ಪಥ ಸಂಚಲನದಲ್ಲಿ ವಿಶ್ವ ಚಾಂಪಿಯನ್ ಹಾಗೂ ವನಿತೆಯರ ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ಗೆದ್ದ ನಿಖತ್ ಜರೀನ್ ಹಾಗೂ ಟೇಬಲ್ ಟೆನಿಸ್ ತಂಡದ ನಾಯಕ ಅಜಂತಾ ಶರತ್ ಕಮಲ್ ಭಾರತದ ತ್ರಿವರ್ಣ ಧ್ವಜ ಹಿಡಿದು ಗೌರವ ಪಡೆದರು.



ಸಾತ್ವಿಕ್–ಚಿರಾಗ್

ಕ್ರಿಕೆಟರ್ ರಾಜೇಶ್ವರಿ ಗಾಯಕ್ವಾಡ್‌ಗೆ 15 ಲಕ್ಷ ಬಹುಮಾನ



ಬೆಂಗಳೂರು: ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಮಹಿಳೆಯರ ಕ್ರಿಕೆಟ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದ ಭಾರತ ತಂಡವನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ.ನಾರಾಯಣಗೌಡ ಸೋಮವಾರ ಅಭಿನಂದಿಸಿದ್ದಾರೆ.

ಮಹಿಳಾ ಟೀಂ ಇಂಡಿಯಾವನ್ನು ಪ್ರತಿನಿಧಿಸಿದ್ದ ಕರ್ನಾಟಕದ ರಾಜೇಶ್ವರಿ ಗಾಯಕ್ವಾಡ್ ಅವರಿಗೆ ರಾಜ್ಯ ಸರ್ಕಾರದಿಂದ 15 ಲಕ್ಷ ನಗದು ಬಹುಮಾನ ನೀಡುವುದಾಗಿ ಸಚಿವ ಡಾ.ನಾರಾಯಣಗೌಡ ಘೋಷಿಸಿದ್ದಾರೆ.

ಸಿದ್ದರಾಮಯ್ಯ ಮತ್ತೆ ಸಿಎಂ ಆಗಬೇಕು

ಬಿಜೆಪಿ ಎಂಎಲ್‌ಸಿ ಹೆಚ್.ವಿಶ್ವನಾಥ್ ಪುತ್ರ ಪೂರ್ವಜ್ ಆಶಯ!



ಮೈಸೂರು, ಆ.8–ವಿಪಕ್ಷ ನಾಯಕ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿಯಾಗಬೇಕೆಂದು ಬಿಜೆಪಿ ನಾಯಕರೂ ಆದ ವಿಧಾನಪರಿಷತ್ ಸದಸ್ಯ ಎ.ಹೆಚ್. ವಿಶ್ವನಾಥ್ ಪುತ್ರ ಪೂರ್ವಜ್ ವಿಶ್ವನಾಥ್ ಹೇಳಿದ್ದಾರೆ.

ನಂಜನಗೂಡು ತಾಲೂಕು ತಗಡೂರು ಗ್ರಾಮದಲ್ಲಿ ಕಾಂಗ್ರೆಸ್ ವತಿಯಿಂದ ನಡೆದ ಸ್ವಾತಂತ್ರ್ಯ ಅಮೃತ ಮಹೋತ್ಸವ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ನನ್ನ ತಂದೆಯ ಪಕ್ಷ. ಆದರೆ ಕಾಂಗ್ರೆಸ್ ನನ್ನ ಪಕ್ಷ. ನಾನು ಕಾಂಗ್ರೆಸ್‌ನಲ್ಲೇ ಇದ್ದೇನೆ. ನಾನು ಯಾವತ್ತೂ ಬಿಜೆಪಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ. ತಂದೆಯ ಚುನಾವಣೆ ವೇಳೆ 2 ಬಾರಿ ಪ್ರಚಾರಕ್ಕೆ ಹೋಗಿದ್ದೆ ಅಷ್ಟೇ ಎಂದರು.

ಸಿದ್ದರಾಮಯ್ಯನವರು ಮತ್ತೆ ಮುಖ್ಯಮಂತ್ರಿಯಾಗುವ ಎಲ್ಲಾ ವಾತಾವರಣವೂ ಇದೆ. ಅವರು ಮುಖ್ಯಮಂತ್ರಿಯಾಗಲು ನಾನೂ ಶ್ರಮಿಸುತ್ತೇನೆ ಎಂದರು. ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯನವರ 75ನೇ ಹುಟ್ಟುಹಬ್ಬ ಕಾರ್ಯಕ್ರಮಕ್ಕೂ ಕೂಡ ತಾವು ಹೋಗಿದ್ದಾಗಿ ತಿಳಿಸಿದ ಅವರು, ಸಿದ್ದರಾಮಯ್ಯನವರಿಗೆ ಕರೆ ಮಾಡಿದ ನಂತರವೇ ತಾನು ಕಾರ್ಯಕ್ರಮಕ್ಕೆ ಬಂದಿದ್ದಾಗಿ ಹೇಳಿದರು.

ದಾವಣಗೆರೆ ಕಾರ್ಯಕ್ರಮಕ್ಕೆ ತೆರಳುವ ಮುನ್ನ ತಂದೆಯವರನ್ನು ಕೇಳಿದ್ದೆ, ಅವರು ನಿನ್ನಿಷ್ಟ ಹೋಗುವುದಿದ್ದರೆ ಹೋಗು ಎಂದು ಹೇಳಿದ್ದರು. ರಾಜಕಾರಣದಲ್ಲಿ ನನಗೆ ತಂದೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. ಹೀಗಾಗಿ ನಾನು ಕಾಂಗ್ರೆಸ್ ಪಕ್ಷದಲ್ಲೇ ಮುಂದುವರೆದು ಕೈ ಬಲಪಡಿಸಲು ದುಡಿಯುತ್ತೇನೆ ಎಂದು ಹೇಳಿದರು.

ಕಾಂಗ್ರೆಸ್‌ನ ಹಿರಿಯ ಮುಖಂಡರಾಗಿದ್ದ ಎ.ಹೆಚ್. ವಿಶ್ವನಾಥ್ ಅವರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿ ಹುಣಸೂರಿನಲ್ಲಿ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾಗಿದ್ದರು. ಆಪರೇಷನ್ ಕಮಲ ವೇಳೆ ಬಿಜೆಪಿ ಸೇರ್ಪಡೆಯಾಗಿ ಹುಣಸೂರಿನಲ್ಲಿ ಪರಾಭವಗೊಂಡ ನಂತರ ವಿಧಾನಪರಿಷತ್ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಅದೇ ವೇಳೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಅವರ ಪುತ್ರ ಅಮಿತ್ ದೇವರಹಟ್ಟಿ ತಂದೆಯನ್ನು ಹಿಂಬಾಲಿಸದೆ ಕಾಂಗ್ರೆಸ್‌ನಲ್ಲೇ ಉಳಿದಿದ್ದಾರೆ. ಇದೀಗ ಮತ್ತೋರ್ವ ಪುತ್ರ ಪೂರ್ವಜ್ ಕೂಡ ಕಾಂಗ್ರೆಸ್‌ನಲ್ಲೇ ಮುಂದುವರೆಯುವುದಾಗಿ ತಿಳಿಸಿದ್ದಾರೆ.

ಯೂತ್ ಜೋಡ್, ಬೂತ್ ಜೋಡೋ

ಮೈಸೂರು, ಆ.8(ಎಸ್‌ಪಿಎನ್)–ಮೈಸೂರು ವಿಧಾನಸಭಾ ಕೃಷ್ಣರಾಜ ಕ್ಷೇತ್ರದ ದೇವರಾಜ ಅರಸು ಬ್ಲಾಕ್ ಮತ್ತು ಕೃಷ್ಣರಾಜ ಬ್ಲಾಕ್ ವತಿಯಿಂದ ರಾಷ್ಟ್ರೀಯ ಯುವ ಕಾಂಗ್ರೆಸ್ 'ಯೂತ್ ಜೋಡ್– ಬೂತ್ ಜೋಡೋ' ಕಾರ್ಯಕ್ರಮಕ್ಕೆ ಕಾಂಗ್ರೆಸ್ ಮುಖಂಡ ಎನ್ ಎಂ.ನವೀನ್ ಕುಮಾರ್ ಚಾಮುಂಡಿಪುರಂ ಖಾಸಗಿ ಹೋಟೆಲ್‌ನಲ್ಲಿ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು ದೇಶದ ಯುವಕರು ಕಾಂಗ್ರೆಸ್ ಪಕ್ಷವನ್ನು ಸದೃಢಗೊಳಿಸಲು ಬೂತ್ ಮಟ್ಟದಲ್ಲಿ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮನವಿ ಮಾಡಿದರು.

ಒಂದನೇ ಪುಟದಿಂದ

ವಿಘ್ನೇಶ್ವರನಿಗೆ ವಿಘ್ನ ನಿವಾರಣೆ!

ಸಂಘಟನೆಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಗಣೇಶೋತ್ಸವಕ್ಕೆ ಇದ್ದ ನಿರ್ಬಂಧವನ್ನು ಪೂರ್ಣವಾಗಿ ಸಡಿಲಿಕೆ ಮಾಡಲಾಗಿದೆ ಎನ್ನಲಾಗಿದೆ.

ಕರ್ನಾಟಕ ಸೇರಿದಂತೆ ಹತ್ತು ರಾಜ್ಯಗಳಲ್ಲಿ ಕೋವಿಡ್–19 ಪ್ರಮಾಣ ಹೆಚ್ಚಳವಾಗಿದೆ. ಅದರಲ್ಲೂ ರಾಷ್ಟ್ರದ ಸರಾಸರಿ ಯಲ್ಲಿ ಕರ್ನಾಟಕದ್ದೇ ಶೇಕಡ 10 ರಷ್ಟು ಪಾಲು, ಈ ಬಗ್ಗೆ ಎಚ್ಚರ ವಹಿಸುವಂತೆ ಕೇಂದ್ರ ಆರೋಗ್ಯ ಇಲಾಖೆ ರಾಜ್ಯಕ್ಕೆ ಎಚ್ಚರಿಕೆ ನೀಡಿದ್ದರೂ, ಇದನ್ನು ಗಣನೆಗೆ ತೆಗೆದುಕೊಳ್ಳದೆ, ಸಾರ್ವಜನಿಕ ಸಮಾರಂಭಗಳಿಗಿದ್ದ ನಿರ್ಬಂಧವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ಖಚಿತಪಡಿಸಿದ ಕಂದಾಯ ಸಚಿವ ಆರ್.ಶೋಕ್ ತಾವು ಮುಖ್ಯ ಮಂತ್ರಿಯವರನ್ನು ಇಂದು ದೂರವಾಣಿ ಮೂಲಕ ಸಂಪರ್ಕಿಸಿ, ಗಣೇಶೋತ್ಸವ ಆಚರಣೆಗೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಿದ ಸಂದರ್ಭದಲ್ಲಿ ಎಲ್ಲ ನಿರ್ಬಂಧಗಳನ್ನು ರದ್ದುಗೊಳಿಸುವಂತೆ ಆದೇಶಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು. ಸ್ಥಳೀಯ ಸಂಸ್ಥೆಗಳು ಇದುವರೆಗೂ ಯಾವುದೇ ತೀರ್ಮಾನ ಕೈಗೊಂಡಿದ್ದರೂ, ಸರ್ಕಾರದ ತೀರ್ಮಾನದ ನಂತರ ಗಲ್ಲಿ ಗಲ್ಲಿಗಳಲ್ಲಿ ಗಣೇಶೋತ್ಸವ ಆಚರಿಸಲು ಅನುಮತಿ ನೀಡಬಹುದಾಗಿದೆ ಎಂದರು.

ರಿಯಲ್ ಎಸ್ಟೇಟ್ ಏಜೆಂಟ್ ಹತ್ಯೆ

ಮನೆಯವರಿಗೆ ವಿಷಯ ತಿಳಿಸಿದೆ. ಅಷ್ಟರಲ್ಲಿ ಆ ವ್ಯಕ್ತಿ ಓಡಿಹೋಗಿದ್ದ ಎಂದು ಸಂಪತ್ ಕುಮಾರ್ ಪುತ್ರ ಹೇಳಿಕೆ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ನೆರೆ ಮನೆಯವರು '112' ಸಹಾಯವಾಣಿಗೆ ಕರೆ ಮಾಡಿ ವಿಷಯ ತಿಳಿಸಿದ ತಕ್ಷಣ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಮನೆಯೊಳಗೆ ಯಾರೂ ತೆರಳದಂತೆ ಬಂದೋಬಸ್ತ್ ಮಾಡಿದರು. ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿಗಳಾದ ಪ್ರದೀಪ್ ಗುಂಟಿ ಹಾಗೂ ಗೀತಾ ಪ್ರಸನ್ನ, ನರಸಿಂಹರಾಜ ವಿಭಾಗದ ಎಸಿಪಿ ಶಿವಶಂಕರ್, ವಿವಿ ಪುರಂ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ವೆಂಕಟೇಶ್, ಮೇಟಗಳ್ಳಿ ಠಾಣೆ ಇನ್‌ಸ್ಪೆಕ್ಟರ್ ಹರೀಶ್ ಬಾಬು, ವಿಜಯನಗರ ಠಾಣೆಯ ರವಿಶಂಕರ್, ಮಂಡಿ ಠಾಣೆಯ ರಘು ಸೇರಿದಂತೆ ನರಸಿಂಹರಾಜ ವಿಭಾಗದ ಎಲ್ಲಾ ಠಾಣೆಗಳ ಇನ್‌ಸ್ಪೆಕ್ಟರ್‌ಗಳು, ಸಬ್‌ಇನ್‌ಸ್ಪೆಕ್ಟರ್‌ಗಳು, ಸಿಸಿಬಿ ಪೊಲೀಸರು, ಶ್ವಾನದಳ, ಬೆರಳಚ್ಚು ತಜ್ಞರು ಪರಿಶೀಲನೆ ನಡೆಸಿದರು. ಮನೆಯ ಹಾಲ್‌ನಲ್ಲೇ ಹತ್ಯೆ ನಡೆದಿತ್ತು. ಘಟನಾ ಸ್ಥಳದಿಂದ ಮನೆಯ ಸುತ್ತು ಹಾಕಿದ ಶ್ವಾನ, ಹಿಂಭಾಗದ ರಸ್ತೆಯ ರಾಜಕಾಲುವೆ ಬಳಿ, ಅದೇ ರಸ್ತೆಯಲ್ಲಿ ಟೈಲ್ಸ್ ಅಳವಡಿಸಲಾಗುತ್ತಿದ್ದ ಮನೆ ಬಳಿ ಸುತ್ತಾಡಿ ಅದೇ ರಸ್ತೆಯಲ್ಲಿ ಮುಂದಕ್ಕೆ ಸುಮಾರು ದೂರ ಹೋಗಿ ಅರ್ಧ ಗಂಟೆ ಬಳಿಕ ವಾಪಸ್ಸಾಯಿತು. ಸಂಪತ್ ಕುಮಾರ್ ಮನೆ ಪಕ್ಕದಲ್ಲಿ ಖಾಲಿ ನಿವೇಶನವಿದ್ದು, ಅಲ್ಲಿ ಗಿಡಗಂಟಿಗಳು ಬೆಳೆದುಕೊಂಡಿವೆ. ದುಷ್ಕರ್ಮಿ ಪರಾರಿಯಾಗಿರುವ ಹತ್ಯೆಗೆ ಬಳಸಿದ ವಸ್ತುವನ್ನು ಬಿಸಾಡಿರಬಹುದೆಂದು ಪೊಲೀಸರು ಹುಡುಕಾಟ ಮುಂದುವರೆಸಿದ್ದರು.

ಭಯಭೀತರಾದ ಜನ: ಹತ್ಯೆ ನಡೆದಿರುವ ಮನೆ ಮೇಟಗಳ್ಳಿ–ಬಿಎಂಶ್ರೀ ನಗರ ಸಂಪರ್ಕಿಸುವ ಮುಖ್ಯರಸ್ತೆ ಸಮೀಪಕ್ಕಿದೆ. ಇದೇ ರಸ್ತೆಯಲ್ಲಿರುವ ಪಾರ್ಕ್‌ನಲ್ಲಿ ಓಡಾಡುವವರಿಗೆ ಆ ಮನೆ ಕಾಣಿಸುತ್ತದೆ. ಸದಾ ಜನ ಸಂಚಾರ ಇದ್ದೇ ಇರುತ್ತದೆ. ಆದರೂ ಹಾಡಹಗಲೇ ಮನೆಗೆ ನುಗ್ಗಿ ಹತ್ಯೆ ಮಾಡಿರುವ ವಿಷಯ ತಿಳಿದ ಸ್ಥಳೀಯರು ಭಯಭೀತಗೊಂಡು ಸ್ಥಳದಲ್ಲಿ ಜಮಾಯಿಸಿದರು. ಅಲ್ಲದೆ ಸುತ್ತಮುತ್ತಲ ಬಡಾವಣೆಯ ನೂರಾರು ಮಂದಿ ಸ್ಥಳಕ್ಕೆ ದೌಡಾಯಿಸಿ, ಆತಂಕ ವ್ಯಕ್ತಪಡಿಸಿದರು.

ಸಂಪತ್ ಕುಮಾರ್ ದೊಡ್ಡ ರಿಯಲ್ ಎಸ್ಟೇಟ್ ಉದ್ಯಮಿಯಾಗಿರಲಿಲ್ಲ. ಅಗರ ಬತ್ತಿ ಮಾರಾಟ ಮಾಡುವುದರ ಜೊತೆಗೆ ಅವಕಾಶ ಸಿಕ್ಕಾಗ ಮನೆ ಮಾರಾಟ ಮಾಡಿಸುವುದು, ಭೋಗ್ಯ ಅಥವಾ ಬಾಡಿಗೆಗೆ ಕೊಡಿಸುವ ಕೆಲಸ ಮಾಡುತ್ತಿದ್ದರು. ಹಾಗಾಗಿ ಯಾರೊಂದಿಗೂ ದೊಡ್ಡ ಪ್ರಮಾಣದ ಹಣಕಾಸಿನ ವ್ಯವಹಾರವಿರಲಿಲ್ಲ. ಪತ್ನಿ ಖಾಸಗಿ ಶಾಲೆ ಶಿಕ್ಷಕಿಯಾಗಿದ್ದರಿಂದ ಇಬ್ಬರ ದುಡಿಮೆಯಲ್ಲಿ ನೆಮ್ಮದಿಯಾಗಿದ್ದರು. ಕುಟುಂಬದಲ್ಲೂ ಯಾವ ಗಲಾಟೆಯೂ ಇರಲಿಲ್ಲ. ಸಂಪತ್ ಕುಮಾರ್ ಯಾರೊಂದಿಗೂ ವೈಷಮ್ಯ ಬೆಳೆಸಿಕೊಳ್ಳುವ ವ್ಯಕ್ತಿಯೂ ಆಗಿರಲಿಲ್ಲ. ಆದರೂ ಯಾವ ಕಾರಣಕ್ಕೆ ಹತ್ಯೆ ಮಾಡಿದ್ದಾರೆ ಎಂದು ನೆರೆದಿದ್ದ ಸ್ಥಳೀಯರು ಮಾತನಾಡಿಕೊಳ್ಳುತ್ತಿದ್ದರು.

ವೈಯಕ್ತಿಕ ಕಾರಣವೇ?: ಸಂಪತ್ ಕುಮಾರ್ ಪತ್ನಿ ಗಾಯತ್ರಿ ಅವರು ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ವಿವಿಪುರಂ ಠಾಣೆ ಪೊಲೀಸರು, ಗಾಯತ್ರಿ ಅವರ ಪುತ್ರನ ಹೇಳಿಕೆಯನ್ನೂ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ವೈಯಕ್ತಿಕ ಕಾರಣದಿಂದ ಹತ್ಯೆ ನಡೆದಿರಬಹುದೆಂಬ ಸಂದೇಹ ವ್ಯಕ್ತವಾಗಿದ್ದು, ಆ ನಿಟ್ಟಿನಲ್ಲೂ ತನಿಖೆ ನಡೆಸಲಾಗುತ್ತಿದೆ. ಆರೋಪಿಗಳ ಬಂಧನದ ಬಳಿಕವೇ ಹತ್ಯೆಗೆ ನಿಖರ ಕಾರಣ ತಿಳಿಯಲಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಮೈಸೂರಿಗೂ ವ್ಯಾಪಿಸಿದ ಡ್ರಗ್ಸ್ ದಂಧೆ

ಫೋನ್‌ಗಳನ್ನು ಪೊಲೀಸರು ವಶಪಡಿಸಿಕೊಂಡರು. ಈ ಮಾದಕ ವಸ್ತುವನ್ನು ಇವರುಗಳು ಬೆಂಗಳೂರಿನ ಎಜಾಜ್ ಅಲಿಯಾಸ್ ಅಲೆಗ್ಸಾಂಡರ್ ಎಂಬಾತನಿಂದ ಖರೀದಿಸಿ ತಂದಿದ್ದರು ಎಂಬ ವಿಷಯವನ್ನು ಬಂಧಿತ ಆರೋಪಿಗಳು ಪೊಲೀಸರಿಗೆ ತಿಳಿಸಿದ್ದಾರೆ.

ಮಾದಕ ವಸ್ತು ಮಾರಾಟಗಾರರು ಮೈಸೂರಿನ ಪ್ರತಿಷ್ಠಿತ ಕಾಲೇಜುಗಳ ಹಲವಾರು ವಿದ್ಯಾರ್ಥಿಗಳ ಸಂಪರ್ಕವನ್ನು ಹೊಂದಿದ್ದು, ಮೈಸೂರಿಗೆ ಮಾದಕ ವಸ್ತು ಬರುತ್ತಿದ್ದಂತೆಯೇ ಅವರನ್ನು ಆನ್‌ಲೈನ್ ಮೂಲಕ ಸಂಪರ್ಕಿಸುತ್ತಿದ್ದರು. ಈ ವ್ಯಕ್ತಿಗಳು ತಮ್ಮ ಗ್ರಾಹಕರಾದ ವಿದ್ಯಾರ್ಥಿಗಳು ಮತ್ತು ಏಜೆಂಟರ ಜೊತೆ ವೀಡಿಯೋ ಕಾಲ್‌ನಲ್ಲೇ ಮಾತನಾಡಿ, ನಿರ್ದಿಷ್ಟ ಸ್ಥಳದಲ್ಲಿ ಮಾದಕ ವಸ್ತು ಪೂರೈಸುತ್ತಿದ್ದರು. ಮಾದಕ ವಸ್ತು ಪೂರೈಕೆಗಾಗಿ ಒಂದೇ ಸ್ಥಳವನ್ನು ನಿಗದಿಪಡಿಸಿಕೊಳ್ಳದೆ ಪ್ರತಿ ಬಾರಿಯೂ ಬೇರೆ ಬೇರೆ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆಸಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದರು ಎನ್ನಲಾಗಿದೆ. ಸಣ್ಣ ಸಣ್ಣ ಪ್ಯಾಕೆಟ್‌ಗಳಲ್ಲಿ ಎಂಡಿಎಂಎ ಮಾದಕ ವಸ್ತುವನ್ನು 5 ರಿಂದ 6 ಸಾವಿರ ರೂ.ಗಳಿಗೆ ಮಾರುತ್ತಿದ್ದರು. ಹೆಚ್ಚಾಗಿ ಶ್ರೀಮಂತ ವಿದ್ಯಾರ್ಥಿಗಳೇ ಇವರ ಗ್ರಾಹಕರಾಗಿದ್ದರು ಎಂದು ತಿಳಿದುಬಂದಿದೆ. ಇದೀಗ ಮೂವರನ್ನು ಬಂಧಿಸಿರುವ ಸಿಸಿಬಿ ಪೊಲೀಸರು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಈ ಮಾದಕ ವಸ್ತು ಜಾಲದಲ್ಲಿ ಯಾರ್‍ಯಾರಿದ್ದಾರೆ ಎಂಬುದರ ಬಗ್ಗೆ ತನಿಖೆ ನಡೆಸುತ್ತಿದ್ದಾರೆ.

'ಕಾಳಜಿ ಕಿಟ್'

ಬದಲಿಗೆ ಸರ್ಕಾರವೇ ಮುಂಚಿತವಾಗಿ ಜಿಲ್ಲಾಧಿಕಾರಿಗಳ ನಿಧಿಗೆ ಹಣ ಬಿಡುಗಡೆ ಮಾಡುತ್ತಿದೆ ಎಂದು ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಅರವತ್ತು ವರ್ಷಗಳ ಹಿಂದೆ ಕೆಆರ್‌ಎಸ್ ಅಣೆಕಟ್ಟು ಕಟ್ಟಲು ರಾಜ್ಯಕ್ಕೆ ಬಂದ ಏಳುನೂರಕ್ಕೂ ಹೆಚ್ಚು ಮಂದಿ ಶ್ರೀರಂಗಪಟ್ಟಣ ತಾಲೂಕಿನಲ್ಲಿದ್ದು ಅವರು ಹಾಲಿ ವಾಸವಾಗಿರುವ ಭೂಮಿಯ ಹಕ್ಕು ಪತ್ರ ನೀಡಲು ತೀರ್ಮಾನಿಸಲಾಗಿದೆ ಎಂದು ಹೇಳಿದರು. ಕೆಆರ್‌ಎಸ್ ಅಣೆಕಟ್ಟು ಕಟ್ಟಲೆಂದು ಬಂದವರು ಇಲ್ಲೇ ಉಳಿದುಕೊಂಡರೂ ಅವರನ್ನು ಯಾರೂ ಕೇಳಿರಲಿಲ್ಲ. ಆದರೆ ಅಂತಹ 747 ಮಂದಿಯನ್ನು ಗುರುತಿಸಿ ನೆಲೆ ಒದಗಿಸಲು ಸರ್ಕಾರ ತೀರ್ಮಾನಿಸಿತು ಎಂದರು.

ಮೈಸೂರಲ್ಲಿ ಅಪಾಯಕಾರಿ ಎಲೆಕ್ಟ್ರಾನಿಕ್ ವಸ್ತುಗಳ ವೈಜ್ಞಾನಿಕ ವಿಲೇವಾರಿಗೆ ಇ–ತ್ಯಾಜ್ಯ ಸಂಗ್ರಹ ಅಭಿಯಾನಕ್ಕೆ ಚಾಲನೆ

● ಅನುಪಯುಕ್ತ ಎಲೆಕ್ಟ್ರಾನಿಕ್ ಪದಾರ್ಥಗಳ ಸುರಕ್ಷಿತ ವಿಲೇವಾರಿಗೆ ಸಹಕರಿಸಲು ಜನತೆಗೆ ಪಾಲಿಕೆ ಆಯುಕ್ತರ ಮನವಿ ● ಆ.14ರವರೆಗೆ ಮನೆ ಬಾಗಿಲಲ್ಲೇ ಇಂತಹ ವಸ್ತುಗಳ ಸಂಗ್ರಹಿಸುವ ವಾಹನ ವ್ಯವಸ್ಥೆ



> "ಮೈಸೂರು ನಗರದಲ್ಲಿ ನಿರುಪಯುಕ್ತ ವಿದ್ಯುತ್ ಉಪಕರಣಗಳನ್ನು ಗುಜರಿಗೆ ನೀಡಲಾಗುತ್ತಿದೆ. ಇದರಿಂದ ಅವುಗಳನ್ನು ಬೇಕಾಬಿಟ್ಟಿಯಾಗಿ ವಿಲೇವಾರಿ ಮಾಡುತ್ತಿದ್ದು, ರಾಸಾಯನಿಕ ವಸ್ತುಗಳು ಪರಿಸರಕ್ಕೆ ಸೇರುತ್ತಿವೆ. ಅಲ್ಲದೇ, ಅಲ್ಲಿ ಕೆಲಸ ಮಾಡುವವರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ 9 ವಲಯ ಕೇಂದ್ರಗಳಲ್ಲೂ ಒಟ್ಟು 21 ಒಣ ತ್ಯಾಜ್ಯ ಸಂಗ್ರಹಣಾ ಘಟಕ ಸ್ಥಾಪಿಸಲಾಗಿದೆ. ಕೆ.ಟಿ.ಸ್ಟ್ರೀಟ್ ಸೇರಿದಂತೆ ವಿದ್ಯುನ್ಮಾನ ಉಪಕರಣಗಳ ಮಾರಾಟ ಮಳಿಗೆ ಹೆಚ್ಚಾಗಿರುವ ಬಡಾವಣೆಗಳಲ್ಲಿ ಇ–ವಾಹನಗಳ ಮೂಲಕವೇ ತ್ಯಾಜ್ಯ ಸಂಗ್ರಹಿಸಲಾಗುತ್ತದೆ. ಈಗಾಗಲೇ ತ್ಯಾಜ್ಯ ನಿರ್ವಹಣೆ ಕಾರ್ಯಕ್ರಮದಡಿ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ. ಇ–ತ್ಯಾಜ್ಯ ಸಂಗ್ರಹ ಅಭಿಯಾನದಲ್ಲಿ ಜನರು ತಮ್ಮ ಮನೆಯಲ್ಲಿರುವ ಹಳೆ ವೈರ್, ಫೋನ್, ಕಂಪ್ಯೂಟರ್, ಟಿವಿ. ಫ್ರಿಜ್ಡ್ ಸೇರಿದಂತೆ ಇನ್ನಿತರ ವಸ್ತುಗಳನ್ನು ನೀಡಿ.
>
> - **ರೂಪ,** ಅಪರ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ

ಮೈಸೂರು,ಆ.8(ಎಂಟಿವೈ)– ಪರಿಸರಕ್ಕೆ ಮಾರಕವಾಗಿ ಪರಿಣಮಿಸುತ್ತಿರುವ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆ ಸೋಮವಾರದಿಂದ 'ಇ–ತ್ಯಾಜ್ಯ ಸಂಗ್ರಹ' ಅಭಿಯಾನ ಆರಂಭಿಸಿದೆ.

ಪಾಲಿಕೆ ಆವರಣದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ 'ಇ–ತ್ಯಾಜ್ಯ ಸಂಗ್ರಹ' ಅಭಿಯಾನದ ವಾಹನಗಳಿಗೆ ಚಾಲನೆ ನೀಡಿದರು.

ಬಳಿಕ ಅವರು ಮಾತನಾಡಿ, ಮೈಸೂರಲ್ಲಿ ನಿರುಪಯುಕ್ತ ವಿದ್ಯುತ್ ಉಪಕರಣಗಳ ವೈಜ್ಞಾನಿಕ ವಿಲೇವಾರಿಯಾಗುತ್ತಿಲ್ಲ. ಇದರಿಂದ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಪರಿಸರ ಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಇವುಗಳ ಪ್ರತ್ಯೇಕ ವಾಗಿ ವೈಜ್ಞಾನಿಕ ರೀತಿ ವಿಲೇವಾರಿ ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಪಾಲಿಕೆ ವತಿಯಿಂದ ಆ.14ರವರೆಗೂ 'ಇ–ತ್ಯಾಜ್ಯ ಸಂಗ್ರಹ' ಅಭಿಯಾನ ನಡೆಸಲಾಗುತ್ತಿದೆ ಮೈಸೂರಿನ ಜನತೆ ತಮ್ಮ ಮನೆಯಲ್ಲಿರುವ ನಿರುಪಯುಕ್ತ ಹಳೆ ಬ್ಯಾಟರಿ, ಮೊಬೈಲ್ ಸೇರಿದಂತೆ ವಿದ್ಯುತ್ ಉಪಕರಣಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಇವುಗಳನ್ನು ಪ್ರತ್ಯೇಕವಾಗಿ ರಿಸೈಕಲ್ ಮಾಡುವ ಅಗತ್ಯವಿದೆ. ಅದಕ್ಕಾಗಿ ಪಾಲಿಕೆಯ ಪ್ರತಿಯೊಂದು ವಲಯ ಕಚೇರಿಗಳಲ್ಲೂ ಇ–ತ್ಯಾಜ್ಯ ಸಂಗ್ರಹಿಸಲಾಗುತ್ತಿದೆ. ಈ ಕಾರ್ಯಕ್ಕೆ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಆ ಮೂಲಕ ಪರಿಸರದ ಮೇಲೆ ಯಾವುದೇ ದುಷ್ಪರಿಣಾಮ ಬೀರದಂತೆ ವಿಲೇವಾರಿ ಮಾಡಲಾಗುತ್ತದೆ. ಪಾಲಿಕೆ ಕೈಗೊಂಡಿರುವ ಈ ವಿಶೇಷ ಅಭಿಯಾನಕ್ಕೆ ಜನರು ಸಹಕರಿಸಬೇಕು ಎಂದರು.

ಹಂಗಾಮಿ ಉಪಮೇಯರ್ ಅನ್ವರ್ ಬೇಗ್ ಮಾತನಾಡಿ, ನಿರುಪಯುಕ್ತ ವಿದ್ಯುತ್ ಉಪಕರಣಗಳ ಸಂಗ್ರಹ ಹಾಗೂ ಅವುಗಳ ಅವೈಜ್ಞಾನಿಕ ವಿಲೇವಾರಿಯಿಂದಾಗುವ ದುಷ್ಪರಿಣಾಮ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕು. ಪ್ರತಿಯೊಂದು ಮನೆಗೂ ಇ–ತ್ಯಾಜ್ಯ ವಸ್ತುಗಳ ಸಂಗ್ರಹದ ಬಗ್ಗೆ ಮಾಹಿತಿ ನೀಡಬೇಕು. ಈ ಅಭಿಯಾನ ಮಹತ್ವ ಉದ್ದೇಶ ಹೊಂದಿದೆ. ಇದಕ್ಕೆ ಮೈಸೂರಿನ ಜನತೆ ಹಾಗೂ ಜನಪ್ರತಿನಿಧಿಗಳು ಬೆಂಬಲ ನೀಡಬೇಕು ಎಂದು ಒತ್ತಾಯಿಸಿದರು.

ಅಭಿಯಾನಕ್ಕೆ ಚಾಲನೆ ನೀಡುವ ಮುನ್ನ ಪಾಲಿಕೆಯ ಅಪರ ಆಯುಕ್ತೆ ರೂಪ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಇ–ತ್ಯಾಜ್ಯಗಳ ವಿಲೇವಾರಿ ಮಾಡುವ ವಿವಿಧ ಸಂಸ್ಥೆಗಳ ಪ್ರತಿನಿಧಿ ಗಳೊಂದಿಗೆ ಸಭೆ ನಡೆಸಿದರು. ವಿವಿಧೆಡೆ ಈಗಾಗಲೇ ರಿಸೈಕಲ್ ಮಾಡುತ್ತಿರುವ ಸಂಸ್ಥೆಗಳು ಪ್ರಾತ್ಯಕ್ಷಿಕೆ ಮೂಲಕ ಮೈಸೂರಲ್ಲೂ ಇ–ತ್ಯಾಜ್ಯ ವಿಲೇವಾರಿಗೆ ಉತ್ಸುಕರಾಗಿರುವ ಬಗ್ಗೆ ಮಾಹಿತಿ ನೀಡಿದರು.

ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಡಿ.ಜಿ. ನಾಗರಾಜ್ ಮಾತನಾಡಿ, ವಿಶ್ವದಲ್ಲಿ ವರ್ಷಕ್ಕೆ 70 ಮಿಲಿಯನ್ ಟನ್ ಇ–ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಅದರಲ್ಲಿ ಶೇ.13ರಷ್ಟು ಮಾತ್ರ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಕಂಪ್ಯೂಟರ್, ಟಿವಿ, ರೇಡಿಯೋ, ಏರ್ ಕಂಡೀಷನ್, ರೆಫ್ರಿಜರೇಟರ್ ಸೇರಿದಂತೆ ಇನ್ನಿತರ ವಿದ್ಯುತ್ ಉಪಕರಣಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದಿದ್ದರೆ ಸಮುದಾಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕ್ಯಾಡ್ಮಿಯಂ, ಲೆಡ್ ಸೇರಿದಂತೆ ವಿವಿಧ ರಾಸಾಯನಿಕಗಳು ಪರಿಸರಕ್ಕೆ ಸೇರುತ್ತಿದೆ. ಕೆಲವರು ಕಾಪರ್ ತೆಗೆಯಲು ಬೆಂಕಿ ಹಾಕುತ್ತಿದ್ದಾರೆ. ಇದರಿಂದ ನೆಲ, ಜಲ, ವಾಯು ಮಾಲಿನ್ಯವಾಗುತ್ತಿದೆ. ಮೊಬೈಲ್ ಅಂಗಡಿ, ಆಸ್ಪತ್ರೆ ಸೇರಿದಂತೆ ವಿವಿಧೆಡೆ ಇ–ತ್ಯಾಜ್ಯ ಸಂಗ್ರಹಿಸಲಾಗುತ್ತದೆ. ವರ್ಷಕ್ಕೆ ಮೈಸೂರಲ್ಲಿ 3–4 ಟನ್ ಇ–ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಕಳೆದ ವರ್ಷ 4 ಟನ್ ಇ–ತ್ಯಾಜ್ಯ ಸಂಗ್ರಹಿಸಲಾಗಿತ್ತು. ಲೆಡ್‌ನಿಂದಾಗಿ ಇತ್ತೀಚಿನ ದಿನಗಳಲ್ಲಿ ಕ್ಯಾನ್ಸರ್ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇ–ತ್ಯಾಜ್ಯಗಳ ವೈಜ್ಞಾನಿಕ ವಿಲೇವಾರಿ ಅಗತ್ಯ ಎಂದು ತಿಳಿಸಿದರು.

ಬಗರ್‌ಹುಕುಂ ಸಾಗುವಳಿ ಪತ್ರಕ್ಕೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು, ಆ.8(ಆರ್‌ಕೆಬಿ)– ಬಗರ್ ಹುಕುಂ ಸಾಗುವಳಿ ಪತ್ರಕ್ಕೆ ಒತ್ತಾಯಿಸಿ, ಗೋಮಾಳ, ಅರಣ್ಯ ಭೂಮಿ ಹಾಗೂ ನಗರದ 8 ಕಿ.ಮೀ. ವ್ಯಾಪ್ತಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೂ ಸಾಗುವಳಿ ಪತ್ರಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು. ಹಾಲಿನ ಉತ್ಪನ್ನಗಳ ಮೇಲೆ ವಿಧಿಸಿರುವ ಜಿಎಸ್‌ಟಿ ಹಿಂಪಡೆಯಬೇಕು. ಗೊಬ್ಬರ ಅಭಾವ ತಗ್ಗಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಕಳೆದ 50–60 ವರ್ಷಗಳಿಂದ ಗೋಮಾಳ, ಗುಂಡು ತೋಪು, ಅರಣ್ಯ ಭೂಮಿಗಳಲ್ಲಿ ಬಡ ಬಗರ್ ಹುಕುಂ ಸಾಗುವಳಿದಾರರು ಉಳುಮೆ ಮಾಡುತ್ತಾ ತಮ್ಮ ಜೀವನ ನಡೆಸುತ್ತಿದ್ದೇವೆ. ಆದರೆ ಯಾವುದೇ ಸರ್ಕಾರ ನಮ್ಮಂತಹ ಬಡ ಬಗರ್‌ಹುಕುಂ ಸಾಗುವಳಿದಾರರನ್ನು ಮರೆತಿದೆ. ಸಾಗುವಳಿ ಪತ್ರ ಇಲ್ಲದ ಕಾರಣ ಸರ್ಕಾರಿ ಸವಲತ್ತುಗಳು, ಸಾಲ ಸೌಲಭ್ಯ, ಬರ ಪರಿಹಾರ ಇತ್ಯಾದಿ ಸೌಲಭ್ಯಗಳಿಂದ ನಾವು ವಂಚಿತರಾಗಿದ್ದೇವೆ ಎಂದು ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಈ ಹಿಂದೆ ಫಾರಂ ನಂಬರ್ 5–53ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಫಾರಂ ನಂಬರ್ 57ರಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿದ್ದರೂ ಜಿಲ್ಲೆಯ ಬಹುತೇಕ ತಾಲೂಕುಗಳಲ್ಲಿ ಇನ್ನು ಅರ್ಜಿ ಪಡೆಯುತ್ತಿಲ್ಲ. ಅರ್ಜಿ ಸಲ್ಲಿಸಿದ ರೈತರಿಗೆ ಇದುವರೆಗೂ ಸಾಗುವಳಿ ಪತ್ರ ನೀಡಿಲ್ಲ. ಇದರಿಂದ ರೈತರಿಗೆ ಭಾರೀ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಡ ಬಗರ್‌ಹುಕುಂ ಸಾಗುವಳಿದಾರರು ಈಗಾಗಲೇ ಹಕ್ಕು ಪತ್ರಕ್ಕಾಗಿ ಫಾರಂ 51, 53 ಹಾಗೂ 57 ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಲು ತಾಲೂಕು ಮಟ್ಟದ ಸಮಿತಿ ನೇಮಿಸಿ, ವಿಲೇವಾರಿಗೆ ಕ್ರಮವಹಿಸಬೇಕು. ಸಾಗುವಳಿ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ರೈತರಿಗೆ ನೀಡುವ ತೀರ್ಮಾನವನ್ನು ಸರ್ಕಾರ ಕೂಡಲೇ ಕೈಬಿಡಬೇಕು. ನಗರದ 8 ಕಿ.ಮೀ. ವ್ಯಾಪ್ತಿಯ ಹಾಗೂ ಅರಣ್ಯ ಭೂಮಿಯಲ್ಲಿನ ಬಡ ಬಗರ್‌ಹುಕುಂ ಸಾಗುವಳಿದಾರರ ಭೂಕಬಳಿಕೆ ತಕ್ಷಣ ನಿಲ್ಲಿಸಿ, ಸಾಗುವಳಿದಾರರಿಗೆ ಹಕ್ಕು ಪತ್ರ ನೀಡಲು ಅಡ್ಡಿಯಾಗಿರುವ ಕಾಯ್ದೆಗಳ ತಿದ್ದುಪಡಿ ಮಾಡಿ ವಿತರಿಸಬೇಕು. ಆದಿವಾಸಿಯೇತರ ಅರಣ್ಯಭೂಮಿ ಬಡ ಸಾಗುವಳಿದಾರರಿಗೆ ಹಕ್ಕು ಪತ್ರ ದೊರೆಯುವಂತೆ ಅರಣ್ಯ ಹಕ್ಕು ಮಾನ್ಯತಾ ಕಾಯ್ದೆಗೆ ತಿದ್ದುಪಡಿ ಮಾಡಿ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚಿಕ್ಕಣ್ಣೇಗೌಡ, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಮುಖಂಡರಾದ ಪುಟ್ಟರಾಜು, ರಮೇಶ್ ಅಲಗಯ್ಯನಹುಂಡಿ, ಚೌಡಮ್ಮ, ನೂರಾನಿ, ಅಭಿಮಾನ್, ಬಾಲರಾಜ್, ಕನಕನಾಯ್ಕ, ಎನ್.ವಿಜಯಕುಮಾರ್, ತೋಟಪ್ಪ, ರಾಜಶೇಖರ್, ರಂಗಸ್ವಾಮಿ, ಶಿವಪ್ಪ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಕೃಷ್ಣರಾಜ ಕ್ಷೇತ್ರದ ಶಾಸಕ ರಾಮದಾಸ್‌ರಿಂದ ಖಾತಾ ಅದಾಲತ್



ಮೈಸೂರು, ಆ.8(ಆರ್‌ಕೆಬಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ರಚಿಸಿರುವ ಬಡಾವಣೆಗಳು ಹಾಗೂ ಅನುಮೋದಿತ ಬಡಾವಣೆಗಳ ನಿವೇಶನಗಳಿಗೆ ಖಾತಾ ನೋಂದಣಿ, ವರ್ಗಾವಣೆ, ನಕ್ಷೆ ಅನುಮೋದನೆ, ಹಕ್ಕು ಪತ್ರಗಳಿಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ಸಮಸ್ಯೆ ಅನುಭವಿಸುತ್ತಿದ್ದ ಸ್ಥಳೀಯ ನಿವಾಸಿಗಳು ಹಾಗೂ ಮುಡಾ ಬಡಾವಣೆಗಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್ ದೀಪ, ರಸ್ತೆ, ಯುಜಿಡಿ ಮತ್ತು ಸ್ವಚ್ಛತೆ ಇನ್ನಿತರೆ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವ ನಿಟ್ಟಿನಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರು ಸೋಮವಾರ ಶ್ರೀರಾಂಪುರದ ಅನ್ನಪೂರ್ಣೇಶ್ವರಿ ಕಲ್ಯಾಣ ಮಂಟಪದಲ್ಲಿ ಸಭೆ ನಡೆಸಿದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಮೈಸೂರು ನಗರಪಾಲಿಕೆ ಸಹಯೋಗದಲ್ಲಿ ನಡೆದ ಸಭೆಯಲ್ಲಿ ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ 64 ಮತ್ತು 65ನೇ ವಾರ್ಡ್‌ಗೆ ಸೇರಿದ 23 ಬಡಾವಣೆಗಳನ್ನು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಮುಡಾ ಆಯುಕ್ತರಿಂದ ನಗರಪಾಲಿಕೆ ಆಯುಕ್ತರಿಗೆ ಹಸ್ತಾಂತರಿಸಿದರು.

ಕ್ಷೇತ್ರ ವ್ಯಾಪ್ತಿಯ 64, 65ನೇ ವಾರ್ಡ್‌ನ 23 ಖಾಸಗಿ ಬಡಾವಣೆಗಳಲ್ಲಿ ನಿವೇಶನಗಳ ಖಾತೆ, ಕಂದಾಯ ಮತ್ತು ಟೈಟಲ್ ಡೀಡ್‌ಗೆ ಸಂಬಂಧಿಸಿದ ಕೆಲಸಗಳನ್ನು ಇನ್ನು ಮುಂದೆ ನಗರ ಪಾಲಿಕೆಯಲ್ಲಿ ಮಾಡಿಕೊಡಲು ಪಾಲಿಕೆ ಆಯುಕ್ತರು ಒಪ್ಪಿಕೊಂಡಿದ್ದು, ಈ ಸಂಬಂಧ ಮುಂದಿನ ಕೌನ್ಸಿಲ್ ಸಭೆಯಲ್ಲಿ ಈ ವಿಷಯ ಮಂಡಿಸಿ, ಅದಕ್ಕೆ ಸಭೆಯಲ್ಲಿ ಅನುಮೋದನೆ ದೊರೆತ ನಂತರದಲ್ಲಿ ಖಾತೆ, ಕಂದಾಯವನ್ನು ಪಾಲಿಕೆ ವ್ಯಾಪ್ತಿಯಲ್ಲೇ ಮಾಡುವ ಸಂಬಂಧ ಕ್ರಮವನ್ನು ಕೈಗೊಳ್ಳಲಾಗುತ್ತದೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್ ದೀಪ, ರಸ್ತೆ, ಸ್ವಚ್ಛತೆ, ಯುಜಿಡಿ ಇತ್ಯಾದಿ ಸೌಕರ್ಯಗಳನ್ನು ಇನ್ನು ಮುಂದೆ ಪಾಲಿಕೆ ವತಿಯಿಂದ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಸಭೆಯಲ್ಲಿದ್ದ ಎಲ್ಲರಿಗೂ 75ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ತ್ರಿವರ್ಣ ಧ್ವಜವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ, ಮುಡಾ ಆಯುಕ್ತ ದಿನೇಶ್, ಪಾಲಿಕೆ ಸದಸ್ಯರಾದ ಚಂಪಕಾ, ಗೀತಾಶ್ರೀ ಯೋಗನಂದ್, ಮುಡಾ ಮತ್ತು ನಗರಪಾಲಿಕೆ ಅಧಿಕಾರಿಗಳಾದ ಭಾಸ್ಕರ್, ಮಂಜುನಾಥ್, ನಾಗರಾಜು, ಸೋಮಶೇಖರ್, ಮಲ್ಲಿಕಾರ್ಜುನ್, ಯೋಗೇಂದ್ರ, ಸ್ಥಳೀಯ ಮುಖಂಡರಾದ ಗಿರೀಶ್, ಯೋಗಾನಂದ್, ಸತೀಶ್, ಗೋಪಾಲ್, ಉಮಾ, ಸಾಗರ್, ಮಮತಾ, ಚಂದ್ರಶೇಖರ್, ನಾಗೇಶ್, ವಿಜಯಲಕ್ಷ್ಮೀ, ಶ್ರೀಧರ್ ಇನ್ನಿತರರು ಉಪಸ್ಥಿತರಿದ್ದರು.

ಶರಣ ವೇದಿಕೆಯಿಂದ ಪ್ರತಿಭಾ ಪುರಸ್ಕಾರ

ಮೈಸೂರು, ಆ. 8– ಜೆ.ಪಿ.ನಗರ ಶರಣ ವೇದಿಕೆ ವತಿಯಿಂದ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ಅರ್ಹ ವಿದ್ಯಾರ್ಥಿಗಳು ಆ. 15 ರೊಳಗೆ ಅರ್ಜಿ, ಭಾವಚಿತ್ರ, ಆಧಾರ್ ಕಾರ್ಡ್ ನಕಲು ಮತ್ತು ಅಂಕ ಪಟ್ಟಿ ನಕಲಿನೊಂದಿಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 7996207960, 9986383580 ಸಂಪರ್ಕಿಸಬಹುದು.

ಉಚಿತ ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಆ. 8– ಪ್ರಕೃತಿ ಆಯುರ್ವೇದ ಪ್ರತಿಷ್ಠಾನದ ವತಿಯಿಂದ ದಟ್ಟಗಳ್ಳಿಯಲ್ಲಿರುವ ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರದಲ್ಲಿ ಆ. 10 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8277888525 ಸಂಪರ್ಕಿಸಬಹುದು.

ಪಿಂಚಣಿ ನಿಧಿ ಇತರೆ ಉದ್ದೇಶಕ್ಕೆ ಬಳಕೆ ಆರೋಪ

ಮೈಸೂರು ವಿಶ್ವ ವಿದ್ಯಾನಿಲಯ ನಿವೃತ್ತ ಉದ್ಯೋಗಿಗಳ ಸಭೆ; ಡಾ.ಕೆ.ಮಹದೇವು ನೇತೃತ್ವದಲ್ಲಿ ಹೋರಾಟಕ್ಕೆ ನಿರ್ಧಾರ



ಮೈಸೂರು, ಆ.8 (ಆರ್‌ಕೆಬಿ)– ಮೈಸೂರು ವಿಶ್ವವಿದ್ಯಾನಿಲಯದ 100 ಕೋಟಿ ರೂ.ಗೂ ಹೆಚ್ಚು ಪಿಂಚಣಿ ನಿಧಿಯನ್ನು ಅನಧಿಕೃತವಾಗಿ ಇತರ ಉದ್ದೇಶಗಳಿಗಾಗಿ ಬಳಸಲಾಗಿದೆ ಎಂದು ವಿಶ್ವ ವಿದ್ಯಾನಿಲಯದ ನಿವೃತ್ತ ಅಧ್ಯಾ ಪಕರು ಮತ್ತು ನೌಕರರು ಕಳವಳ ವ್ಯಕ್ತಪಡಿಸಿದ್ದಾರೆ.

ಮೈಸೂರು ವಿವಿ ನಿವೃತ್ತ ಉದ್ಯೋಗಿಗಳ ಒಕ್ಕೂಟದ ಆಶ್ರಯದಲ್ಲಿ ನಿವೃತ್ತ ಅಧ್ಯಾಪಕರು, ನೌಕರರು ಸೋಮವಾರ ಕ್ರಾಫರ್ಡ್ ಭವನದ ಹುಲ್ಲು ಹಾಸಿನ ಮೇಲೆ ಸಭೆ ನಡೆಸಿದರು. ಮೈಸೂರು ವಿವಿಯ ನಿವೃತ್ತ ಉದ್ಯೋಗಿಗಳ ನಿವೃತ್ತಿ ಸೌಲಭ್ಯಗಳನ್ನು ವಿತರಿಸಲು ಅನುಕೂಲವಾಗುವ ದೃಷ್ಟಿಯಿಂದ ಠೇವಣಿ ಇಡಲಾಗಿದ್ದ ನಿವೃತ್ತ ಉದ್ಯೋಗಿಗಳ ಆಪತ್ ನಿಧಿ (ನಿವೃತ್ತಿ ವೇತನ)ಯಿಂದ ಹಾಲಿ ಕುಲಪತಿ, ಕುಲಸಚಿವರು ಮತ್ತು ಹಣಕಾಸಿನ ಅಧಿಕಾರಿಗಳು ಸೇರಿಕೊಂಡು ಸುಮಾರು 100 ಕೋಟಿಗೂ ಮೇಲ್ಪಟ್ಟ ಹಣವನ್ನು ನಿವೃತ್ತಿ ನಿಧಿಯಿಂದ ಹಿಂಪಡೆದು ವಿವಿಧ ಕಾಮಗಾರಿಗಳಿಗೆ ಉಪಯೋಗಿಸಿಕೊಂಡಿದ್ದಾರೆನ್ನಲಾಗಿದೆ. ಅಲ್ಲದೆ ಕುಲಪತಿಯವರ ಅಧಿಕಾರ ಅವಧಿಯು ಇನ್ನು ಕೇವಲ 3 ತಿಂಗಳು ಮಾತ್ರ ಇದ್ದು, ನಿವೃತ್ತಿ ಠೇವಣಿ ಹಣವನ್ನು ದುರ್ಬಳಕೆ ಮಾಡಿಕೊಂಡು, ನಿವೃತ್ತಿದಾರರನ್ನು ಅತಂತ್ರ ಸ್ಥಿತಿಗೆ ದೂಡುವ ಆತಂಕ ಎದುರಾಗಿದೆ ಎಂದು ನಿವೃತ್ತ ಅಧ್ಯಾಪಕರು, ನೌಕರರು ಸಭೆಯಲ್ಲಿ ತಿಳಿಸಿದರು.

ಮೈಸೂರು ವಿವಿಯಲ್ಲಿ ಪಿಎಫ್ ಮತಿಗೆಯ ಮೂಲಕ ಸಂಗ್ರಹಿಸಲಾಗಿದ್ದ ಹಣವನ್ನು ಪಿಎಫ್ ಸೌಲಭ್ಯದಿಂದ ಪಿಂಚಣಿ ಸೌಲಭ್ಯಕ್ಕೆ ಬದಲಾವಣೆ ಮಾಡಿಕೊಂಡ ಸಂದರ್ಭದಲ್ಲಿ ಈ ಆಪತ್ ನಿಧಿಯನ್ನು ಸ್ಥಾಪಿಸಲಾಯಿತು. ಈ ನಿಧಿಯಲ್ಲಿರುವ ಹಣವನ್ನು ಯಾವುದೇ ಕಾರಣಕ್ಕೂ ಹಿಂಪಡೆಯಲು ಅಥವಾ ಇನ್ನಿತರ ಅನ್ಯ ಕಾರ್ಯಗಳಿಗೆ ಬಳಸಲು ಅವಕಾಶವಿಲ್ಲ. ಒಂದು ವೇಳೆ ಹಾಗೆ ಮಾಡಿದರೆ ಐಪಿಸಿ ಸೆಕ್ಷನ್ 406 ಪ್ರಕಾರ ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ವಿಷಯಗಳು ವಿವಿಧ ಮಾಧ್ಯಮಗಳ ಮೂಲಕ ವಿವಿಯ ಪಿಎಂಇಬಿ ಸದಸ್ಯರೂ, ಸಿಂಡಿಕೇಟ್ ಮಾಜಿ ಸದಸ್ಯರೂ ಆದ ಡಾ.ಕೆ.ಮಹದೇವು ಈಗಾಗಲೇ ಮಾಧ್ಯಮಗಳಿಗೆ ಸ್ಪಷ್ಟಪಡಿಸಿದ್ದಾರೆ ಎಂದರು.

ಈ ವಿಷಯವನ್ನು ತಿಳಿದು ಆತಂಕಕ್ಕೊಳಗಾದ ಹಲವು ನಿವೃತ್ತ ಉದ್ಯೋಗಿಗಳು ಜು.26ರಂದ ವಿವಿ ಕ್ರಾಫರ್ಡ್ ಭವನದ ಮುಂದೆ ಸಭೆ ನಡೆಸಿ, ಹಣಕಾಸು ಅಧಿಕಾರಿಯನ್ನು ಭೇಟಿಯಾಗಿ ಈ ವಿಚಾರ ಸತ್ಯವೆಂಬುದಾಗಿ ಖಚಿತಪಡಿಸಿಕೊಂಡಿರುವುದಾಗಿ ಸಭೆಯಲ್ಲಿ ತಿಳಿಸಲಾಯಿತು.

ಆದರೆ ಈ ಹಣ ಎಲ್‌ಐಸಿ ಮ್ಯಾನೇಜ್‌ಮೆಂಟ್ ಫಂಡ್‌ಗೆ ಎಂಬ ಹೆಸರಿಡುವ ಮೂಲಕ ಕುಲಪತಿಗಳು ನಿವೃತ್ತ ನೌಕರರನ್ನು ದಿಕ್ಕು ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಸಂಘದ ಸದಸ್ಯರು, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಈ ಸಂಬಂಧ ಹೋರಾಟ ನಡೆಸಲು, ಡಾ.ಕೆ.ಮಹದೇವ್ ಅವರನ್ನು ಗೌರವಾಧ್ಯಕ್ಷರನ್ನಾಗಿ ಮಾಡಿ, ಅವರ ನೇತೃತ್ವದಲ್ಲಿ ಹೋರಾಟ ರೂಪಿಸಲು ಸಭೆ ನಿರ್ಧರಿಸಿತು ಎಂದು ಸಭೆಯ ಮುಖ್ಯಸ್ಥರು ತಿಳಿಸಿದರು. ಇದಲ್ಲದೆ ಕಳೆದ 4 ತಿಂಗಳಿಂದ ನಿವೃತ್ತಿಯಾಗಿರುವ ಉದ್ಯೋಗಿಗಳಿಗೆ ನಿವೃತ್ತಿ ವೇತನ, ಗ್ರಾಚ್ಯುಯಿಟಿ, ನಗದೀಕರಣ ಇತ್ಯಾದಿ ಅನೇಕ ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡದಿರುವ ವಿಷಯವೂ ತಿಳಿದು ಬಂದಿದೆ. ಈ ಪರಿಸ್ಥಿತಿ 100 ವರ್ಷ ತುಂಬಿದ ಘನತೆವೆತ್ತ ಮೈಸೂರು ವಿವಿಗೆ ಬಂದಿರುವುದು ಆತಂಕದ ಸಂಗತಿ. ಇದೇ ಪರಿಸ್ಥಿತಿ ಮುಂದುವರಿದರೆ ನಿವೃತ್ತರಾಗುವ ಉದ್ಯೋಗಿಗಳಿಗೆ ಮುಂದೆ ಪಿಂಚಣಿ ಸೌಲಭ್ಯ ಸ್ಥಗಿತಗೊಳ್ಳುವ ಸಂಭವವಿದೆ ಎಂದು ಸಭೆಯಲ್ಲಿ ಆತಂಕ ವ್ಯಕ್ತವಾಯಿತು.

ಈ ಸಂದರ್ಭದಲ್ಲಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ವಿವಿ ಐಸಿಎಸ್‌ಎಸ್‌ಆರ್‌ನ ಹಿರಿಯ ಸಹೋದ್ಯೋಗಿ ಪ್ರೊ.ಬಿ.ಶಿವರಾಜ್, ವಿಶ್ವವಿದ್ಯಾನಿಲಯದ ಪಿಂಚಣಿ ನಿಧಿಯ ಸುರಕ್ಷತೆ ಮತ್ತು ಭದ್ರತೆಗೆ ಧಕ್ಕೆ ತರುವ ವಿವಿ ಆಡಳಿತದಲ್ಲಿ ನಡೆಯುತ್ತಿರುವ ಗೊಂದಲದ ಘಟನೆಗಳ ಬಗ್ಗೆ ಚರ್ಚಿಸಲು ಇಂದು ಸಭೆ ನಡೆಸುತ್ತಿದ್ದೇವೆ. ಪಿಂಚಣಿ ನಿಧಿ ನೌಕರರಿಗೆ ಸೇರಿದ್ದು, ಆದರೆ ಅದನ್ನು ಕಾನೂನಿಗೆ ವಿರುದ್ಧವಾಗಿ ಇತರೆ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗಿದೆ. ಹೀಗಾಗಿ ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಆಡಳಿತ ಮತ್ತು ಕಾನೂನು ಸುವ್ಯವಸ್ಥೆ ಕುಸಿದಿದೆ. ಇದನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಸಭೆಯು ಮೈಸೂರು ವಿವಿ ಮಾಜಿ ಸಿಂಡಿಕೇಟ್ ಮತ್ತು ಸೆನೆಟ್ ಸದಸ್ಯರಾದ ಡಾ.ಕೆ.ಮಹದೇವ್ ಅವರನ್ನು ನಿವೃತ ಉದ್ಯೋಗಿಗಳ ಒಕ್ಕೂಟದ ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿತು. ಸಂಘದ ಸಂಚಾಲಕರಾದ ಕೃಷ್ಣ ಮಲ್ಲೇಗೌಡ, ದ.ಕ.ಚಂಚಲಾಕ್ಷಿ, ಮಾಜಿ ಉಪ ಕುಲಸಚಿವ ವಿಷಕಂಠ, ಮಾಜಿ ಕುಲಸಚಿವ ಪ್ರೊ.ಆರ್.ರಾಜಣ್ಣ, ಡಾ.ಕೈಸರ್ ಜಹಾನ್ ಬೇಗಂ, ಪ್ರೊ.ಆನಂದ್, ಪ್ರೊ.ಗಂಗಾನಾಯಕ್ ಇನ್ನಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಬಿಜೆಪಿ ನಾಯಕರ 'ದೇಶಭಕ್ತಿ' ನಾಟಕ

ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ

ನಂಜನಗೂಡು, ಆ.8– ಆರ್‌ಎಸ್‌ಎಸ್‌ನ ನಾಗ್ಪುರ ಕಚೇರಿ ಮೇಲೆ ಕಳೆದ 52 ವರ್ಷಗಳಿಂದಲೂ ತ್ರಿವರ್ಣ ಧ್ವಜ ಹಾರಿಸದೆ ಭಾಗವಧ್ವಜ ಹಾರಿಸುತ್ತಿದ್ದರು. ಇದೀಗ ಬಿಜೆಪಿ ನಾಯಕರು 'ಹರ್ ಘರ್ ತಿರಂಗೆ' ಎಂದು ನಾಟಕವಾಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ತಾಲೂಕಿನ ತಗಡೂರು ಗ್ರಾಮದಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಕಾಂಗ್ರೆಸ್ ಪಕ್ಷದಿಂದ ಹಮ್ಮಿಕೊಂಡಿರುವ ಪಾದಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಬಿಜೆಪಿ, ಆರ್‌ಎಸ್‌ಎಸ್ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿಲ್ಲ. ಹೆಡ್ಗೆವಾರ್, ಗೋಳ್ವಾಲ್ಕರ್, ಸಾವರ್ಕರ್, ಬ್ರಿಟಿಷರ ವಿರುದ್ಧ ಯಾವುದೇ ಹೋರಾಟ ನಡೆಸುವುದಿಲ್ಲ ಎಂದು ಕೈಕಟ್ಟಿ ನಿಂತು ಮುಚ್ಚಳಿಕೆ ಬರೆದು ಕೊಟ್ಟು ಜೈಲಿನಿಂದ ಬಿಡುಗಡೆ ಹೊಂದಿದವರು. ಅವರನ್ನು ಬಿಜೆಪಿ, ಆರ್‌ಎಸ್‌ಎಸ್‌ನವರು ವೀರ ಸಾವರ್ಕರ್ ಎಂದು ಕರೆಯುತ್ತಾರೆ. ಅಲ್ಲದೆ ತ್ರಿವರ್ಣ ಧ್ವಜವನ್ನು ರಾಷ್ಟ್ರ ಧ್ವಜವೆಂದು ಮಾನ್ಯತೆ ನೀಡಬಾರದು ಎಂಬುದು ಆರ್‌ಎಸ್‌ಎಸ್ ನಿಲುವಾಗಿತ್ತು ಈ ಬಗ್ಗೆ ಆರ್‌ಎಸ್‌ಎಸ್ ಒಡೆತನದ ಪತ್ರಿಕೆ 'ಆರ್ಗನೈಸರ್' ವರದಿ ಮಾಡಿದೆ. ಅಲ್ಲದೆ ಆರ್‌ಎಸ್‌ಎಸ್‌ನ ನಾಗ್ಪುರ ಕಚೇರಿ ಮೇಲೆ ಕಳೆದ 52 ವರ್ಷಗಳಿಂದಲೂ ಸಹ ತ್ರಿವರ್ಣಧ್ವಜ ಹಾರಿಸದೆ



ಭಾಗವಧ್ವಜ ಹಾರಿಸುತ್ತಿದ್ದರು. ಈಗ ಪ್ರಧಾನಿ ಮೋದಿ, ಬಿಜೆಪಿ ನಾಯಕರು ದೇಶಭಕ್ತಿ ಹೆಸರಲ್ಲಿ 'ಹರ್ ಘರ್ ತಿರಂಗೆ'ಮೆಂದು ನಾಟಕ ಪ್ರಾರಂಭಿಸಿದ್ದಾರೆ. ಈ ಕರೆ ನೀಡುವುದಕ್ಕೆ ನಾಚಿಕೆಯಾಗುವುದಿಲ್ಲವೇ? ಪ್ರಧಾನಿ ಮೋದಿ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಮಾಡುವ ಬದಲು 'ಸಬ್ ಕಾ ಸರ್ವನಾಶ್' ಮಾಡಲು ಹೊರಟಿದ್ದಾರೆ ಎಂದು ಟೀಕಾಪ್ರಹಾರ ನಡೆಸಿದರು.

ಕಾಂಗ್ರೆಸ್ ಪಕ್ಷ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಹೋರಾಟ ನಡೆಸಿದ ಪಕ್ಷ. ಕಾಂಗ್ರೆಸ್‌ನ ನಾಯಕರು ಜೈಲು ಸೇರಿ, ದೇಶಕ್ಕಾಗಿ ಪ್ರಾಣ ಅರ್ಪಿಸಿ, ಆಸ್ತಿಪಾಸ್ತಿ ಕಳೆದುಕೊಂಡು ಹೋರಾಟ ನಡೆಸಿ ಬ್ರಿಟಿಷರ ಆಳ್ವಿಕೆಯನ್ನು ಕೊನೆಗಾಣಿಸಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಜೊತೆಗೆ ದೇಶದ ಒಳಿತಿಗಾಗಿ ಕೆಲಸ ಮಾಡಿದ ಪಕ್ಷವಾಗಿದೆ. ಈ ದೇಶಕ್ಕೆ ಬಿಜೆಪಿ ಕೊಡುಗೆ ಏನು? ಈ ಮಹನೀಯರ ತ್ಯಾಗ ಬಲಿದಾನ ನೆನಪಿಸಿ, ಗೌರವ ಸಲ್ಲಿಸುವ ಸಲುವಾಗಿ ಮತ್ತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಎಐಸಿಸಿಯಿಂದ ದೇಶದೆಲ್ಲೆಡೆ ಪಾದಯಾತ್ರೆ ನಡೆಸಲಾಗುತ್ತಿದೆ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್.ಧ್ರುವನಾರಾಯಣ್ ಮಾತನಾಡಿ, ಕಳೆದ 8 ವರ್ಷದ ಆಳ್ವಿಕೆಯಲ್ಲಿ ಬಿಜೆಪಿ ಕೊಡುಗೆ ಶೂನ್ಯ. ಬಡತನ ರೇಖೆ ಪಾತಾಳಕ್ಕಿಳಿದಿದೆ. ಹಸಿವಿನ ಪ್ರಮಾಣ ಹೆಚ್ಚಾಗಿದೆ ಎಂದ ಅವರು, ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಮಾಡಿದ ವರುಣಾ ಕ್ಷೇತ್ರ ಪುಣ್ಯಭೂಮಿಯಾಗಿದ್ದು, ಈ ಬಾರಿ ಈ ಕ್ಷೇತ್ರದಿಂದಲೇ ಸ್ಪರ್ಧಿಸಬೇಕೆಂದು ಕಾರ್ಯಕರ್ತರ ಅಭಿಪ್ರಾಯ ಎಂದರು.

ಈ ವೇಳೆ ಶಾಸಕರಾದ ಪುಟ್ಟರಂಗಶೆಟ್ಟಿ, ಶಾಸಕ ಯತೀಂದ್ರ ಸಿದ್ದರಾಮಯ್ಯ, ಅನಿಲ್ ಚಿಕ್ಕಮಾದು ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಿಧಾನಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವ ರಾಜು, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಕೆಪಿಸಿಸಿ ಕಾರ್ಯದರ್ಶಿ ಗುರುಪಾದ ಸ್ವಾಮಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಆರ್. ಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಮುಖಂಡರಾದ ಸುನೀಲ್ ಬೋಸ್, ಇಂಧನ್ ಬಾಬು, ಲತಾ ಸಿದ್ದಶೆಟ್ಟಿ, ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಗ್ರಾಪಂ ಅಧ್ಯಕ್ಷೆ ಸರಸ್ವತಿ ಮಹೇಶ್ ಸೇರಿದಂತೆ ಹಲವರಿದ್ದರು.

> ಬಿಜೆಪಿ ಪಕ್ಷ, ಸಂಘ ಪರಿವಾರಗಳು ಹಿಂದೂ ಧರ್ಮ, ನಕಲಿ ದೇಶಭಕ್ತಿಯ ಹೆಸರಿನಲ್ಲಿ ಸಂವಿಧಾನದ ಆಶಯಗಳಿಗೆ ಭಂಗ ತಂದು ಸ್ವಾತಂತ್ರ್ಯಕ್ಕೆ ಗಂಡಾಂತರ ತರುವ ಕೆಲಸ ಮಾಡುತ್ತಿವೆ. ಇಂತಹ ಕೋಮುಶಕ್ತಿಗಳ ವಿರುದ್ಧ ಜನರು ಜಾಗೃತಿಗೊಂಡು ಹೋರಾಟ ನಡೆಸಬೇಕಿದೆ. ಗಾಮೀಣ ಜನರ ಗಮನ ಸೆಳೆಯುವ ಸಲುವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ
> **-ಹೆಚ್.ಸಿ.ಮಹದೇವಪ್ಪ,** ಮಾಜಿ ಸಚಿವ.

ಅಂಗನವಾಡಿ ಕಟ್ಟಡಕ್ಕೆ ಆಗ್ರಹಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಆ.8– ಆನೆ ದಾಳಿಗೆ ಅಂಗನವಾಡಿ ಕಟ್ಟಡ ಕುಸಿದಿರುವ ಘಟನೆ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ಮಾನಿಮೂಲೆ ಹಾಡಿಯಲ್ಲಿ ನಡೆದಿದ್ದು, ನೂತನ ಅಂಗನವಾಡಿ ಕಟ್ಟಡ ನಿರ್ಮಿಸಿ ಕೊಡುವಂತೆ ಒತ್ತಾಯಿಸಿ ಹಾಡಿ ಆದಿವಾಸಿ ಮಹಿಳೆಯರು ಅಂಗನವಾಡಿ ಎದುರು ಅಖಿಲ ಭಾರತ ಜನ ಅಧಿಕಾರ ಸುರಕ್ಷಾ ಸಮಿತಿ ಸಹಯೋಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಆದಿವಾಸಿ ಮಹಿಳೆ ರತ್ನಮ್ಮ ಮಾತನಾಡಿ, ಕಳೆದ 10 ವರ್ಷಗಳಿಂದ ಹಾಡಿಗೆ ಹೊಸ ಅಂಗನವಾಡಿ ಕಟ್ಟಡ ನಿರ್ಮಿಸಿ ಕೊಡುವಂತೆ ಹಲವು ಬಾರಿ ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಮನವಿ ಮಾಡಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. 10 ವರ್ಷಗಳ ಹಿಂದೆ ಡೀಡ್ ಸಂಸ್ಥೆಯವರು ಮಣ್ಣಿನಿಂದ ನಿರ್ಮಿಸಿದ ಸಣ್ಣ ಮನೆಯಲ್ಲಿ ಹಾಡಿ ಮಕ್ಕಳಿಗಾಗಿ ಅಂಗನವಾಡಿ ತೆರೆಯಲು ಅವಕಾಶ ಮಾಡಿಕೊಟ್ಟಿದ್ದರು. ಅದೇ ಮನೆಯಲ್ಲಿ ಹತ್ತಾರು ವರ್ಷಗಳಿಂದ ಅಂಗನವಾಡಿ ನಡೆದುಕೊಂಡು ಬರುತ್ತಿದೆ. ಆದರೆ ಮಳೆ ಹಾನಿ ಹಾಗೂ ಆನೆ ದಾಳಿಯಿಂದ ಹಾಳಾಗುತ್ತಲೇ ಬರುತ್ತಿದೆ. ಹಾನಿ ಆದ ಸಂದರ್ಭ ಆದಿವಾಸಿಗಳೇ ಸೇರಿ ಸರಿಪಡಿಸಿಕೊಂಡು ನಮ್ಮ ಮಕ್ಕಳ ಭವಿಷ್ಯಕೋಸ್ಕರ ಆ ಕಟ್ಟಡ ಉಳಿಸಿಕೊಂಡು ಬರುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಹಾಡಿಯಲ್ಲಿ ನೂತನ ಅಂಗನವಾಡಿ ಕಟ್ಟಡ ನಿರ್ಮಿಸಿಕೊಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ಕಚೇರಿ ಎದುರು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಅವರು, ಈಗಿರುವ ಅಂಗನವಾಡಿ ಕಟ್ಟಡ ಅರ್ಧ ಭಾಗದಷ್ಟು ಕುಸಿದಿದೆ. ಹಾಗಾಗಿ ಅಂಗನವಾಡಿಯಲ್ಲಿ ಮಕ್ಕಳನ್ನು ಕೂರಿಸಿಕೊಂಡು ಪಾಠ ಪ್ರವಚನ ನಡೆಸಲು ಸಾಧ್ಯವಾಗುತ್ತಿಲ್ಲ. ಜೊತೆಗೆ ಸರ್ಕಾರ ಆದಿವಾಸಿ ಕುಟುಂಬಗಳಿಗೆ ನೀಡುವ ಪೌಷ್ಟಿಕ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಕೂಡ ಸಾಧ್ಯವಾಗುತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ಮಾನಿಮೂಲೆ ಹಾಡಿಯ ಸರೋಜ, ಗಂಗೆ, ಮಂಜುಳ, ರತ್ನ, ಸುರೇಶ್, ರವಿ, ಜನ ಅಧಿಕಾರ ಸುರಕ್ಷಾ ಸಮಿತಿ ಸಂಚಾಲಕ ಸುನೀಲ್ ಇತರರಿದ್ದರು.

ಮಗುವಿನ ಲಾಲನೆ ಪಾಲನೆಗೆ ಒತ್ತು ನೀಡಿ

ತಾಲೂಕು ಆರೋಗ್ಯ ಅಧಿಕಾರಿ ಡಾ.ರವಿಕುಮಾರ್ ಸಲಹೆ



ಸರಗೂರು, ಆ.8– ತಾಯಂದಿರು ಮಗುವಿನ ಲಾಲನೆ ಪಾಲನೆ, ಆರೋಗ್ಯದ ಬೆಳವಣಿಗೆಗೆ ಹೆಚ್ಚು ಒತ್ತು ನೀಡಬೇಕು. ಮಗುವಿಗೆ ಎದೆ ಹಾಲನ್ನು ಕಡ್ಡಾಯವಾಗಿ ಕುಡಿಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಸಲಹೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಜಿಪಂ ಮತ್ತು ಯುನಿಸೆಫ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಶು ಅಭಿವೃದ್ಧಿ ಯೋಜನೆ ಇಲಾಖೆ, ತಾಪಂ ಸಹಯೋಗದಲ್ಲಿ ನಡೆದ ಸೀಮಂತ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತದಲ್ಲಿ ಹಿಂದೂ ಸಂಸ್ಕೃತಿ ಬಹಳ ಮಹತ್ವ ಹೊಂದಿದ್ದು, ಆ ನಿಟ್ಟಿನಲ್ಲಿ ಗರ್ಭಿಣಿಯರಿಗೆ ಸೀಮಂತ ಕಾರ್ಯವನ್ನು ಸಂಭ್ರಮದಿಂದ ಮಾಡುತ್ತಾರೆ. ಇದರಿಂದಾಗಿ ಹುಟ್ಟುವ ಮಗು ಆರೋಗ್ಯವಾಗಿರುತ್ತದೆ. ಈ ಕಾರ್ಯಕ್ರಮಕ್ಕೆ ಇಲಾಖೆಯು ಪ್ರೋತ್ಸಾಹ ನೀಡುತ್ತಿದೆ ಎಂದರು.

ಗರ್ಭಿಣಿಯರು ಪ್ರತಿ ತಿಂಗಳು ಆಸ್ಪತ್ರೆಗೆ ಭೇಟಿ ನೀಡಿ, ತಪಾಸಣೆಗೆ ಒಳಗಾಗಬೇಕು. ಹೆರಿಗೆ ಹತ್ತಿರವಾಗುತ್ತಿದ್ದಂತೆ ಸೂಕ್ಷ್ಮವಾಗಿ ಮಗುವಿನ ಬೆಳವಣಿಗೆ ಗಮನಿಸಬೇಕು. ಎದೆಹಾಲು ಕುಡಿಸುವ ವಿಧಾನವನ್ನು ಸರಿಯಾಗಿ ತಿಳಿದುಕೊಳ್ಳಬೇಕು ಎಂದರು.

ಜಿಪಂ ಯುನಿಸೆಫ್ ವಿಭಾಗೀಯ ಸಂಯೋಜಕ ಡಾ.ರವೀಶ್ ಮಾತನಾಡಿ, ಹೆರಿಗೆಯಾದ ಒಂದು ಗಂಟೆಯೊಳಗೆ ತಾಯಿ ಮಗುವಿಗೆ ಎದೆ ಹಾಲನ್ನು ಕುಡಿಸಬೇಕು. ಮೊದಲು ಬರುವ ಗಿಣ್ಣು ಹಾಲಿನಲ್ಲಿ ಕೊಲೆಸ್ಟ್ರಾಲ್ ಅಂಶ ಇರುವುದರಿಂದ ಮಗುವಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. 6 ತಿಂಗಳು ತಾಯಿ ಹಾಲನ್ನು ಬಿಟ್ಟು ಯಾವುದೇ ಆಹಾರ ನೀಡಬಾರದು ಎಂದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಆಶಾ ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಲೂಕಿನ 30 ಗರ್ಭಿಣಿಯರಿಗೆ ಕುಂಕುಮ, ಬಳೆ, ಹಣ್ಣು, ಎಲೆ, ಅಡಿಕೆ ನೀಡಿ ಸೀಮಂತ ಶಾಸ್ತ್ರ ಮಾಡಲಾಯಿತು. ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಇಲಾಖಾ ಸಿಬ್ಬಂದಿ, ಗರ್ಭಿಣಿಯರು ಹಾಜರಿದ್ದರು.

ಕಪಿಲೆ ವ್ಯಾಪ್ತಿಯಲ್ಲಿ ಮತ್ತೆ ಪ್ರವಾಹ ಭೀತಿ



ನಂಜನಗೂಡು, ಆ.8–ಕೇರಳದ ವೈನಾಡು ಸೇರಿದಂತೆ ನದಿ ಪಾತ್ರದಲ್ಲಿ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕಪಿಲೆ ಮೈದುಂಬಿ ಹರಿಯುತ್ತಿದ್ದು, ಮತ್ತೆ ಪ್ರವಾಹದ ಭೀತಿ ಎದುರಾಗಿದೆ.

ಜುಲೈ ತಿಂಗಳಲ್ಲೇ ಕಬಿನಿ ಜಲಾಶಯ ಭರ್ತಿಯಾಗಿತ್ತು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಬಾಗಿನ ಅರ್ಪಿಸಿದ್ದರು. ಸದ್ಯ ಕೇರಳದ ವೈನಾಡಿನಲ್ಲಿ ಮಳೆ ಮುಂದುವರೆದಿದ್ದು, ಜಲಾಶಯಕ್ಕೆ ಒಳಹರಿವು ಹೆಚ್ಚಿದೆ. ಮುನ್ನೆಚ್ಚರಿಕಾ ಕ್ರಮವಾಗಿ ನದಿಗೆ 25 ಸಾವಿರ ಕ್ಯುಸೆಕ್ ನೀರನ್ನು ಬಿಡಲಾಗಿದೆ.

ಇದರಿಂದ ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಸ್ನಾನಘಟ್ಟ ಸಂಪೂರ್ಣ ಮುಳುಗಡೆಯಾಗಿದೆ. ಅಲ್ಲದೆ ಸ್ನಾನ ಘಟ್ಟದ ಬಳಿಯ ಮಂಟಪಗಳು ಹಾಗೂ ಭಕ್ತರು ಬಟ್ಟೆ ಬದಲಿಸುವ ಶೆಡ್ಡುಗಳು ಜಲಾವೃತವಾಗಿವೆ. ಐತಿಹಾಸಿಕ 16 ಕಾಲು ಮಂಟಪ ಕೂಡ ಭಾಗಶಃ ಮುಳುಗಡೆಯಾಗಿದೆ. ನದಿಯಲ್ಲಿ ಪ್ರವಾಹ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭಕ್ತರ ಪುಣ್ಯಸ್ನಾನಕ್ಕೆ ನಿರ್ಬಂಧ ಹೇರಲಾಗಿದೆ.

ಶ್ರಾವಣ ಪೂಜೆ ರದ್ದು: ನದಿ ನೀರಿನ ಮಟ್ಟ ಹೆಚ್ಚಳದಿಂದ ಪುರಾಣ ಪ್ರಸಿದ್ಧ ಶ್ರೀಪರಶುರಾಮ ದೇವಾಲಯದಲ್ಲಿಂದು ನಡೆಯಬೇಕಿದ್ದ ಶ್ರಾವಣ ಮಾಸದ ಪೂಜೆ ರದ್ದಾಗಿದೆ. ಆದರೂ ಸಹ ಭಕ್ತರು ನೀರಿನಲ್ಲೇ ಸಾಗಿ ದೇವಾಲಯದ ಸುತ್ತಮುತ್ತ ಪೂಜೆ ಸಲ್ಲಿಸುತ್ತಿರುವುದು ಕಂಡು ಬಂತು. ನದಿಯ ನೀರಿನ ಮಟ್ಟ ಈ ರೀತಿ ಹೆಚ್ಚಾದರೆ ನಗರದ ಹಲವಾರು ಬಡಾವಣೆಗಳು ಪ್ರವಾಹದಿಂದ ಮುಳುಗಡೆಯಾಗುವ ಸಂಭವವಿದ್ದು, ಜನರು ಆತಂಕಗೊಂಡಿದ್ದಾರೆ.

ತ್ರಿವೇಣಿ ಸಂಗಮದಲ್ಲಿ ಕಾವೇರಿ, ಕಪಿಲಾ ಕಲರವ

ತಿ.ನರಸೀಪುರ, ಆ.8– ಕೃಷ್ಣರಾಜಸಾಗರ ಜಲಾಶಯದಿಂದ ನದಿಗೆ 1 ಲಕ್ಷ ಕ್ಯೂಸೆಕ್ ನೀರು ಹೊರ ಬಿಟ್ಟಿರುವುದರಿಂದ ತಿ.ನರಸೀಪುರದ ತ್ರಿವೇಣಿ ಸಂಗಮ ಮೈದುಂಬಿದ್ದು, ಕಾವೇರಿ–ಕಪಿಲಾ ನದಿ ಸೊಬಗು ನೋಡುಗರ ಮನ ಸೆಳೆಯುತ್ತಿದೆ.



ನದಿ ಮಧ್ಯ ಭಾಗದಲ್ಲಿರುವ ನಡುಹೊಳೆ ಬಸಪ್ಪ ಸಂಪೂರ್ಣ ಮುಳುಗಡೆಯಾಗಿದ್ದು, ತುಂಬಿ ಹರಿಯುತ್ತಿರುವ ಕಾವೇರಿ–ಕಪಿಲಾ ನದಿ ಸೊಬಗನ್ನು ನೋಡಲು ಸಾರ್ವಜನಿಕರು ತಂಡೋಪತಂಡವಾಗಿ ಹರಿದು ಬರುತ್ತಿದ್ದಾರೆ. ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯದ ಮುಂಭಾಗ ನದಿಗೆ ನಿರ್ಮಿಸಲಾಗಿರುವ ಸೋಪಾನಕಟ್ಟೆ ತುಂಬಲು ಕೆಲವೇ ಮೆಟ್ಟಿಲುಗಳಿದ್ದು, ಇನ್ನೂ ಹೆಚ್ಚಿನ ನೀರು ನದಿಗೆ ಹರಿದು ಬಂದಲ್ಲಿ ಮೆಟ್ಟಿಲುಗಳು ತುಂಬಿ ದೇವಾಲಯದ ಆವರಣಕ್ಕೆ ಹರಿದು ಬರಲಿದೆ. ಸಂಜೆಯಾಗುತ್ತಿದ್ದಂತೆ ಕುಟುಂಬ ಸಮೇತ ಆಗಮಿಸುತ್ತಿರುವ ಸಾರ್ವಜನಿಕರು ಭೋರ್ಗರೆದು ಹರಿಯುತ್ತಿರುವ ರುದ್ರರಮಣೀಯ ದೃಶ್ಯ ಸವಿಯಲು ಹಾಗೂ ಸೆಲ್ಫಿಗಾಗಿ ಮುಗಿ ಬೀಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ.



ಪಿರಿಯಾಪಟ್ಟಣ ತಾಲೂಕು ಗ್ರಾಮೀಣ ನೀರು ಸರಬರಾಜು ಸ್ವಚ್ಛತಾ ಇಲಾಖೆ ನೂತನ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಜಿ. ಮಹೇಶ್ ಅಧಿಕಾರ ವಹಿಸಿಕೊಂಡರು. ಈ ವೇಳೆ ನಿವೃತ್ತರಾದ ಎನ್.ಪ್ರಭು, ಇಲಾಖೆಯ ಇಂದ್ರೇಶ್ ಹಾಗೂ ಇತರರಿದ್ದರು.

ಎಂ.ಎಸ್.ಗುರುಪಾದಸ್ವಾಮಿ ಕಳಂಕರಹಿತ ರಾಜಕಾರಣಿ

100ನೇ ಜನ್ಮ ದಿನಾಚರಣೆಯಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಮಾಲಂಗಿ ಪ್ರಭು ಸ್ಮರಣೆ



ತಿ.ನರಸೀಪುರ, ಆ.8– ಕೇಂದ್ರದ ಮಾಜಿ ಸಚಿವ ದಿ.ಎಂ.ಎಸ್. ಗುರುಪಾದ ಸ್ವಾಮಿ ಅವರು ಕಳಂಕರಹಿತ ರಾಜಕಾರಣಿಯಾಗಿದ್ದು, ಸ್ವಾತಂತ್ರ್ಯ ಹೋರಾಟ ಸೇರಿದಂತೆ ಸಮಾಜ ಸೇವೆಗಳಲ್ಲಿ ತೊಡಗಿ, ತಮ್ಮದೇ ಛಾಪು ಮೂಡಿಸಿದ್ದರು ಎಂದು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಮಾಲಂಗಿ ಪ್ರಭು ಸ್ಮರಿಸಿದರು. ಎಂ.ಎಸ್.ಗುರುಪಾದ ಸ್ವಾಮಿ ಅವರ 100ನೇ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಮಲ್ಲನಮೂಲೆಯಲ್ಲಿರುವ ಅವರ ಸಮಾಧಿಗೆ ಭೇಟಿ ನೀಡಿ, ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ತಾಲೂಕಿನ ಮಾಲಂಗಿ ಗ್ರಾಮದಲ್ಲಿ 1922 ಆ.7ರಂದು ಜನಿಸಿದ ಎಂ.ಎಸ್.ಗುರುಪಾದಸ್ವಾಮಿ ಅವರು ಕೃಷಿ ಹಿನ್ನೆಲೆಯಿಂದ ಬಂದವರು. 1952 ಮತ್ತು 57ರಲ್ಲಿ ಮೊದಲ ಬಾರಿಗೆ ಸಂಸತ್ ಸದಸ್ಯರಾಗಿ ಆಯ್ಕೆಯಾಗಿ, 1960–66 ಹಾಗೂ 1984 ರಲ್ಲಿ ರಾಜ್ಯಸಭೆಗೆ ಚುನಾಯಿತರಾಗಿದ್ದರು. 1971–72ರಲ್ಲಿ ರಾಜ್ಯಸಭೆ ಪ್ರತಿಪಕ್ಷ ನಾಯಕ, 1984ರಲ್ಲಿ ಜನತಾಪಕ್ಷದ ನಾಯಕ, 1989ರಿಂದ 1990ರವರೆಗೆ ರಾಜ್ಯಸಭೆಯಲ್ಲಿ ಸೇವೆ ಸಲ್ಲಿಸಿದರು. ಇಂದಿರಾಗಾಂಧಿ ಸಂಪುಟದಲ್ಲಿ ಗುರುಪಾದಸ್ವಾಮಿ ಅವರು ಪರಮಾಣು, ಇಂಧನ, ಆಹಾರ ಮತ್ತು ಕೃಷಿ ಅಭಿವೃದ್ಧಿ, ಸಹಕಾರ ಸಚಿವರಾಗಿ ಉತ್ತಮ ಆಡಳಿತ ನೀಡುವಲ್ಲಿ ಯಶಸ್ವಿಯಾಗಿದ್ದರು. ಕಳಂಕರಹಿತ ರಾಜಕಾರಣಿಯಾಗಿದ್ದ ಅವರು ಗ್ರಾಮಕ್ಕೆ ನೀಡಿದ ಕೊಡುಗೆ ಅಪಾರ. ರಾಜ್ಯಕ್ಕೆ ಇನ್ನೂ ಹಲವಾರು ವರ್ಷಗಳ ಕಾಲ ಅವರ ಸೇವೆ ಅಗತ್ಯತೆ ಇತ್ತು ಎಂದರು. ಹಿರಿಯ ಪಶು ವೈದ್ಯಕೀಯ ಪರೀಕ್ಷಕ ಎಂ.ಕೆ.ಗಣೇಶ್ ಮೂರ್ತಿ ಮಾತನಾಡಿದರು. ಗ್ರಾಮದ ಮುಖಂಡ ಎಂ.ಜೆ.ಶಿವಸ್ವಾಮಿ ಗ್ರಾಮದ ಯಜಮಾನರು, ಮುಖಂಡರು ಹಾಜರಿದ್ದರು.

ಹಂದಿ ಜೋಗಿಗಳ ಜಾಗ ಕಬಳಿಸುವ ಹುನ್ನಾರ

ಹೆಚ್.ವಿಶ್ವನಾಥ್ ಗಂಭೀರ ಆರೋಪ



ಪಿರಿಯಾಪಟ್ಟಣ, ಆ.8– ಪಟ್ಟಣದಲ್ಲಿ ವಾಸಿಸುತ್ತಿರುವ ಹಂದಿ ಜೋಗಿಗಳ ಕುಟುಂಬಗಳಿಗೆ ಮೂಲ ಸೌಲಭ್ಯ ಒದಗಿಸುವಂತೆ ಹತ್ತಾರು ಬಾರಿ ಪತ್ರ ಬರೆದರೂ, ಇಲ್ಲಿನ ಪುರಸಭಾ ಮುಖ್ಯಾಧಿಕಾರಿ ಎ.ಟಿ.ಪ್ರಸನ್ನ ಮೂಲ ಸೌಲಭ್ಯ ಕಲ್ಪಿಸದೆ, ಜಾಗವನ್ನು ಕೊಳಗೇರಿ ಅಭಿವೃದ್ಧಿ ಮಂಡಳಿಗೂ ಸೌಲಭ್ಯ ಹಸ್ತಾಂತರಿಸದೆ ಭೂಗಳ್ಳರೊಂದಿಗೆ ಸೇರಿ ಹಂದಿ ಜೋಗಿಗಳ ಜಾಗ ಕಬಳಿಸಲು ಹುನ್ನಾರ ನಡೆಸುತ್ತಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಗಂಭೀರ ಆರೋಪಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಹೃದಯ ಭಾಗದಲ್ಲಿ ಕಳೆದ 70 ವರ್ಷಗಳಿಂದ 38 ಹಂದಿ ಜೋಗಿ ಕುಟುಂಬಗಳು ವಾಸಿಸುತ್ತಿದ್ದು, 2001ರಲ್ಲಿ ಅಂದಿನ ಮೈಸೂರು ಜಿಲ್ಲಾಧಿಕಾರಿಗಳು ಭೇಟಿ ನೀಡಿ, ಈ ಪ್ರದೇಶವನ್ನು ಕೊಳಚೆ ಪ್ರದೇಶ ಎಂದು ಘೋಷಿಸಿ 38 ಕುಟುಂಬಗಳಿಗೆ ಪುರಸಭೆಯಿಂದ ಹಕ್ಕುಪತ್ರ ನೀಡುವ ಮೂಲಕ ಈ ಸ್ಥಳವನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಅಭಿವೃದ್ಧಿಪಡಿಸಿ, ಜನರಿಗೆ ಮೂಲ ಸೌಲಭ್ಯ ಕಲ್ಪಿಸಲು ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತರು ಮತ್ತು ತಾಂತ್ರಿಕ ನಿರ್ದೇಶಕರ ಸಲಹೆಯಂತೆ ಆದೇಶಿಸಿದ್ದಾರೆ. ಆದರೆ ಇಲ್ಲಿನ ಪುರಸಭಾಧಿಕಾರಿಗಳು 2001ರಿಂದ ಇಂದಿನವರೆಗೂ ತಾವೂ ಮೂಲ ಸೌಲಭ್ಯ ಕಲ್ಪಿಸದೆ ಇತ್ತ ಕೊಳಗೇರಿ ಅಭಿವೃದ್ಧಿ ಮಂಡಳಿಗೂ ಅಭಿವೃದ್ಧಿ ಪಡಿಸಲು ಅವಕಾಶ ನೀಡದೆ ಭೂಗಳ್ಳರೊಂದಿಗೆ ಸೇರಿ ಜಾಗ ಕಬಳಿಸಲು ಸಂಚು ರೂಪಿಸಿ ಈ ಜನರನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದರು.

ಯಾವುದೇ ಒಬ್ಬ ವ್ಯಕ್ತಿ 12 ವರ್ಷಗಳ ಕಾಲ ಒಂದೇ ಸ್ಥಳದಲ್ಲಿ ವಾಸವಿದ್ದರೆ, ಆ ಜಾಗದ ಮಾಲೀಕತ್ವಕ್ಕೆ ಆತ ಅರ್ಹರಾಗಿರುತ್ತಾನೆ. ಹಂದಿಜೋಗಿ ಕುಟುಂಬಗಳ ವಿರುದ್ಧ ಯಾರೇ ಇದ್ದರೂ ಅಂತಹವರ ವಿರುದ್ಧ ಕಾನೂನು ರೀತಿ ಹೋರಾಟ ನಡೆಸಿ ನ್ಯಾಯ ದೊರಕಿಸಿ ಕೊಡುತ್ತೇನೆ ಎಂದರು.

ಹಂದಿ ಜೋಗಿಗಳು ವಾಸಿಸುತ್ತಿರುವ 1.7 ಎಕರೆ ಜಾಗದಲ್ಲಿ 38 ಕುಟುಂಬಗಳಿಗೆ ಪುರಸಭಾವತಿಯಿಂದ ಹಕ್ಕುಪತ್ರ ನೀಡಿ ದ್ದರೂ, 2008ರಲ್ಲಿ ಸತ್ತಿರುವ ಅಪರಿಚಿತ ವ್ಯಕ್ತಿ ಹೆಸರಿನಲ್ಲಿ ಈ ಜಾಗಕ್ಕೆ ಅಕ್ರಮ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಅಲ್ಲದೆ, ಮತ್ತೊಂದು ಸುಳ್ಳು ದಾಖಲೆ ಸೃಷ್ಟಿಸಿ ಅಪರಿಚಿತ ವ್ಯಕ್ತಿಯ ಹೆಂಡತಿ ನಾನೇ ಎಂದು ಒಬ್ಬ ಮಹಿಳೆಯನ್ನು ಕರೆತಂದು ಈ ಜಾಗವನ್ನು ಕಬಳಿಸಲು ಸ್ಥಳೀಯ ಕೆಲ ಪ್ರಭಾವಿ ವ್ಯಕ್ತಿಗಳು ಸಹಕಾರ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಅದನ್ನು ಬಹಿರಂಗಪಡಿಸಲಾಗುವುದು. ಈ ಜಾಗ ಸರ್ಕಾರದ ಆಸ್ತಿ ಎಂಬುದಕ್ಕೆ ಹಂದಿಜೋಗಿ ಕುಟುಂಬಗಳ ಬಳಿ ಸೂಕ್ತ ದಾಖಲಾತಿಗಳಿದ್ದು, ಸ್ಲಂ ಬೋರ್ಡ್ ಅಧಿಕಾರಿಗಳಿಗೆ ಇಲ್ಲಿನ ಸಮಸ್ಯೆಗಳ ಬಗ್ಗೆ ವಿವರಣೆ ನೀಡಿದ್ದೇನೆ. ಶೀಘ್ರದಲ್ಲೇ ಸ್ಥಳಕ್ಕಾಗಮಿಸಿ ಅಭಿವೃದ್ಧಿಗೆ ಒತ್ತು ನೀಡಿ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಡುವುದಾಗಿ ತಿಳಿಸಿದ್ದಾರೆ.

ಯುವ ಮುಖಂಡ ನೇರಳೆಕುಪ್ಪೆ ನವೀನ್ ಮಾತನಾಡಿ, ಹಂದಿಜೋಗಿ ಕಾಲೋನಿ ನಿವಾಸಿಗಳಿಗೆ ಮೂಲ ಸೌಕರ್ಯ ನೀಡುವ ತನಕ ನಮ್ಮ ಹೋರಾಟ ನಿಲ್ಲುವುದಿಲ್ಲ. ಅವರು ವಾಸಿಸುತ್ತಿರುವ ಸ್ಥಳ ಸರ್ಕಾರದ ಆಸ್ತಿ ಎಂಬುದಕ್ಕೆ ನಮ್ಮ ಬಳಿ ದಾಖಲೆಗಳಿವೆ. ಖಾಸಗಿ ವ್ಯಕ್ತಿಗಳು ಕಬಳಿಸಲು ಬಿಡುವುದಿಲ್ಲ. ಭೂಗಳ್ಳರಿಗೆ ಎಷ್ಟೇ ರಾಜಕೀಯ ಪ್ರಭಾವವಿದ್ದರೂ, ಯಾವುದೇ ಬೆದರಿಕೆ ಒಡ್ಡಿದರೂ ನಾವು ಹೋರಾಟದಿಂದ ಹಿಂದೆ ಸರಿಯುವುದಿಲ್ಲ ಎಂದರು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಆ. 8– ಮೈಸೂರಿನ ಪುಣ್ಯಕೋಟಿ ಸೇವಾ ಟ್ರಸ್ಟ್ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿಜಯನಗರ 1 ಮತ್ತು 2ನೇ ಹಂತದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

ಅರ್ಹ ವಿದ್ಯಾರ್ಥಿಗಳು ಆ. 15 ರೊಳಗೆ ಅರ್ಜಿ, ಭಾವಚಿತ್ರ, ಆಧಾರ್ ಕಾರ್ಡ್ ನಕಲು ಮತ್ತು ಅಂಕ ಪಟ್ಟಿ ನಕಲಿನೊಂದಿಗೆ ಟ್ರಸ್ಟ್‌ಗೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9242941216, 9986138944 ಸಂಪರ್ಕಿಸಬಹುದು.

ಕೊಡಗು ಮೂಲದ ದಂತ ವೈದ್ಯೆ, ಪುತ್ರಿಯ ಅನುಮಾನಾಸ್ಪದ ಸಾವು



ಬೆಂಗಳೂರು: ನಗರದ ಬನಶಂಕರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೊಡಗು ಮೂಲದ ದಂತ ವೈದ್ಯೆ ಮತ್ತು ಇವರ ಪುತ್ರಿಯ ಶವಗಳು ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಸಾವಿನ ಸುತ್ತ ಅನುಮಾನದ ಹುತ್ತ ಬೆಳೆದಿದೆ.

ವಿರಾಜಪೇಟೆ ಮೂಲದ ಡಾ.ಶೈಮಾ ಮುತ್ತಪ್ಪ(39) ಮತ್ತು ಇವರ ಮಗಳು ಆರಾಧನಾ(10) ಮೃತ ದುರ್ದೈವಿಗಳು. ಶನಿವಾರ ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ. ಶೈಮಾರ ಪತಿ ಡಾ. ನಾರಾಯಣ್ ಕೂಡ ದಂತ ವೈದ್ಯರು. ಇವರಿಬ್ಬರೂ ಓದುವಾಗಲೇ ಪರಸ್ಪರ ಪ್ರೀತಿಸಿ, ಮದುವೆಯಾಗಿದ್ದರು.

ಮನೆಯಲ್ಲಿ ಯಾರೂ ಇಲ್ಲದ ವೇಳೆ ಶೈಮಾ ಮತ್ತು ಮಗು ಮೃತಪಟ್ಟಿದ್ದಾರೆ. ಸಹೋದರ ಬಂದು ಬನಶಂಕರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಪ್ರಮಾಣ ಪತ್ರ

ಮೈಸೂರಿನ ಬೆಳವಾಡಿಯ ಸರ್ಕಾರಿ ಸ್ಕೂಲ್ ಹಿಂಭಾಗ, 3ನೇ ಮೇನ್, ಮನೆ ನಂ. 276, ವೆಂಕಟೇಶ್ವರ ನಿಲಯ, 1ನೇ ಫ್ಲೋರ್, 1ನೇ ಮೇನ್‌ನಲ್ಲಿ ವಾಸವಿರುವ ಶ್ರೀಮತಿ ರಶ್ಮಿ.ಪಿ ಅಲಿಯಾಸ್ ಲಕ್ಷ್ಮಿ ಆದ ನಾನು ಈ ಮೂಲಕ ದೃಢೀಕರಿಸುವುದೇನೆಂದರೆ, ಕೋರ್ಟ್‌ನ ಕೆಲವು ದಾಖಲೆಗಳಲ್ಲಿ ನನ್ನ ಹೆಸರು ಲಕ್ಷ್ಮಿ ಎಂದಿದ್ದು, ಇತರ ದಾಖಲೆಗಳಲ್ಲಿ ರಶ್ಮಿ.ಪಿ ಎಂದು ನಮೂದಾಗಿದ್ದು, **ಲಕ್ಷ್ಮಿ** ಮತ್ತು ರಶ್ಮಿ. ಪಿ. ಈ ಎರಡೂ ಹೆಸರುಗಳು ನನ್ನವೇ ಎಂದು ನೋಟರಿ ಪಿ.ಮಂಗಳರವರ ಸಮ್ಮುಖದಲ್ಲಿ ದಿ. 08.08.2022ರಂದು ಪ್ರಮಾಣೀಕರಿಸಿರುತ್ತೇನೆ.

ಸಹಿ/– ರಶ್ಮಿ .ಪಿ

IN THE HIGH COURT OF KARNATAKA AT BENGALURU

Notice to the Respondent No. 2
Vide Court Order dated 01-08-2022
Writ petition No. 9738/2016 (GM-CPC)

Sri Nanjunda Swamy
S/o Late Shivanna, R/At Nanjanyakanahalli Village, Kasaba Hobli, H.D.Kote, Mysore-560 008 ....Petitioner

V/S

Smt. Gowramma, W/o Late Basavegowda Alias Basavarajegowda, R/At Nanjanayakanahalli Village, Kasaba Hobli, H.D. Kote, Mysore-560 008 & another. ....Respondents

To Respondent No. 2
2) Sri Basavegowda, S/o Javaregowda, R/At Nanjanayakanahalli Village, Kasaba Hobli, H.D. Kote, Mysore-560 008

Whereas, the above mentioned Writ Petition filed by the above named petitionery under Article 227 of the Constitution of India, praying to set aside the order on LA.6, dated 01.02.2016 passed by the Civil Judge and JMFC at H.D. Kote in O.S. No. 216/2008, produced at Annexure-H, has been registered by this Court.

Notice is hereby given to you to appear in this Court either in person or through counsel duly instructed or through someone authorised by law, to act for you in the above Writ Petition on 05-09-2022 at 10.30 A.M in case you intend to contest the Writ Petition. If you fail to appear, the same will be dealt with, heard and decided in your absence.

Issued under my hand and the seal of this Court, on this the 1st day of August 2022.

By Order of the Court
Sd/- Assistant Registrar

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು

ಹುಲ್ಲಹಳ್ಳಿ ರಸ್ತೆ, ನಂಜನಗೂಡು.
ದೂರವಾಣಿ ಸಂ.08221–226309

ಸಂ.ಕೃಉಮಾಸ/ನಂ/151/2022–23 ದಿನಾಂಕ:08/08/2022

ಪ್ರಕಟಣೆ

ನಂಜನಗೂಡು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೆ// ಶ್ರೀ ಲಕ್ಷ್ಮೀ ದೇವಿ ಟ್ರೇಡರ್ಸ್, ಮಾಲೀಕರು.ದಿವಂಗತ ಶ್ರೀ ಪಿ.ಮಾದಪ್ಪ ಬಿನ್ ಲೇಟ್. ಪುಟ್ಟಸ್ವಾಮಿ, ಆರ್.ಪಿ.ರಸ್ತೆ, ನಂಜನಗೂಡು ಇವರ ಹೆಸರಿಗೆ ನಿವೇಶನ ಸಂಖ್ಯೆ: 36 ಅನ್ನು ಹಂಚಿಕೆ ಮಾಡಲಾಗಿರುತ್ತದೆ, ಸದರಿ ನಿವೇಶನದ ಮಾಲೀಕರಾದ ದಿವಂಗತ ಶ್ರೀ ಪಿ.ಮಾದಪ್ಪ ಇವರು ನಿಧನರಾದ ಪ್ರಯುಕ್ತ ಇವರ ಮಗನಾದ ಶ್ರೀ ಎಂ.ಪವನ್,ಮೆ//ಅಭಿ ಟ್ರೇಡರ್ ಆರ್.ಪಿ.ರಸ್ತೆ, ನಂಜನಗೂಡು ಇವರ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಪ್ರಯುಕ್ತ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ನಿವೇಶನ ಸಂಖ್ಯೆ: 36 ಅನ್ನು ಇವರ ಮಗನಾದ ಶ್ರೀ ಎಂ.ಪವನ್, ಮೆ//ಅಭಿ ಟ್ರೇಡರ್ಸ್, ಆರ್.ಪಿ ರಸ್ತೆ, ನಂಜನಗೂಡು ಇವರ ಹೆಸರಿಗೆ ವರ್ಗಾವಣೆ ಮಾಡಿಕೊಡುವ ಸಂಬಂಧ ಸಾರ್ವಜನಿಕರು ಅಥವಾ ಪೇಟೆಕಾರ್ಯಕರ್ತರು ಅಥವಾ ಸಂಬಂದಿಕರಿಂದ ಮತ್ತು ಯಾರಿಂದಲಾದರು ಏನಾದರು ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸದೊಳಗೆ ಈ ಕಛೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ನಿವೇಶನದ ಚೆಕ್ಕುಬಂದಿ ವಿವರ ಈ ಕೆಳಕಂಡಂತಿದೆ.

ಪೂರ್ವಕ್ಕೆ: ನಿವೇಶನ ಸಂಖ್ಯೆ–37 ಉತ್ತರಕೆ: ರಸ್ತೆ	ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 35 ದಕ್ಷಿಣಕ್ಕೆ: ಮುಚ್ಚು ಹರಾಜುಕಟ್ಟೆ

ಸಹಿ/–ಕಾರ್ಯದರ್ಶಿ, ಕೃಉಮಾಸ, ನಂಜನಗೂಡು
ಸಹಿ/–ಆಡಳಿತಾಧಿಕಾರಿಗಳು, ಕೃಉಮಾಸ, ನಂಜನಗೂಡು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಾಗಮಂಗಲ

ಸಂ/ಕೃಉಮಾಸ/ನಾ/ನಿವೇಶನ.ವಿ/76/ 2022–23
ದಿನಾಂಕ: 05.08.2022

ಸಂಕ್ಷಿಪ್ತ ಪ್ರಕಟಣೆ

ಇಲಾಖೆ/ಸಮಿತಿಯಿಂದ ಅಧಿಕೃತ ಲೈಸೆನ್ಸ್ ಪಡೆದ ಅರ್ಹ ಪೇಟೆ ಕಾರ್ಯಕರ್ತರುಗಳಿಗೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ 32 ಸಂಖ್ಯೆ ಸಾಮಾನ್ಯ ನಿವೇಶನಗಳನ್ನು ಆಸ್ತಿ ಹಂಚಿಕೆ ನಿಯಮ 2004ರನ್ವಯ ನಿವೇಶನ ದರ ಪ್ರತೀ ಚದುರಡಿಗೆ ರೂ.350–00ರಂತೆ ಹಂಚಿಕೆ ಮಾಡಲು ಅರ್ಹ ಪೇಟೆಕಾರ್ಯಕರ್ತರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿವೇಶನಗಳ ಸಂಖ್ಯೆ, ಮೀಸಲಾತಿ, ವಿಸ್ತೀರ್ಣ, ಮೌಲ್ಯ, ಆರಂಬಿಕ ಠೇವಣಿ & ಇತರೆ ವಿವರಗಳು.

ನಿವೇಶನಗಳ ಸಂಖ್ಯೆ 19,20,21,31,32,33,34,46,47,48,49,50,51,54,56 (30 x 50 ಚ.ಅಡಿ) 38,39,40,41,43 (30 x 42 ಚ.ಅಡಿ) ಒಟ್ಟು 20 ಸಂಖ್ಯೆ ನಿವೇಶನಗಳನ್ನು ಸಾಮಾನ್ಯ ವರ್ಗದವರಿಗೆ, ನಿವೇಶನ ಸಂಖ್ಯೆ 17,55 (30 x 50 ಚ.ಅಡಿ) & 42 (30 x 42ಚ.ಅಡಿ) ಮಹಿಳೆಯರಿಗೆ (ನಿ.ಸಂ.42ನ್ನು ಪ.ಜಾ.ಮ.ಗೆ ಮೀಸಲು), ನಿವೇಶನ ಸಂಖ್ಯೆ 14,18,35,57 (30 x 50 ಚ.ಅಡಿ) ಗಳನ್ನು ಪ.ಜಾ.ಯವರಿಗೆ ನಿವೇಶನ ಸಂಖ್ಯೆ 15 & 58ಗಳನ್ನು ಪ.ಪಂ.ದವರಿಗೆ ಹಾಗೂ ನಿವೇಶನ ಸಂಖ್ಯೆ 13,16,59ಗಳನ್ನು ರೈತ ಉತ್ಪಾದಕ ಸಂಸ್ಥೆಗಳಿಗೆ ಮೀಸಲಿರಿಸಲಾಗಿರುತ್ತದೆ. ಮೀಸಲಾತಿ ಕೋರುವವರು ಸಕ್ಷಮ ಪ್ರಾಧಿಕಾರದಿಂದ ಪಡೆದ ಅಧಿಕೃತ ಚಾಲ್ತಿ ದಾಖಲಾತಿಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸುವುದು. ಮೀಸಲಾತಿ ಕೋರಿ ಯಾವುದೇ ಅರ್ಜಿ ಬಾರದಿದ್ದಲ್ಲಿ ಮೀಸಲಿರಿಸಿರುವ ನಿವೇಶನಗಳ ಹಂಚಿಕೆಗೆ ಸಾಮಾನ್ಯ ವರ್ಗದವರನ್ನು ಪರಿಗಣಿಸಲಾಗುವುದು. ನಿವೇಶನದ ಮೌಲ್ಯ **ರೂ. 5,25,000/– (30 x 50 ಚ.ಅಡಿ ಅಳತೆಯ ಪ್ರತಿ ನಿವೇಶನಕ್ಕೆ)** & **ರೂ. 4,41,000/– (30 x 42 ಚ.ಅಡಿ ಅಳತೆಯ ಪ್ರತಿ ನಿವೇಶನಕ್ಕೆ) ದಿನಾಂಕ:05.08.2022ರಿಂದ** ನೋಂದಣಿ ಮಾಡಿಸಿ ಅರ್ಜಿ ಪಡೆದುಕೊಳ್ಳಬಹುದಾಗಿರುತ್ತದೆ & ನೋಂದಾಣಿ ಮಾಡಿಸಲು ಕೊನೆ **ದಿನಾಂಕ:22.08.2022** ಹಾಗೂ ಭರ್ತಿ ಮಾಡಿದ ಅರ್ಜಿಗಳನ್ನು ಶೇ.25ರ ಆರಂಬಿಕ ಠೇವಣಿಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಾಗಮಂಗಲ ಇವರ ಹೆಸರಿನಲ್ಲಿ ಡಿಡಿ ಮೂಲಕ ಸಲ್ಲಿಸಲು ಕೊನೆ ದಿನಾಂಕ:26.08.2022 ಸಂಜೆ 4:00 ಗಂಟೆ. **(30 x 50 ಚ.ಅಡಿ ಅಳತೆಯ ನಿವೇಶನಕ್ಕೆ ಶೇ.25ರ ಆರಂಬಿಕ ಠೇವಣಿ ರೂ. 1,32,000/–** ಹಾಗೂ 30 x 42 ಚ.ಅಡಿ ಅಳತೆಯ ನಿವೇಶನಕ್ಕೆ ಶೇ.25ರ ಆರಂಬಿಕ ಠೇವಣಿ **ರೂ. 1,11,000/–**) ರೈತ ಉತ್ಪಾದಕ ಸಂಸ್ಥೆಗಳಿಗೆ ಶೇ.50ರ ದರದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು. ಅರ್ಜಿ ಶುಲ್ಕ **ರೂ.1,000–00 & ನೋಂದಣಿ ಶುಲ್ಕ ರೂ.500–00.** ಷರತ್ತು & ನಿಬಂಧನೆ, ವಿವರವಾದ ಪ್ರಕಟಣೆ, ನಿವೇಶನಗಳನ್ನು ಗುರುತಿಸಿರುವ ನೀಲಿ ನಕ್ಷೆ ಹಾಗೂ ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ನಾಗಮಂಗಲ.
ಸಹಿ/–ಆಡಳಿತಾಧಿಕಾರಿಗಳು, ಕೃಉಮಾಸ, ನಾಗಮಂಗಲ.



ಕರ್ನಾಟಕ ಸರ್ಕಾರ
ವೈದ್ಯಕೀಯ ಅಧೀಕ್ಷಕರವರ ಕಾರ್ಯಾಲಯ
ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ,

ಕೆ.ಆರ್.ಎಸ್.ರಸ್ತೆ, ಮೈಸೂರು–570020 Phone:0821-2512298
Tele fax: 0821-2512473

ಸಂ:ಕಾರಾವಿ ಆ/ಅಭಿವೃದಿ/23/2022–23 ದಿನಾಂಕ:06.08.2022

ಟೆಂಡರ್ ಪ್ರಕಟಣೆ

ವಿಷಯ: ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಮೈಸೂರು ಹಾಗೂ ಇಲ್ಲಿಗೆ ಹೊಂದಿಕೊಂಡಿರುವ ಚಿಕಿತ್ಸಾಲಯಗಳಲ್ಲಿ ಉತ್ಪತ್ತಿಯಾಗುವ ಜೈವಿಕ ತ್ಯಾಜ್ಯಗಳ ಸಂಗ್ರಹಣೆ ಮತ್ತು ವಿಲೇವಾರಿ ಮಾಡಲು ಇ–ಟೆಂಡರ್ ಕರೆ ನೀಡುವ ಬಗ್ಗೆ.

ಅಂಗೀಕೃತ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಮಾನ್ಯತೆಯನ್ನು ಹೊಂದಿರುವ ಗುತ್ತಿಗೆದಾರರಿಂದ 2022–23ನೇ ಸಾಲಿಗೆ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ, ಮೈಸೂರು ಹಾಗೂ ಇಲ್ಲಿಗೆ ಹೊಂದಿಕೊಂಡಿರುವ 13 ಚಿಕಿತ್ಸಾಲಯಗಳಲ್ಲಿ ಉತ್ಪತ್ತಿಯಾಗುವ ದೈನಂದಿನ ಜೈವಿಕ ತ್ಯಾಜ್ಯಗಳ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯದ ಗುತ್ತಿಗೆಗಾಗಿ ಇ–ಟೆಂಡರು ಕರೆ ನೀಡಲಾಗಿದೆ. ಟೆಂಡರು ಸಲ್ಲಿಸಲು ಕಡೇ ದಿನಾಂಕ: 24.08.2022 ಟೆಂಡರು ತೆರೆಯುವ ದಿನಾಂಕ:26.08.2022. Website:https://eproc.karnataka.gov.in Helpdesk:0821-252473.

ಸಹಿ/–ವೈದ್ಯಕೀಯ ಅಧೀಕ್ಷಕರು, ಕಾ.ರಾ.ವಿ ಆಸ್ಪತ್ರೆ, ಮೈಸೂರು.

ವಾಸಾಸಂಇ/ಉನಿ–ಮೈ/ಎಂಸಿ&ಎ/ 348/2022–23

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ ನಂ. 1
ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ 13/2022–23 ದಿನಾಂಕ 06.08.2022

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ, ಗೊರೂರು ಹಾಸನ ಜಿಲ್ಲೆ, ಇವರಿಂದ ಕಾವೇರಿ ನೀರಾವರಿ ನಿಗಮದಲ್ಲಿ ನೋಂದಾಯಿತವಾಗಿರುವ ನಿಗಧಿತ ದರ್ಜೆಯ ಗುತ್ತಿಗೆದಾರರಿಂದ ಈ ಅಧಿಸೂಚನೆಯಲ್ಲಿ ತಿಳಿಸಿರುವಂತೆ ಒಟ್ಟು 3 ಕಾಮಗಾರಿಗೆ ಟೆಂಡರ್ ಅನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತ ರೂ. ಕನಿಷ್ಠ 16.40 ಗರಿಷ್ಠ 41.00 ಲಕ್ಷಗಳಾಗಿರುತ್ತದೆ. ಅರ್ಜಿ ಬೆಲೆ E-portal ನಂತೆ ಇರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅರ್ಹ ಗುತ್ತಿಗೆದಾರರು ಅಂತರ್ಜಾಲದಲ್ಲಿ ದಿನಾಂಕ 12–08–2022 ರಂದು ಬೆಳಗ್ಗೆ 11.00 ಗಂಟೆಯಿಂದ ದಿನಾಂಕ 23–08–2022 ರ ಮಧ್ಯಾಹ್ನ 4.00 ಗಂಟೆಯವರೆಗೆ ಟೆಂಡರ್‌ನ ನಿಗಧಿತ ನಮೂನೆಗಳನ್ನು WWW.eproc.karnataka.gov.in ನಲ್ಲಿ ಡೌನ್ ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ. ಯೊಂದಿಗೆ ಅಪ್ ಲೋಡ್ ಮಾಡಬಹುದಾಗಿದೆ. ಟೆಂಡರ್ ಅನ್ನು ದಿನಾಂಕ 24–08–2022 ರಂದು ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾ ವಿಭಾಗ,ಗೊರೂರು ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಹಾಗೂ ಇತರೆ ನಿಬಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಎಕ್ಸಿಕ್ಯೂಟಿವ್ ಇಂಜಿನಿಯರ್, ನಂ.1 ಹೇಮಾವತಿ ಬಲಮೇಲ್ದಂಡೆ ನಾಲಾವಿಭಾಗ, ಗೊರೂರು

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/398/2022–23

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ನಂ. ಮೈನಪಾ/ನಯೋಶಾ/ತಾಂ(1)ವ.ಕ.(5)/01–2022–23 ದಿನಾಂಕ: 30–07–22

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ, ದೇವರಾಜ ಮೊಹಲ್ಲಾ, ವಿಜಯನಗರ 2ನೇ ಹಂತ, ನಿವೇಶನ ಸಂಖ್ಯೆ: ಸಿ.ಎ.–06 ರಲ್ಲಿ ಹೊಸದಾಗಿ ಶೈಕ್ಷಣಿಕ ಕಟ್ಟಡವನ್ನು ನಿರ್ಮಿಸಲು ರಹದಾರಿ ಕೋರಿ ಅಧ್ಯಕ್ಷರು, ವಿದ್ಯಾವಿಕಾಸ್ ಎಜುಕೇಷನಲ್ ಟ್ರಸ್ಟ್ (ರಿ) ರವರು ಮೈಸೂರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ.

ಪ್ರಶ್ನಿತ ನಿವೇಶನವು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯಕ್ಕೆ ಭೂ ಉಪಯೋಗವನ್ನು ಕಾಯ್ದಿರಿಸಲಾಗಿದೆ. ಸದರಿ ನಿವೇಶನದ ಉತ್ತರಕ್ಕೆ 18.00 ಮೀ. ಹಾಗೂ ದಕ್ಷಿಣಕ್ಕೆ 18.00 ಮೀ. ಅಗಲದ ರಸ್ತೆಗಳಿಂದ ಸಂಪರ್ಕ ಹೊಂದಿದ್ದು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸದರಿ ನಾಗರೀಕ ಸೌಕರ್ಯ ನಿವೇಶನವನ್ನು ದಿನಾಂಕ: 06–08–2020 ರಂದು ಅಧ್ಯಕ್ಷರು, ವಿದ್ಯಾವಿಕಾಸ್ ಎಜುಕೇಶನಲ್ ಟ್ರಸ್ಟ್ (ರಿ) ರವರಿಗೆ ಸ್ವಾಧೀನ ಪತ್ರವನ್ನು ನೀಡಲಾಗಿರುತ್ತದೆ.

ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ವಲಯದಲ್ಲಿ ಶೈಕ್ಷಣಿಕ ಉದ್ದೇಶದ ಕಟ್ಟಡ ನಿರ್ಮಾಣ ಮಾಡಲು ವಲಯ ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಅರ್ಜಿದಾರರ ಕೋರಿಕೆಯಂತೆ ಸದರಿ ನಿವೇಶನದಲ್ಲಿ ಶೈಕ್ಷಣಿಕ ಉದ್ದೇಶದ ಕಟ್ಟಡ ನಿರ್ಮಿಸಲು ಯಾವುದೇ ಸಲಹೆ ಸೂಚನೆಗಳು / ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನದೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಿದೆ.

ಸಹಿ/– ಆಯುಕ್ತರು,
ಮೈಸೂರು ಮಹಾನಗರ ಪಾಲಿಕೆ, ಮೈಸೂರು